ಕರ್ನಾಟಕ ಸರ್ಕಾರ

ಬೆಂಗಳೂರು

# ಸಮಗ್ರ ಕೃಷಿ ವಾಣಿಜ್ಯ ಅಭಿವೃದ್ಧಿ ನೀತಿ 2011

ಕರ್ನಾಟಕ ಸರ್ಕಾರ

ಬೆಂಗಳೂರು

# ಪರಿವಿಡಿ


| ಕ್ರಮ ಸಂಖ್ಯೆ | | ಪುಟ ಸಂಖ್ಯೆ |
|---|---|---|
| | ಪ್ರಸ್ತಾವನೆ | 1 |
| 1 | ಪೀಠಿಕೆ | 2 - 3 |
| 2 | ಅವಕಾಶ ಮತ್ತು ವ್ಯಾಪ್ತಿ | 3 - 4 |
| 3 | ದೃಷ್ಟಿಕೋನ | 4 |
| 4 | ಉದ್ದೇಶ ಮತ್ತು ಕಾರ್ಯತಂತ್ರ | 4 - 9 |
| 5 | ಕರ್ನಾಟಕ ಕೃಷಿ ವಾಣಿಜ್ಯ ಅಭಿವೃದ್ಧಿ ನಿಗಮ (KABDC) | 9 |
| 6 | ಕೃಷಿ ಪರಿಕರ ವಲಯದ ಅಭಿವೃದ್ಧಿ | 9 - 10 |
| 7 | ಪ್ರಮುಖ ಉತ್ಪನ್ನಗಳ ಅಭಿವೃದ್ಧಿಗೆ ವಿಶೇಷ ಗಮನ | 10 |
| 8 | ಬ್ರಾಂಡ್ ಅಭಿವೃದ್ಧಿ | 10 |
| 9 | ಒಪ್ಪಂದ ಕೃಷಿ | 10 |
| 10 | ಕೃಷಿ, ಬೇಸಾಯ, ಹೈನುಗಾರಿಕೆ, ಕೋಳಿ ಸಾಕಾಣಿಕೆ, ಮೀನುಗಾರಿಕೆ, ರೇಷ್ಮೆ, ಜೇನು ಕೃಷಿ ಮತ್ತು ಪಶುಸಂಗೋಪನೆ | 11 - 12 |
| 11 | ಸಾವಯವ ಕೃಷಿ ಗುಂಪುಗಳು | 12 |
| 12 | ಕೃಷಿ – ತೋಟ – ಪಶು ಸಂಗೋಪನೆ – ಮೀನುಗಾರಿಕೆ – ಆಹಾರ ಸಂಸ್ಕರಣೆ ಕಾರಿಡಾರ್ | 12 - 13 |
| 13 | ಕೃಷಿ ಮೂಲಭೂತ ಸೌಕರ್ಯ | 13 - 15 |
| 14 | ಕೃಷಿ ಆಧಾರಿತ ಕೈಗಾರಿಕೆಗಳು | 15 - 23 |
| 15 | ಜ್ಞಾನ ಬೆಂಬಲ ಘಟಕ | 23 - 24 |
| 16 | ಮಾರುಕಟ್ಟೆ ಜ್ಞಾನ ಕೋಶ | 24 |
| 17 | ವಿಶೇಷ ಕೃಷಿ ಪ್ರವಾಸೋದ್ಯಮ ಬಂಡವಾಳ ವಲಯಗಳು | 24 - 25 |
| 18 | ಬಂಡವಾಳ ಹೂಡಿಕೆಗೆ ಉತ್ತೇಜನ | 25 |
| 19 | ಆರ್ಥಿಕ ಪ್ರೋತ್ಸಾಹಗಳು ಮತ್ತು ಸೌಲಭ್ಯಗಳು | 25 - 26 |
| 20 | ಕೃಷಿ ಆಧಾರಿತ ಕೈಗಾರಿಕೆಗಳಿಗೆ ಕೃಷಿಯ ಮೂಲಭೂತ ಯೋಜನೆಗೆ ಭೂಮಿ | 26 - 27 |
| 21 | ಕೃಷಿ ಆಧಾರಿತ ಕೈಗಾರಿಕೆಗಳಿಗೆ ಮತ್ತು ಕೃಷಿ ಸಂಬಂಧಿತ ಮೂಲಭೂತ ಸೌಕರ್ಯಗಳಿಗೆ ಬಂಡವಾಳ ಹೂಡಿಕೆ | 27 - 31 |
| 22 | ಜಾರಿತರುವ ದಿನಾಂಕ ಮತ್ತು ಮಾನ್ಯತೆ (ಎಫೆಕ್ಟೀವ್ ಡೇಟ್ ಎಂಡ್ ವ್ಯಾಲಿಡಿಟಿ) | 31 |
| 23 | ಉಪ–ವಲಯಗಳ ನೀತಿಗಳು | 31 - 32 |
| 24 | ಇತರ ಸಂಬಂಧಿತ ನೀತಿಗಳು | 32 |

# ಪ್ರಸ್ತಾವನೆ

ಕರ್ನಾಟಕ ರಾಜ್ಯವು, ಸಮಗ್ರ ಕೃಷಿ ವಾಣಿಜ್ಯ ಅಭಿವೃದ್ಧಿ ನೀತಿಯನ್ನು ಜಾರಿಗೊಳಿಸುವುದರ ಮೂಲಕ ಸುಸ್ಥಿರ ಕೃಷಿ ವಾಣಿಜ್ಯವನ್ನು ಬಲಪಡಿಸುವ ನಿಟ್ಟಿನಲ್ಲಿ ಮುಂದಾಳತ್ವ ವಹಿಸಿದೆ. ಕೃಷಿ ಮತ್ತು ಕೃಷಿ ಸಂಬಂಧಿತ ವಲಯಗಳಾದ ತೋಟಗಾರಿಕೆ, ಮೀನುಗಾರಿಕೆ, ಪಶುಸಂಗೋಪನೆ, ರೇಷ್ಮೆ ಕೃಷಿ ಮತ್ತು ಆಹಾರ ಸಂಸ್ಕರಣೆ ಮೊದಲಾದ ಕ್ಷೇತ್ರಗಳಲ್ಲಿ ಮೂಲಭೂತ ಸೌಕರ್ಯಗಳು ಮತ್ತು ಕೈಗಾರಿಕಾ ವಲಯಗಳಿಗೆ ಸಂಬಂಧಿಸಿದ ಅಂಶಗಳ ಬಗ್ಗೆ ಅಮೂಲಾಗ್ರವಾದ ಪರಿಕಲ್ಪನೆಯನ್ನು ಹೊಂದಿದೆ.

ಭಾರತೀಯ ಕೃಷಿಯು ಕ್ರಾಂತಿಕಾರಕ ಬದಲಾವಣೆಯ ಉತ್ತುಂಗದಲ್ಲಿದೆ. ಕಳೆದ ದಶಕದಲ್ಲಿ ಸೇವಾ ವಲಯಗಳಲ್ಲಿ ಆದಂತ ಅಸಾಧಾರಣ ಪ್ರಗತಿಯು ಭಾರತದ ಆರ್ಥಿಕ ಪ್ರಗತಿಯ ತ್ವರಿತಗತಿ ಮುನ್ನಡೆ ಸಾಧಿಸುವಲ್ಲಿ ಸಹಕಾರಿಯಾಗಿದೆ ಮತ್ತು ಕರ್ನಾಟಕ ರಾಜ್ಯವು ತಂತ್ರಜ್ಞಾನ ಕ್ರಾಂತಿಯ ಮಂಚೂಣಿಯಲ್ಲಿದೆ.

ಕೃಷಿ ಮತ್ತು ಸಂಬಂಧಿತ ವಲಯಗಳ ಮುಂದಿನ ಬೆಳವಣಿಗೆಯು ಜಾಗತಿಕ ಮಟ್ಟದಲ್ಲಾಗುವ ಸ್ಪರ್ಧಾತ್ಮಕ ಮತ್ತು ನವೀನ ತಂತ್ರಜ್ಞಾನದ ಮೇಲೆ ಅವಲಂಬಿತವಾಗಿದೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಹೊಸ ತಂತ್ರಜ್ಞಾನವು ರೈತರ ಜೀವನದಲ್ಲಿ ಹೆಚ್ಚಿನ ಸುಧಾರಣೆಯನ್ನು ತಂದಿದೆ. ಅಭಿವೃದ್ಧಿ ಹೊಂದಿದ ಹಾಗೂ ಹೊಂದುತ್ತಿರುವ ರಾಷ್ಟ್ರಗಳು ಇಂತ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಕೃಷಿ ವಲಯದಲ್ಲಿ ಸುಸ್ಥಿರ ಬೆಳವಣಿಗೆ ಹೊಂದಿ ಉತ್ತಮ ಫಲಿತಾಂಶ ಪಡೆದಿವೆ.

ಕರ್ನಾಟಕದಲ್ಲಿ ನಿಸರ್ಗದತ್ತವಾದ ವೈವಿದ್ಯತೆಯ ಹತ್ತು ಕೃಷಿ ಹವಾಮಾನ ವಲಯಗಳಿರುವುದರಿಂದ ಕೃಷಿ ಹಾಗೂ ಸಂಬಂಧಿತ ವಲಯಗಳಲ್ಲಿ ಬೆಳವಣಿಗೆಗೆ ಹೇರಳ ಅವಕಾಶಗಳಿವೆ. ಇದರಿಂದಾಗಿ ಕರ್ನಾಟಕ ಹೊಸ ಆವಿಷ್ಕಾರಗಳ, ಆಧುನಿಕ ಪದ್ಧತಿಗಳು ಹಾಗೂ ಇತರೆ ಎಲ್ಲಾ ಅವಕಾಶಗಳನ್ನು ಪಡೆದುಕೊಂಡು ಹೊಸ ಯೋಜನೆಗಳನ್ನು ಅಭಿವೃದ್ಧಿಪಡಿಸಿ ಬೆಳೆಯುತ್ತಿರುವ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಾರುಕಟ್ಟೆಯ ಬೇಡಿಕೆಯ ಅಗತ್ಯವನ್ನು ಪೂರೈಸುತ್ತಿದೆ. ಆದ್ಯತೆಯ ಮೇರೆಗೆ ಪರಿಗಣಿಸಬೇಕಾದ ಪ್ರಮುಖ ಕ್ಷೇತ್ರಗಳೆಂದರೆ ಉತ್ಪಾದನೆ ಮತ್ತು ಉತ್ಪಾದಕತೆಯಲ್ಲಿ ಸುಧಾರಣೆ, ಉತ್ಪಾದನೆ ವೆಚ್ಚ ಕಡಿಮೆ ಮಾಡುವುದು, ಉತ್ಪಾದನಾ ತ್ಯಾಜ್ಯ ಕಡಿಮೆ ಮಾಡುವುದು, ಮೌಲ್ಯವರ್ಧನೆ ಹೆಚ್ಚಳ, ದರ ಸ್ಥಿರತೆ, ಹೈ ಟೆಕ್ ಕೃಷಿ ತಂತ್ರಜ್ಞಾನದ ಅಳವಡಿಕೆ, ವಂಶವಾಹಿ ಮಾರ್ಪಡಿಸಿದ ತಳಿಗಳು, ಸೂಕ್ಷ್ಮ ಸಸ್ಯಾಭಿವೃದ್ಧಿ, ಸೂಕ್ಷ್ಮ ನೀರಾವರಿ/ರಸಾವರಿ, ಸಮಗ್ರ ಪೋಷಕಾಂಶಗಳ ನಿರ್ವಹಣೆ, ಸಾವಯವ ಕೃಷಿ, ಸಮಗ್ರ ಪೀಡೆ ನಿರ್ವಹಣೆ, ಸಂರಕ್ಷಿತ ಬೇಸಾಯ / ಹಸಿರುಮನೆ ತಂತ್ರಜ್ಞಾನ, ಕೊಯಿಲೋತ್ತರ ನಿರ್ವಹಣೆ, ದೇಶೀಯ ಪಶು ಸಂರಕ್ಷಣೆ ಮತ್ತು ಅಭಿವೃದ್ಧಿ, ಆರೋಗ್ಯಕರ ಮತ್ತು ಆಧುನಿಕ ಮೀನು ನಿರ್ವಹಣಾ ಸೌಲಭ್ಯಗಳು, ಕಸಾಯಿಖಾನೆ ಆಧುನೀಕರಣ, ಆಹಾರ ಸಂಸ್ಕರಣಾ ಘಟಕಗಳಲ್ಲಿ ಆಧುನಿಕ ತಂತ್ರಜ್ಞಾನ ಅಳವಡಿಕೆ, ರಫ್ತು ಮಾರುಕಟ್ಟೆಯಲ್ಲಿ ಹೆಚ್ಚಿನ ಲಾಭವನ್ನು ಗಳಿಸುವುದು ಇತ್ಯಾದಿ.

ಈ ಕೃಷಿ ವಾಣಿಜ್ಯ ನೀತಿಯು ಈ ಮೇಲೆ ತಿಳಿಸಿರುವ ಆದ್ಯತೆಯ ಕ್ಷೇತ್ರಗಳಿಗೆ ಬೇಕಾದಂತಹ ಬಂಡವಾಳ ಹೂಡಿಕೆ, ತಂತ್ರಜ್ಞಾನಗಳ ಕೌಶಲ್ಯತೆ ಹಾಗೂ ಆಧುನಿಕ ನಿರ್ವಹಣಾ ವಿಭಾಗಗಳ ಅಳವಡಿಕೆಗೆ ಸೂಕ್ತವಾದ ಒಂದು ಸಾಂಸ್ಥಿಕ ವ್ಯವಸ್ಥೆಯನ್ನು ಸ್ಥಾಪಿಸುವ ಗುರಿಯನ್ನು ಹೊಂದಿದೆ. ಈ ನೀತಿಯು ಆಂತರಿಕ ಹಾಗೂ ಅಂತರಾಷ್ಟ್ರೀಯ ಅವಶ್ಯಕತೆಗಳಿಗೆ ಪೂರೈಕೆಯ ವ್ಯವಸ್ಥೆಯನ್ನು ಹೊಂದಿಸುವುದು ಮತ್ತು ಮಾರುಕಟ್ಟೆಯ ಮಾಹಿತಿ ವ್ಯವಸ್ಥೆ ಮೂಲಕ ಮಾರುಕಟ್ಟೆ ಪ್ರವೇಶವನ್ನು ಸುಧಾರಿಸುವ ಉದ್ದೇಶವನ್ನು ಹೊಂದಿದೆ. ಅಲ್ಲದೇ ಕೃಷಿ ವಲಯದ ಅಭಿವೃದ್ಧಿಗೆ ಅಡಚಣೆಯಾಗಿರುವ ಕೆಲವು ಕಾನೂನು ತೊಡಕುಗಳನ್ನು ಪರಿಹರಿಸಲಾಗಿದೆ. ಇಳುವರಿ ಹೆಚ್ಚಿಸುವುದು, ಆಂತರಿಕ ಮಟ್ಟದಲ್ಲಿ ಗ್ರಾಹಕ ದರವನ್ನು ಕಡಿಮೆ ಮಾಡುವುದು, ವರ್ಗೀಕರಣ ಹಾಗೂ ಆಹಾರ ಸುರಕ್ಷತೆಯನ್ನು ಸುಧಾರಿಸುವುದು, ರಫ್ತು ಹೆಚ್ಚಿಸುವುದು, ಕೊಯ್ಲೋತ್ತರ ನಷ್ಟ ಕಡಿತಗೊಳಿಸುವುದು, ಸುಸ್ಥಿರ ಕೃಷಿ ಪದ್ಧತಿಗಳು ಮತ್ತು ತಂತ್ರಜ್ಞಾನ ನಾಟುವಂತೆ ಮಾಡುವುದಕ್ಕಾಗಿ ವಾಣಿಜ್ಯ ನೀತಿಯು ಒಂದು ಚೌಕಟ್ಟನ್ನು ದೊರಕಿಸಿಕೊಡಲು ಆಶಿಸುತ್ತದೆ. ಪ್ರಸಕ್ತ ತಂತ್ರಜ್ಞಾನದ ಅಳವಡಿಕೆ, ಉತ್ತಮ ಕಾರ್ಯ ನಿರ್ವಹಣೆ ಮತ್ತು ಉತ್ಪನ್ನಗಳನ್ನು ಅಂತರ ರಾಷ್ಟ್ರೀಯ ಮಾರುಕಟ್ಟೆಗೆ ಒಯ್ಯುವುದಷ್ಟೆ ಅಲ್ಲದೆ ಸರ್ಕಾರೇತರ ಸಂಸ್ಥೆಗಳಿಂದ ಹಣ ತೊಡಗಿಸಿ ಕೃಷಿ ಮಾರುಕಟ್ಟೆಗಳ ಮೂಲಭೂತ ಸೌಕರ್ಯ ಹಾಗೂ ಕೃಷಿ ಆಧಾರಿತ ಕೈಗಾರಿಕೆಗಳನ್ನು ಉತ್ತಮವಾಗಿ ಮತ್ತು ಪಾರದರ್ಶಕತೆಯಿಂದ ಅಭಿವೃದ್ಧಿಪಡಿಸಿ ಧೃಡವಾದ ಕೃಷಿ–ವಾಣಿಜ್ಯವನ್ನು ಕರ್ನಾಟಕದಲ್ಲಿ ವೃದ್ಧಿಸುವುದೇ ಈ ನೀತಿಯ ಮತ್ತೊಂದು ಉದ್ದೇಶ.

ಸಮಗ್ರ ಕರ್ನಾಟಕ ಕೃಷಿ ವಾಣಿಜ್ಯ ಅಭಿವೃದ್ಧಿ ನೀತಿ – 2011 ಅನ್ನು ಕರ್ನಾಟಕ ರಾಜ್ಯ ಸರ್ಕಾರ ಮತ್ತು ಭಾರತ ಸರ್ಕಾರ ಸಿದ್ಧಪಡಿಸಿರುವ ಇತರೆ ನೀತಿಗಳ ಜೊತೆಯಲ್ಲಿ ಪರಿಗಣಿಸಬೇಕು. ಕರ್ನಾಟಕ ರಾಜ್ಯ ಸರ್ಕಾರಕ್ಕೆ ಈ ನೀತಿ ಅತ್ಯಂತ ಅಗತ್ಯ ಮತ್ತು ಸಮಯೋಚಿತ. ಈ ನೀತಿಯು ಆದಾಯ ಹೆಚ್ಚಿಸುವುದಷ್ಟೆ ಅಲ್ಲದೇ ರಾಜ್ಯದ ತಲಾವಾರು ಸಮಗ್ರ ಆಂತರಿಕ ಉತ್ಪನ್ನ (ಜಿ.ಡಿ.ಪಿ) ಮತ್ತು ಮುಖ್ಯವಾಗಿ ಆಹಾರ ಭದ್ರತೆಯನ್ನು ಉತ್ತಮಪಡಿಸುವುದಕ್ಕೆ ಆದ್ಯತೆ ನೀಡುವಲ್ಲಿ ಅತ್ಯಂತ ಅಗತ್ಯ ಮತ್ತು ಸಮಯೋಚಿತವಾಗಿದೆ.

# 1. ಪೀಠಿಕೆ

1.1 ಕರ್ನಾಟಕ ಸರ್ಕಾರವು, ರಾಜ್ಯದ ಸಮಗ್ರ ಆಂತರಿಕ ಉತ್ಪನ್ನದ ಬೆಳವಣಿಗೆ ಹೆಚ್ಚಿಸಲು, ರೈತರು ಹೆಚ್ಚಿನ ಆದಾಯ ಪಡೆಯಲು ಹಾಗೂ ಆಹಾರ ಭದ್ರತೆಯನ್ನು ನಿಶ್ಚಿತಗೊಳಿಸಲು ಕೃಷಿ ಹಾಗೂ ಕೃಷಿ ಸಂಬಂಧಿತ ವಲಯಗಳ ಹೆಚ್ಚಿನ ಅಭಿವೃದ್ಧಿ ಅತ್ಯಗತ್ಯವೆಂದು ಪರಿಗಣಿಸುತ್ತದೆ. ಕರ್ನಾಟಕವು ಹತ್ತು ಕೃಷಿ ಹವಾಮಾನ ವಲಯಗಳನ್ನುಹೊಂದಿದ್ದು, ಹೆಚ್ಚಿನ ಜೈವಿಕ ವೈವಿಧ್ಯತೆಯಿಂದ ಕೂಡಿದ್ದು, ಪ್ರಮುಖವಾಗಿ ಕೃಷಿ ಮತ್ತು ತೋಟಗಾರಿಕೆ ಬೆಳೆಗೆ ಅನುಕೂಲಕರವಾಗಿರುವುದಲ್ಲದೇ ಮೀನುಗಾರಿಕೆಗೆ ಪೂರಕವಾದ ಉದ್ದನೆಯ ಕರಾವಳಿ ಪ್ರದೇಶ ಹೊಂದಿರುತ್ತದೆ. ರಾಷ್ಟ್ರದ ಒಟ್ಟು ಕೃಷಿ ಹಾಗೂ ತೋಟಗಾರಿಕೆ ಉತ್ಪಾದನೆಯಲ್ಲಿ ರಾಜ್ಯದ ಪಾಲು ಕೃಷಿಯಲ್ಲಿ ಶೇಖಡ 7 ಹಾಗೂ ತೋಟಗಾರಿಕೆಯಲ್ಲಿ ಶೇಖಡ 15 ರಷ್ಟಿರುತ್ತದೆ. ರಾಷ್ಟ್ರದ ಹಣ್ಣು ಮತ್ತು ತರಕಾರಿಗಳ ಉತ್ಪಾದನೆಯಲ್ಲಿ ರಾಜ್ಯದ ಪಾಲು ಶೇಖಡ 10 ರಷ್ಟಿರುತ್ತದೆ. ವಾಣಿಜ್ಯ ಬೆಳೆಗಳಾದ ಕಾಫಿ, ತೆಂಗು, ಸಾಂಬಾರು ಪದಾರ್ಥಗಳು, ಪುಷ್ಪಗಳು, ಸುಗಂಧ ಬೆಳೆಗಳು, ಹತ್ತಿ, ಕಬ್ಬು, ಎಣ್ಣೆ ಕಾಳು, ದ್ರಾಕ್ಷಿ, ದಾಳಿಂಬೆ ಹಾಗೂ ಸಪೋಟ ಮುಂತಾದವುಗಳನ್ನು ಬೆಳೆಯಲು ಸರಿಹೊಂದುವಂತಹ ಉತ್ತಮ ಹವಾಮಾನವನ್ನು ರಾಜ್ಯವು ಹೊಂದಿರುತ್ತದೆ.

1.2 ರಾಜ್ಯದಲ್ಲಿ ಉತ್ತಮ ನೈಸರ್ಗಿಕ ಸಂಪನ್ಮೂಲಗಳಿದ್ದರೂ ಕೃಷಿ ಮತ್ತು ಸಂಬಂಧಿತ ವಲಯಗಳ ಬೆಳವಣಿಗೆ ಮಂದಗತಿಯಲ್ಲಿದ್ದು ಏರುಪೇರಾಗಿರುತ್ತದೆ. ಆದಾಗ್ಯೂ ಕೃಷಿಯು ಶೇಖಡ 65 ರಷ್ಟು ಜನ ಸಂಖ್ಯೆಗೆ ಆಧಾರವಾಗಿರುತ್ತದೆ, ಆದರೆ ಕೃಷಿ ಮತ್ತು ಸಂಬಂಧಿತ ವಲಯಗಳ ಕೊಡುಗೆ ರಾಜ್ಯದ ಸಮಗ್ರ ಆಂತರಿಕ ಉತ್ಪನ್ನದಲ್ಲಿ ತೀವ್ರ ಕಡಿಮೆಯಾಗುತ್ತಿದೆ. ಈ ವಲಯ ಎದುರಿಸುತ್ತಿರುವ ಕೆಲವು ಸಮಸ್ಯೆಗಳೆಂದರೆ:–

1.2.1 ಪೂರೈಕೆ ನಿರ್ವಹಣೆಯ ವಿಷಯಗಳು : ಲಾಭದಾಯಕವಲ್ಲದ ಕಾರ್ಯಚಟುವಟಿಕೆ, ಸರಬರಾಜು ಮತ್ತು ಗುಣಮಟ್ಟದಲ್ಲಿ ಸ್ಥಿರತೆಯ ಕೊರತೆ, ವೆಚ್ಚ ಸ್ಪರ್ಧಾತ್ಮಕತೆ ಕೊರತೆ, ಶೇಕರಣೆ ಮತ್ತು ವಿತರಣಾ ಮೂಲಭೂತ ಸೌಕರ್ಯಗಳ ಅಸಮರ್ಪಕತೆ ಮತ್ತು ಕೊರತೆ, ವಲಯಕ್ಕೆ ತಾಂತ್ರಿಕ ಬೆಂಬಲದ ಕೊರತೆ, ಇತ್ಯಾದಿ.

1.2.2 ತಂತ್ರಜ್ಞಾನದ ಅಡಚಣೆಗಳು : ಸಣ್ಣ ಮತ್ತು ನೀರಾವರಿ ಸೌಲಭ್ಯವಿಲ್ಲದ ಭೂಮಿ, ಉತ್ಪಾದಕತೆ ಕಡಿಮೆಯಾಗಿರುವ ತೋಟಗಳ ಬದಲೀಕರಣ / ಪುನಶ್ಚೇತನ, ಗುಣ ಮಟ್ಟದ ಕೊರತೆ ಇರುವ ವಂಶವಾಹಿಗಳ ಬಳಕೆಯಿಂದ ಕಡಿಮೆ ಉತ್ಪಾದನೆ, ಸುಧಾರಿತ ತಳಿಗಳ ಉತ್ತಮ ಗುಣಮಟ್ಟದ ಪೂರೈಕೆ ಕೊರತೆ, ಕೀಟ ಹಾಗೂ ರೋಗಗಳ ಅತೀವ ಭಾದೆ, ಹೆಚ್ಚಿನ ಪ್ರಮಾಣದಲ್ಲಿ ಕೊಯಿಲೋತ್ತರದ ನಷ್ಟ, ವಿವಿಧ ಪಶುಸಂಗೋಪನೆ ತಳಿಗಳ ಕ್ಷೀಣಿಸುವಿಕೆ, ಜೀವನೋಪಾಯಕ್ಕಾಗಿ ಮಾತ್ರ ಪಶುಸಂಗೋಪನೆಯನ್ನು ಪರಿಗಣಿಸಿರುವುದು, ಹಾಲು ಮತ್ತು ಹಾಲಿನ ಉತ್ಪನ್ನಗಳ ಅಸಮರ್ಪಕ ನಿರ್ವಹಣೆಯಿಂದ ಅವುಗಳ ಗುಣಮಟ್ಟ ಕಡಿಮೆಯಾಗುತ್ತಿರುವುದು, ಕಸಾಯಿಖಾನೆಗಳಲ್ಲಿನ ಅನಾರೋಗ್ಯಕರ ವ್ಯವಸ್ಥೆ ಮತ್ತು ಪದ್ಧತಿಗಳು, ಮೀನುಗಾರಿಕೆ ನಿರ್ವಹಣೆಯಲ್ಲಿನ ಸೌಲಭ್ಯಗಳ ಕೊರತೆ, ಇತ್ಯಾದಿ.

1.2.3 ರಫ್ತು ಮಾಡಲು ಇರುವ ಅಡಚಣೆಗಳು : ರಫ್ತು ಯೋಗ್ಯ ತಳಿಗಳ ಕೊರತೆ, ಕೊಯಿಲೋತ್ತರದ ಮೂಲಭೂತ ಸೌಕರ್ಯಗಳ ಕೊರತೆ ಹಾಗೂ ರಫ್ತು ಪ್ರಮಾಣ ಪತ್ರ ಪಡೆಯಲು ಇರುವ ದುಬಾರಿ ವೆಚ್ಚ ಇತ್ಯಾದಿ.

1.3 ಈ ಸಮಸ್ಯೆಗಳನ್ನು ಸರಿಪಡಿಸಲು ಕೃಷಿ ವಲಯದಲ್ಲಿ ತಂತ್ರಜ್ಞಾನ, ಮಾರುಕಟ್ಟೆ, ಸಂಸ್ಥೆಗಳು ಮತ್ತು ನೀತಿಗಳಲ್ಲಿ ಸಾಕಷ್ಟು ಬದಲಾವಣೆಗಳು ಆಗಬೇಕಿವೆ. ಹೊಸ ಮತ್ತು ಸಮರ್ಪಕ ತಂತ್ರಜ್ಞಾನವನ್ನು ಕೃಷಿಯಲ್ಲಿ ಮತ್ತು ಕೊಯಿಲಿನೋತ್ತರ ಹಂತದಲ್ಲಿ ಅಳವಡಿಸಿದರೆ ನೇರವಾಗಿ ಉತ್ಪಾದನೆ ಹೆಚ್ಚಿಸುವುದಲ್ಲದೇ ಉತ್ತಮ ಮೌಲ್ಯವರ್ಧನೆಗೆ ಅನುಕೂಲವಾಗುತ್ತದೆ. ಸಮರ್ಥ ಮಾರಾಟ ವ್ಯವಸ್ಥೆಗಳಿಂದ ಹೆಚ್ಚು ಮೌಲ್ಯವನ್ನು ಪಡೆಯಬಹುದು. ಸಮಂಜಸವಾದ ಸಾಂಸ್ಥಿಕ ವ್ಯವಸ್ಥೆಯು ಉತ್ಪಾದಕತೆ ಹೆಚ್ಚಿಸಲು ಉತ್ತಮವಾದ ಧಾರಣೆ ಪಡೆಯಲು ಮತ್ತು ಉತ್ತಮ ಮೌಲ್ಯವರ್ಧನೆಗೆ ಸಹಾಯಕವಾಗುತ್ತದೆ.

1.4 ಸಂಶೋಧನೆ ವಿಧಾನ ಮತ್ತು ವಿಷಯಗಳಲ್ಲಿ ಬದಲಾವಣೆ ಅಗತ್ಯವಾಗಿದ್ದು ಇದನ್ನು ಖಾಸಗಿ ವಲಯಗಳ ಸಹಭಾಗಿತ್ವದಲ್ಲಿ ಕೈಗೆತ್ತಿಕೊಳ್ಳಬೇಕಾದ ಅವಶ್ಯಕತೆಯಿದೆ. ವಿವಿಧ ಕೃಷಿ ಪರಿಸರ ಹಾಗೂ ಸೂಕ್ಷ್ಮ ಪರಿಸ್ಥಿತಿಗಳಿಗೆ ಹೊಂದಿಕೊಳ್ಳುವಂತಹ ಸುಧಾರಿತ ಹಾಗೂ ಸಂಕರಣ ತಳಿಗಳ ಅಭಿವೃದ್ಧಿ, ಸಂಕರಣ ತಳಿಗಳ ಉತ್ಪಾದನೆ, ಸುಸ್ಥಿರವಾದ ಬೆಳೆಗಳ ಉತ್ಪಾದನೆ ಮತ್ತು ಸಂರಕ್ಷತೆ ತಂತ್ರಜ್ಞಾನ, ಸಸ್ಯಗಳು, ಕೀಟ ಹಾಗೂ ಇತರೆ ಅಕಶೇರುಕ, ವಂಶವಾಹಿ ಸಂಪನ್ಮೂಲಗಳ ಸಂರಕ್ಷಣೆ ಹಾಗೂ ಸುಸ್ಥಿರ ಬಳಕೆ, ಕೃಷಿಗೆ ಪ್ರಾಮುಖ್ಯವಾದ ಸೂಕ್ಷ್ಮಾಣುಜೀವಿಗಳು, ವಂಶವಾಹಿಗಳ ಪ್ರತೀಕ್ಷೆ, ಹಸಿರು ಮನೆಯಲ್ಲಿ ಹೂವು ಮತ್ತು ತರಕಾರಿಗಳ ಉತ್ಪಾದನೆ, ಪಶು ಮತ್ತು ಪ್ರಾಣಿ ವಿಜ್ಞಾನ, ಹೈನು ವಿಜ್ಞಾನ, ಮೀನು ವಿಜ್ಞಾನಗಳಲ್ಲಿ ಸಂಶೋಧನೆಯ ಅವಶ್ಯಕತೆ ಇದೆ. ಮೌಲ್ಯವರ್ಧನೆಗಾಗಿ ತಂತ್ರಜ್ಞಾನದ ಅಭಿವೃದ್ಧಿ ಹಾಗೂ ಸುಧಾರಣೆ, ಕುಕ್ಕಟ ಉತ್ಪನ್ನಗಳ ಸಂಗ್ರಹಣಾ ಸಾಮರ್ಥ ಹೆಚ್ಚಿಸುವಿಕೆ ಹಾಗೂ ಗುಣಮಟ್ಟ ಕಾಪಾಡುವಿಕೆ ವಿವಿಧ ಆಹಾರ ಸಂಸ್ಕರಣೆ, ಮೌಲ್ಯವರ್ಧನೆ ಹಾಗೂ ರಫ್ತಿನ ಕ್ಷೇತ್ರಗಳಲ್ಲಿ ಉನ್ನತ ತಂತ್ರಜ್ಞಾನದ ಅಳವಡಿಸುವ ಅವಶ್ಯಕತೆ ಇದೆ. ಆದಾಗ್ಯೂ ಖಾಸಗಿ ವಲಯ, ರೈತರು ಹಾಗೂ ಸ್ಥಳೀಯ

ಉದ್ಯಮಿಗಳ ಸಾಮೂಹಿಕ ಭಾಗವಹಿಸುವಿಕೆಗೆ ಪೂರಕವಾದ ವಾತಾವರಣ ನಿರ್ಮಾಣ ಮಾಡುವ ಅವಶ್ಯಕತೆ ಇದೆ.

1.5 ಇದಕ್ಕಾಗಿ ಹೆಚ್ಚು ಬಂಡವಾಳ ತೊಡಗಿಸುವ ಅವಶ್ಯಕತೆ ಇದೆ. ಕೃಷಿ ಉತ್ಪನ್ನಗಳ ಪೂರೈಕೆಯ ವ್ಯವಸ್ಥೆಯಲ್ಲಿ ಸುಧಾರಣೆ ತರುವುದು, ಉನ್ನತ ತಂತ್ರಜ್ಞಾನವನ್ನು ಅಳವಡಿಸುವುದು, ಕೃಷಿ ಉದ್ದಿಮೆ ಪ್ರತಿ ಹಂತದಲ್ಲೂ ಉತ್ತಮ ಪದ್ಧತಿಯನ್ನು ಪ್ರೋತ್ಸಾಹಿಸುವುದು, ಇದರಿಂದಾಗಿ ಒಟ್ಟಾರೆ ವಹಿವಾಟು ವೆಚ್ಚ ಕಡಿಮೆಯಾಗಿ ರೈತರಿಗೆ ಹೆಚ್ಚು ಆದಾಯ ಪಡೆಯಲು ಸಹಾಯಕವಾಗುತ್ತದೆ.

1.6 ಜಾಗತೀಕರಣದಿಂದ ಉಂಟಾದಂತಹ ಬೆಳವಣಿಗೆಗಳಿಂದ ಹಾಗೂ ಸ್ಥಳೀಯವಾಗಿ ಲಭ್ಯವಾಗಿರುವ / ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ಬೆಳವಣಿಗೆಯನ್ನು ಹೆಚ್ಚಿಸಲು ಪೂರಕವಾದ ವ್ಯವಸ್ಥೆಯನ್ನು ರೂಪಿಸುವ ಅವಶ್ಯಕತೆ ಇದೆ. ಈ ದಿಸೆಯಲ್ಲಿ ಸಮಗ್ರ ಕೃಷಿ ವಾಣಿಜ್ಯ ಅಭಿವೃದ್ಧಿ ನೀತಿ 2011 ಯನ್ನು ತರಲಾಗಿದ್ದು ಇದರಿಂದ ಕೃಷಿ ಹಾಗೂ ಸಂಬಂಧಿತ ವಲಯಗಳ ಬೆಳವಣಿಗೆ ಸಂಬಂಧ ಇರುವ ಸಮಸ್ಯೆಗಳನ್ನು ಬಗೆಹರಿಸುವ ಬಗ್ಗೆ ಗಮನ ನೀಡಲಾಗಿದೆ. ಇದರಲ್ಲಿ ಮುಖ್ಯವಾಗಿ ಉತ್ಪಾದಕತೆ ಸುಧಾರಣೆ, ಕೊಯಿಲಿನೋತ್ತರ ನಷ್ಟ ಕಡಿಮೆ ಮಾಡುವುದು, ಕೊಯಿಲಿನೋತ್ತರ ಸಂಸ್ಕರಣೆ ಹಾಗೂ ಮೌಲ್ಯವರ್ಧನೆ ಹೆಚ್ಚಿಸುವುದು ಸೇರುತ್ತವೆ. ಈ ನೀತಿಯಲ್ಲಿ ಪಶುಸಂಗೋಪನೆ ಹಾಗೂ ಹೈನುಗಾರಿಕೆಗಳಲ್ಲಿ ಆದಾಯ, ಗ್ರಾಮೀಣ ಉದ್ಯೋಗ ಹೆಚ್ಚಿಸುವುದು, ಆಹಾರದಲ್ಲಿ ಪ್ರಾಣಿಜನ್ಯ ಸಸಾರಜನಕ ಲಭ್ಯತೆ ಹೆಚ್ಚಿಸುವುದು ಹಾಗೂ ನಿಗದಿತ ಮಾರುಕಟ್ಟೆಗಳಿಗೆ ರಫ್ತು ಹೆಚ್ಚಿಸುವುದು ಇವುಗಳಿಗೆ ಒತ್ತು ನೀಡಲಾಗಿದೆ. ಕರ್ನಾಟಕದ ಹೇರಳ ಮೀನುಗಾರಿಕೆ ಸಂಪನ್ಮೂಲಗಳು ಸುಸ್ಥಿರವಾದ ಅಭಿವೃದ್ಧಿಗೆ ಪೂರಕವಾದ ಸಾಮರ್ಥ್ಯ ಹೊಂದಿರುತ್ತವೆ. ಕರಾವಳಿ ಪ್ರದೇಶದ ಸಂಪನ್ಮೂಲ ಬಳಸಿಕೊಂಡು ಮೀನಿನ ಉತ್ಪಾದನೆ ಹೆಚ್ಚಿಸುವುದು ಮತ್ತು ಮೀನುಗಾರರ ಜೀವನಮಟ್ಟ ಸುಧಾರಣೆ ಮಾಡುವುದು ಮುಖ್ಯ ಉದ್ದೇಶವಾಗಿರುತ್ತದೆ.

1.7 ಹಾಗಾಗಿ ಈ ನೀತಿಯು ಕೃಷಿ, ತೋಟಗಾರಿಕೆ, ಕೃಷಿ ಅರಣ್ಯ, ಹೈನುಗಾರಿಕೆ, ಪಶುಸಂಗೋಪನೆ, ಮೀನುಗಾರಿಕೆ, ರೇಷ್ಮೆ, ಜೇನು ಕೃಷಿ, ಆಹಾರ ಸಂಸ್ಕರಣೆ ಹಾಗೂ ಸಂಬಂಧಪಟ್ಟ ಉದ್ದಿಮೆಗಳ ವಲಯಗಳ ಸಮಗ್ರ ಹಾಗೂ ಸುಸ್ಥಿರ ಬೆಳವಣಿಗೆಗೆ ಪೂರಕವಾಗಿರುತ್ತದೆ. ಖಾಸಗಿ ವಲಯದ ಪರಿಣಿತಿಯ ಅವಕಾಶವನ್ನು ಉಪಯೋಗಿಸಿಕೊಳ್ಳಲು ಸಾರ್ವಜನಿಕ ಹಾಗೂ ಖಾಸಗಿ ಸಹಭಾಗಿತ್ವದ ಮೂಲಕ ಕೃಷಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿಯಾಗಿ ಕೃಷಿ ವ್ಯಾಪಾರದಲ್ಲಿ ವ್ಯವಸ್ಥಿತ ಹಾಗೂ ವಿಭಿನ್ನವಾದ ಪದ್ಧತಿಗಳನ್ನು ಅಳವಡಿಸಲು ಹೆಚ್ಚಿನ ಅವಕಾಶ ಕಲ್ಪಿಸಲಾಗಿದೆ. ಈ ನೀತಿಯು ಕೃಷಿ ಹಾಗೂ ಸಂಬಂಧಿತ ವಲಯಗಳಲ್ಲಿ ತಂತ್ರಜ್ಞಾನ ಆಧಾರಿತ ಬೆಳವಣಿಗೆಗೆ ಪೂರಕವಾಗಿದೆ. ಈ ಬೆಳವಣಿಗೆಯು ಕೌಶಲ್ಯ ಅಭಿವೃದ್ಧಿ, ಜ್ಞಾನ ಪ್ರಸಾರ, ಕೃಷಿ ಕ್ಷೇತ್ರಕ್ಕೆ ಮಾಹಿತಿ ತಂತ್ರಜ್ಞಾನವನ್ನು ಅಳವಡಿಸುವ ಹಾಗೂ ನವೀಕೃತ ಮಾದರಿಗಳ ಮೂಲಕ ಸೇವಾ ಗುಣಮಟ್ಟವನ್ನು ಹೆಚ್ಚಿಸುವ ಆಧಾರವನ್ನು ಹೊಂದಿರುತ್ತದೆ.

1.8 ರಾಜ್ಯ ಸರ್ಕಾರ ಸಮಗ್ರ ಕೃಷಿ ವಾಣಿಜ್ಯ ಬೆಳವಣಿಗೆ ನೀತಿ 2011 ಸೂಕ್ತ ಸಮಯದಲ್ಲಿ ರೈತರ ಹಾಗೂ ಗ್ರಾಮೀಣ ಸಮುದಾಯಗಳ ಸಾಮರ್ಥ್ಯ ಹಾಗೂ ಆದಾಯ ಹೆಚ್ಚಿಸಿ ತನ್ಮೂಲಕ ಉತ್ತಮ ಕೊಡುಗೆಯನ್ನು ನೀಡುವ ಉದ್ದೇಶವಿದೆ. ಈ ಮೂಲಕ ದೇಶದಲ್ಲಿ ಪೌಷ್ಠಿಕ ಆಹಾರ ಭದ್ರತೆ ಅಲ್ಲದೇ ರಾಜ್ಯದ ಉತ್ಪನ್ನಗಳನ್ನು ಜಾಗತಿಕ ಮಟ್ಟದಲ್ಲಿ ಮೇಲ್ಪಂಕ್ತಿಯಲ್ಲಿಡಲು ಸಹಾಯವಾಗುತ್ತದೆ. ಈ ನೀತಿಯು ಸಣ್ಣ ಮತ್ತು ಅತಿ ಸಣ್ಣ ರೈತರು, ಸ್ವಸಹಾಯ ಗುಂಪುಗಳು, ಮೀನುಗಾರರು, ಗ್ರಾಮೀಣ ಕಾರ್ಮಿಕರು ಹಾಗೂ ಇತರೆ ಉತ್ಪಾದಕರಿಗೆ ಪ್ರಯೋಜನಕಾರಿಯಾಗಿದೆ ಹಾಗೂ ಸಣ್ಣ ಮತ್ತು ಮಧ್ಯಮ ಉದ್ದಿಮೆದಾರರ ಸ್ಪರ್ಧಾ ಸಾಮರ್ಥ್ಯವನ್ನು ಹೆಚ್ಚಿಸಿ ಉತ್ತಮ ಲಾಭ ಪಡೆಯಲು ಸಹಾಯಕವಾಗುತ್ತದೆ, ಅಲ್ಲದೇ ಹೆಚ್ಚಿನ ಪ್ರಮಾಣದ ಬಂಡವಾಳ ಹೂಡಿಕೆಗೆ ಮತ್ತು ರಫ್ತು ಮಾರುಕಟ್ಟೆಗೆ ತಮ್ಮ ಉತ್ಪನ್ನಗಳನ್ನು ಕಳುಹಿಸಲು ಮಾರ್ಗಗಳನ್ನು ಮಾಡಿಕೊಡಲು ಸಾಧ್ಯವಾಗುತ್ತದೆ.

## 2 ಅವಕಾಶ ಮತ್ತು ವ್ಯಾಪ್ತಿ

2.1 ಈ ನೀತಿಯಲ್ಲಿ 'ಕೃಷಿ ಮತ್ತು ಸಂಬಂಧಿತ ವಲಯಗಳು' ಎನ್ನುವ ಪದದಲ್ಲಿ **ಕೃಷಿ, ತೋಟಗಾರಿಕೆ, ಕೃಷಿ ಅರಣ್ಯ, ಪಶು ಸಂಗೋಪನೆ, ಮೀನುಗಾರಿಕೆ, ರೇಷ್ಮೆ ಕೃಷಿ, ಜೇನು ಕೃಷಿ ಮತ್ತು ಆಹಾರ ಸಂಸ್ಕರಣಾ ವಲಯಗಳಲ್ಲಿ ಮೂಲಭೂತ ಸೌಕರ್ಯಗಳು ಮತ್ತು 'ಕೈಗಾರಿಕಾ ಘಟಕಗಳು' ಎಂಬ ಎರಡು ಅಂಶಗಳನ್ನು ಒಳಗೊಂಡಿರುತ್ತದೆ.**

2.2 **ಕೃಷಿ ಮೂಲಭೂತ ಸೌಕರ್ಯ"**ಎಂದರೆ ಹೊಸ ಕೈಗಾರಿಕೆಯ ಸ್ಥಾಪನೆ / ಪ್ರಸ್ತುತ ಇರುವ ಸೌಲಭ್ಯಗಳ ಆಧುನೀಕರಣ, ಕೊಯಿಲೋತ್ತರ ಮೂಲಭೂತ ಸೌಕರ್ಯ, ಸಂಗ್ರಹಣಾ ಕೇಂದ್ರ, ಸಂಚಾರಿ ಸಂಸ್ಕರಣಾ ಘಟಕಗಳು, ಶೀತಲ ಸರಪಳಿ, ನಿಯಂತ್ರಿತ ವಾತಾವರಣ ಶೇಖರಣೆ, ಬದಲಿಸಿದ ವಾತಾವರಣದ ಶೇಖರಣೆ, ಆಧುನಿಕ ಉತ್ಪನ್ನ ಶೇಖರಣಾ ಸಮುಚ್ಚಯಗಳು ಹಾಗೂ ಸೈಲೋಸ್, ವರ್ಗೀಕರಣ ಮತ್ತು ಪ್ಯಾಕಿಂಗ್ ಸ್ಥಳ, ಶೀತಲ ಸಾಗಣೆ, ಉಗ್ರಾಣ, ಸಾಮಾನ್ಯ ಸೇವಾ ಕೇಂದ್ರಗಳು, ಪ್ರಾಥಮಿಕ ಸಂಸ್ಕರಣಾ ಕೇಂದ್ರಗಳು, ಸಾಮಾನ್ಯ ಸಂಸ್ಕರಣಾ

ಸಮುಚ್ಚಯಗಳು, ಸಾಮಾನ್ಯ ಮೌಲ್ಯವರ್ಧನಾ ಕೇಂದ್ರಗಳು, ಕೃಷಿ ಚಿಕಿತ್ಸಾಲಯಗಳು, ಉತ್ಪನ್ನ ಪ್ರಮಾಣೀಕರಿಸುವ ಕೇಂದ್ರಗಳು, ಶೀಘ್ರ ನಶಿಸುವ ಉತ್ಪನ್ನಗಳಿಗೆ ವಿಮಾನ ಸಾಗಾಣಿಕಾ ಸಂಕೀರ್ಣ, ಆಧುನಿಕ ಟರ್ಮಿನಲ್ ಮಾರುಕಟ್ಟೆಗಳು, ಕೃಷಿ ಶಿಕ್ಷಣ ಸಮುಚ್ಚಯ, ಸಂಶೋಧನೆ ಮತ್ತು ಅಭಿವೃದ್ಧಿಗೆ ಪೂರಕವಾದ ಅತ್ಯುನ್ನತ ಮಟ್ಟದ ಕೇಂದ್ರಗಳು, ಕೃಷಿ–ತೋಟಗಾರಿಕೆ–ಪಶುಸಂಗೋಪನೆ–ಮೀನುಗಾರಿಕೆ, ಆಹಾರ ಸಂಸ್ಕರಣಾ ಕಾರಿಡಾರ್, ಕೃಷಿ ವಾಣಿಜ್ಯ ಹೂಡಿಕೆ ಪ್ರದೇಶಗಳು, ಕೃಷಿ ವಾಣಿಜ್ಯ ಹೂಡಿಕೆ ವಲಯಗಳು, ಫುಡ್ ಪಾರ್ಕ್, ವಿಶೇಷ ಆರ್ಥಿಕ ವಲಯಗಳು, ಕೃಷಿ ಜೆಟ್ಟಿ / ಕೃಷಿ ಬಂದರು, ಮೀನು ಸಂಗ್ರಹಣಾ ಕೇಂದ್ರಗಳು, ಮೀನುಗಾರಿಕೆಗೆ ಬಂದರು, ಕಸಾಯಿಖಾನೆ, ಸಮಗ್ರ ಕೃಷಿ ಉತ್ಪನ್ನಗಳ ಸಾಗಣೆ ಸಮುಚ್ಚಯಗಳು ಹಾಗೂ ಸಂಬಂಧಿತ ಮೂಲಭೂತಸೌಕರ್ಯಗಳು, ಕೈಗಾರಿಕಾ ಗುಚ್ಛದಲ್ಲಿ ಸಾಮಾನ್ಯ ಸೌಕರ್ಯದ ಸೌಲಭ್ಯಗಳು ಮತ್ತು ಪರಿಸರ ನಿಯಂತ್ರಣ ಪದ್ಧತಿ, ಶೀಘ್ರವಾಗಿ ಹಾಳಾಗುವ ಹಾಗೂ ಹಾಳಾಗದ ಉತ್ಪನ್ನಗಳಿಗಾಗಿ ಮೂಲಭೂತ ಸೌಕರ್ಯ ಮತ್ತು ಚಿಲ್ಲರೆ ವ್ಯಾಪಾರ ಸೌಲಭ್ಯಗಳು, ಕೃಷಿ ವಲಯಕ್ಕೆ ಸಂಬಂಧಪಟ್ಟಂತೆ ಹೊಸ ಕೈಗಾರಿಕಾ ಸ್ಥಾಪನೆ, ಪ್ರಸ್ತುತ ಇರುವ ಸೌಲಭ್ಯಗಳ ಆಧುನೀಕರಣ, ಈ ಎಲ್ಲವನ್ನೂ ಒಳಗೊಂಡಿರುತ್ತದೆ, ಆದರೆ ಇಷ್ಟಕ್ಕೆ ಮಾತ್ರ ಸೀಮಿತವಾಗಿರುವುದಿಲ್ಲ.

2.3 'ಕೃಷಿ ಆಧಾರಿತ ಕೈಗಾರಿಕೆ' ಎಂಬ ಪದದ ವ್ಯಾಪ್ತಿಗೆ ತೋಟದಿಂದ ಮಾರುಕಟ್ಟೆಗೆ ಸಂಪರ್ಕ ಕಲ್ಪಿಸುವುದು ಅಥವಾ ಭಾಗಶಃ ಚಟುವಟಿಕೆ, ಸಂಗ್ರಹಣ ಸಾಮರ್ಥ್ಯ ಹೆಚ್ಚಿಸುವುದು, ಮಾರಾಟ ಮಾಡಬಹುದಾದ ಅಥವಾ ಉಪಯೋಗಿಸಬಹುದಾದ ಅಥವಾ ಸೇವಿಸಬಹುದಾದ ರೀತಿಯಲ್ಲಿ ಉತ್ಪನ್ನಗಳನ್ನು ಸಂಸ್ಕರಣೆ ಮಾಡುವುದು ಬರುತ್ತದೆ. ಕೃಷಿ ಆಧಾರಿತ ಕೈಗಾರಿಕೆಯು ಖುಷ್ಕಿ ಬೇಸಾಯ, ನಿಖರ ಬೇಸಾಯ, ನಿರ್ಬಂಧಿತ ವಾತಾವರಣದಲ್ಲಿನ ಬೇಸಾಯ, ಕೃಷಿ ಮತ್ತು ಸಂಬಂಧಿತ ಕಾರ್ಯಗಳಿಗಾಗಿ ವಿಸ್ತೃತವಾಗಿ ಬಳಸಲಾಗುವ ಮಾಹಿತಿ ತಂತ್ರಜ್ಞಾನ ಮತ್ತು ಭೌಗೋಳಿಕ ಮಾಹಿತಿ ವ್ಯವಸ್ಥೆಯನ್ನು ಅಳವಡಿಸುವ ಕಾರ್ಯಗಳು, ಹೈಟೆಕ್ ಕೃಷಿ, ಕೃಷಿ ಪರಿಕರಗಳ ವಲಯಗಳು, ಕೃಷಿ ಇಂಜಿನಿಯರಿಂಗ್ ಕ್ಷೇತ್ರ, ಕೃಷಿ ಸೇವಾ ಕ್ಷೇತ್ರ ಮತ್ತು ಕೃಷಿ ಉದ್ದಿಮೆಗೆ ಸಂಬಂಧಿಸಿದ ಇನ್ನಿತರ ಕೈಗಾರಿಕೆ / ಸಂಸ್ಕರಣ / ಉತ್ಪಾದನಾ ಸೇವಾ ಘಟಕಗಳು ಸಹ ಒಳಗೊಂಡಿರುತ್ತದೆ. ಆದರೆ ಇಷ್ಟಕ್ಕೆ ಸೀಮಿತವಾಗಿರುವುದಿಲ್ಲ.

2.4 'ಕೃಷಿ ಉತ್ಪನ್ನ' ಎಂದರೆ ಕೃಷಿ ಉತ್ಪನ್ನ ಎಂಬ ಪದದಲ್ಲಿ ಕೃಷಿ, ತೋಟಗಾರಿಕೆ, ರೇಷ್ಮೆ ಕೃಷಿ, ಪಶು ಸಂಗೋಪನೆ, ಹೈನುಗಾರಿಕೆ, ಪುಷ್ಪ ಕೃಷಿ, ಮೀನುಗಾರಿಕೆ, ಜೇನುಕೃಷಿ, ಸಣ್ಣ ಅರಣ್ಯ ಉತ್ಪನ್ನ ಮತ್ತು ಜಾನುವಾರು ಉತ್ಪನ್ನಗಳನ್ನು ಒಳಗೊಂಡಿರುತ್ತದೆ. ಆದರೆ ಇಷ್ಟಕ್ಕೆ ಸೀಮಿತವಾಗಿರುವುದಿಲ್ಲ.

2.5 **ಹೈ ಟೆಕ್ ಮತ್ತು ಜೈವಿಕ ತಂತ್ರಜ್ಞಾನ ಆಧಾರಿತ ಕೃಷಿ ಮತ್ತು ಸಂಶೋಧನೆ**"ಎಂಬ ಪದವು ಒಂದು ಚಟುವಟಿಕೆಗೆ ಸೀಮಿತವಾಗಿರದೆ, ಒಳಗೊಂಡಿರುವ ವಿಷಯಗಳೆಂದರೆ ಅಂಗಾಂಶ ಕೃಷಿ, ಟ್ರಾನ್ಸ್‌ಜೆನಿಟಿಕ್ ಸಸ್ಯದ ಉತ್ಪಾದನೆ, ಜೈವಿಕ ಗೊಬ್ಬರಗಳಿಗಾಗಿ ಹುದುಗು ಘಟಕ, ವಂಶವಾಹಿ ನಕ್ಷೀಕರಣ, ತದ್ರೂಪು ಸೃಷ್ಟಿ ಜೆನೆಟಿಕ್ ಇಂಜಿನಿಯರಿಂಗ್, ಹಸಿರು ಮನೆ, ನಿರ್ಬಂಧಿತ ವಾತಾವರಣದಲ್ಲಿ ಬೇಸಾಯ, ಜಲಕೃಷಿ ಅಥವಾ ಕೃಷಿ ಕೈಗಾರಿಕೆಗೆ ಅಳವಡಿಸಬಲ್ಲ ಯಾವುದೇ ಮುಂಚೂಣಿ ತಂತ್ರಜ್ಞಾನ ಸಂಶೋಧನೆಯನ್ನು ಒಳಗೊಂಡಿರುತ್ತದೆ. ಆದರೆ ಅಷ್ಟಕ್ಕೇ ಸೀಮಿತವಾಗಿರುವುದಿಲ್ಲ.

2.6 ಕರ್ನಾಟಕ ಸರ್ಕಾರವು ಆಗಿಂದಾಗ್ಗೆ ಪ್ರಕಟಿಸುವ ಕೃಷಿ ಮೂಲಭೂತಸೌಕರ್ಯಗಳ ಇತರೆ ವರ್ಗಗಳು, ಕೈಗಾರಿಕಾ ಘಟಕಗಳು, ಸಂಶೋಧನೆ, ಸೇವಾ ವಲಯಗಳು, ಉತ್ಪನ್ನಗಳು ಮತ್ತು ಪದ್ದತಿಗಳನ್ನೂ ಸಹ ಈ ನೀತಿ ಒಳಗೊಂಡಿರುತ್ತದೆ.

# 3 ದೃಷ್ಟಿಕೋನ

ಜಾಗತಿಕ ತಾಂತ್ರಿಕತೆ ಮತ್ತು ನವೀನ ಸಾಧನೆಗಳ ಮೂಲಕ ಸಮರ್ಥ ವ್ಯವಸ್ಥೆಯನ್ನು ರೂಪಿಸಿ ಆಧುನಿಕ ಮೂಲಭೂತ ಸೌಲಭ್ಯಗಳನ್ನು ಒದಗಿಸಿ ರೈತ ಸಮುದಾಯಕ್ಕೆ ಹೆಚ್ಚಿನ ಆದಾಯ ಬರುವಂತೆ ಕೃಷಿ ಮತ್ತು ಸಂಬಂಧಿತ ವಲಯಗಳಲ್ಲಿ ಕರ್ನಾಟಕವನ್ನು ಸುಸ್ಥಿರವಾದ ಅಭಿವೃದ್ಧಿ ಮಾರ್ಗದತ್ತ ಕೊಂಡೊಯ್ಯುವುದೇ ಈ ನೀತಿಯ ದೃಷ್ಟಿಕೋನವಾಗಿದೆ.

# 4 ಉದ್ದೇಶಗಳು ಮತ್ತು ಕಾರ್ಯತಂತ್ರ

## 4.1 ಸುಸ್ಥಿರ ಕೃಷಿ ಚಟುವಟಿಕೆ, ಉತ್ಪಾದಕತೆಯ ಹೆಚ್ಚಳ ಮತ್ತು ಅದರಿಂದ ರೈತ ಸಮುದಾಯಕ್ಕೆ ಉತ್ತಮ ಆದಾಯ

ಅ. ಆಹಾರ, ಪೌಷ್ಠಿಕತೆ, ಪರಿಸರದ ಮತ್ತು ಜೀವನೋಪಾಯದ ಭದ್ರತೆಗೆ ನೈಸರ್ಗಿಕ ಸಂಪನ್ಮೂಲಗಳ ಸುಸ್ಥಿರ ನಿರ್ವಹಣೆ

ಆ. ವಿವಿಧ ಪರಿಸರಗಳಿಗೆ ಮತ್ತು ಸೂಕ್ಷ್ಮ ಪರಿಸ್ಥಿತಿಗಳಿಗೆ ಹೊಂದಿಕೊಳ್ಳಬಹುದಾದಂತಹ ಸುಧಾರಿತ ಬೆಳೆ / ಸಂಕರಣ ತಳಿಗಳ ಅಭಿವೃದ್ಧಿ

ಇ. ಸುಧಾರಿತ ಸಸ್ಯ ತಳಿಗಳನ್ನು ಉತ್ತಮ ದರ್ಜೆಯ ಗುಣಗಳುಳ್ಳ, ಉತ್ಪಾದಕತೆಯ, ಕೀಟ ಹಾಗೂ ರೋಗ ನಿರೋಧಕ ಶಕ್ತಿಯುಳ್ಳ, ಅಜೈವಿಕ ಒತ್ತಡಗಳಿಗೆ ತಡೆದುಕೊಳ್ಳುವ ಶಕ್ತಿ ಇರುವಂಥಹ ಸುಧಾರಿತ ಸಸ್ಯ ತಳಿಗಳ ಉತ್ಪಾದನೆ ಮತ್ತು ವಂಶವಾಹಿ (ಜೆನೆಟಿಕ್) ಸಂಪನ್ಮೂಲಗಳ ಬಳಕೆ

ಈ. ಸಮರ್ಥ, ಕಡಿಮೆ ವೆಚ್ಚದ, ಪರಿಸರ ಸ್ನೇಹಿ ಮತ್ತು ಸುಸ್ಥಿರ ಬೆಳೆ ಉತ್ಪಾದನೆ ಹಾಗೂ ಸಂರಕ್ಷಣಾ ತಾಂತ್ರಿಕತೆಗಳು

ಉ. ಉತ್ತಮ ಗುಣಮಟ್ಟದ ಬೀಜೋತ್ಪಾದನಾ ತಾಂತ್ರಿಕತೆಗಳ ಸುಧಾರಣೆ ಮತ್ತು ತಳಿ ಸಂವರ್ಧಕ ಬೀಜಗಳ ಉತ್ಪಾದನೆಯ ಜೊತೆಯಲ್ಲಿ ಸಂಕರಣ ಸಸ್ಯ ತಳಿಗಳ ಅಭಿವೃದ್ಧಿಗೆ ಆದ್ಯತೆ

ಊ. ಕೃಷಿ ಸಂಬಂಧಿತ ಸೂಕ್ಷ್ಮ ಜೀವಿಗಳ ಮತ್ತು ಸಸ್ಯ ವಂಶವಾಹಿ ಸಂಪನ್ಮೂಲಗಳ ಸಂರಕ್ಷಣೆ ಮತ್ತು ಸುಸ್ಥಿರ ಬಳಕೆ

ಋ. ಉತ್ಪಾದಕತೆಯನ್ನು ಹೆಚ್ಚಿಸಲು ಜ್ಞಾನ ಪ್ರಸರಣ ಮತ್ತು ತಂತ್ರಜ್ಞಾನ ಪ್ರಸರಣ. ವಾಣಿಜ್ಯ ಬೆಳೆಗಳ ಬೇಸಾಯಕ್ಕಾಗಿ, ರಫ್ತು ಯೋಗ್ಯ ಬೆಳೆಗಳನ್ನು ಉತ್ಪಾದಿಸಲು ಮತ್ತು ಹೆಚ್ಚಿನ ಮೌಲ್ಯ ಪಡೆಯಲು ಬೇಕಾದ ಕಾರ್ಯತಂತ್ರಗಳನ್ನು ಒಳಗೊಂಡಿದೆ.

ಎ. ಅಧಿಕ ಸಾಂದ್ರತೆಯುಳ್ಳ ತೋಟಗಳು, ನೆರಳು ಬಲೆ ಬೇಸಾಯ, ಪಾಲಿ ಹೌಸ್ ಬೇಸಾಯ, ಹಸಿರುಮನೆ ಬೇಸಾಯ, ನಿಖರ ಬೇಸಾಯ ಇತ್ಯಾದಿಗಳನ್ನು ಪ್ರೋತ್ಸಾಹಿಸುವುದು

ಏ. ಸಾಂಪ್ರದಾಯಿಕ ಬೆಳೆಗಳ ಬೇಸಾಯದಿಂದ ತೋಟದ ಬೆಳೆಗಳಿಗೆ, ಹಣ್ಣಿನ ತೋಟಗಳು, ದ್ರಾಕ್ಷಿ ತೋಟಗಳು, ಪುಷ್ಪ ಕೃಷಿ ಮತ್ತು ತರಕಾರಿ ಬೆಳೆಗಳಿಗೆ ವೈವಿಧ್ಯೀಕರಣ

ಐ. ದೇಶೀಯ ಬೆಳೆಗಳು ಮತ್ತು ಇತರೆ ಪ್ರಾಂತೀಯ ಸಸ್ಯ ಸಂಕುಲಗಳನ್ನು ಗುರುತಿಸಿ / ಸಂಗ್ರಹಿಸಿ, ಶೀಘ್ರವಾಗಿ ಅಭಿವೃದ್ಧಿ ಪಡಿಸಿ ದೇಶೀಯ ಮತ್ತು ಹೆಚ್ಚಿನ ರಫ್ತಿಗೆ ಆದ್ಯತೆ ನೀಡುವುದು

ಒ. ಕನಿಷ್ಠ ಜೀವನಾಧಾರದ ಜಾನುವಾರು ಸಾಕಾಣಿಕೆಯಿಂದ ಸುಸ್ಥಿರ ಹಾಗೂ ಲಾಭದಾಯಕ ಪಶುಸಂಗೋಪನೆ ಮತ್ತು ಕೋಳಿ ಸಾಕಣಿಕೆಗೆ ಪರಿವರ್ತನೆ

ಓ. ಪ್ರಾಣಿ ತಳಿ ವೈವಿಧ್ಯತೆಯನ್ನು ಕಾಪಾಡಿಕೊಳ್ಳಲು ದೇಶೀಯ ಪ್ರಾಣಿ ಸಂಕುಲದ ವಂಶವಾಹಿ ಸಂಪನ್ಮೂಲಗಳ ಸಂರಕ್ಷಣೆ ಮತ್ತು ಅಭಿವೃದ್ಧಿ

ಔ. ದೇಶೀಯ ಜಾನುವಾರು ಮತ್ತು ಎಮ್ಮೆಗಳ ವಂಶವಾಹಿ ಉನ್ನತೀಕರಣ

ಕ. ಉತ್ತಮವಾಗಿ ರೂಪಿಸಿದಂತಹ ಕಾರ್ಯತಂತ್ರಗಳ ಮೂಲಕ ಮೇವು ಮತ್ತು ಮೇವಿನ ಆಹಾರ ಉತ್ಪಾದನೆಯನ್ನು ಹೆಚ್ಚಿಸುವುದು

ಕಿ. ಗುಣಮಟ್ಟದ ಉತ್ಪನ್ನಗಳು, ಉತ್ಪಾದಕತೆ ಹೆಚ್ಚಿಸುವುದು, ವ್ಯವಸ್ಥಿತ ಮಾರುಕಟ್ಟೆ ಹಾಗೂ ಹೊಸ ರೋಗಗಳನ್ನು ತಡೆಯುವುದರ ಮೂಲಕ ಪಶುಸಂಗೋಪನಾ ವಲಯದಲ್ಲಿ ಉತ್ಪಾದಕತೆಯನ್ನು ಸುಧಾರಿಸುವುದು

ಖ. ಜಾನುವಾರು ಮತ್ತು ಕುಕ್ಕುಟ ವಲಯಗಳ ಉತ್ಪಾದನಾ ಹೆಚ್ಚಳಕ್ಕೆ ಬೆಂಬಲ, ಲಾಭದಾಯಕ, ಸ್ಪರ್ಧಾತ್ಮಕತೆ ಮತ್ತು ಸುಸ್ಥಿರತೆಗಾಗಿ ತಾಂತ್ರಿಕತೆಗಳನ್ನು ಅಭಿವೃದ್ಧಿಪಡಿಸುವುದು

ಖ. ಜಾನುವಾರು ಉತ್ಪನ್ನ ಸಂಸ್ಕರಣೆದಾರರು ಮತ್ತು ಪರಿಕರ ಸರಬರಾಜುದಾರರೊಂದಿಗೆ ಸಣ್ಣ ರೈತರ ಸಹಭಾಗಿತ್ವದ ಪರಸ್ಪರ ವಿಚಾರ ವಿನಿಮಯ

ಖಿ. ಹಾಲು ಉತ್ಪಾದನೆ ಮತ್ತು ಸಂಸ್ಕರಣಾ ಸಾಮರ್ಥ್ಯ ಹಾಗೂ ಹೈನುಗಾರಿಕಾ ಉತ್ಪನ್ನಗಳ ಉತ್ಪಾದನೆಗೆ ಒತ್ತು ನೀಡುವುದು

ಗ. ಗ್ರಾಮೀಣ ವಲಯದಲ್ಲಿ ಉದ್ಯೋಗ ಅವಕಾಶ ಸೃಷ್ಟಿಸಲು ರೋಗ ನಿರೋಧಕ ಶಕ್ತಿ ಇರುವ ಮತ್ತು ಕಡಿಮೆ ಗುಣಮಟ್ಟದ ಸ್ಥಳೀಯ ಆಹಾರದಿಂದ ಜೀವಿಸಬಲ್ಲ ಸುಧಾರಿತ ತಳಿಗಳನ್ನೊಳಗೊಂಡಂತೆ ದೇಶೀಯ ಕುಕ್ಕಟ ತಳಿಗಳನ್ನು ಅಭಿವೃದ್ಧಿಪಡಿಸುವುದು

ಗಿ. ರಾಜ್ಯದ ವೈವಿಧ್ಯಮಯ ಮತ್ಸ್ಯ ಸಂಪತ್ತನ್ನು ಅಂದಾಜಿಸಲು ಬೇಕಾದಂತ ವಿಧಾನಗಳನ್ನು ಪ್ರಮಾಣಬದ್ಧಗೊಳಿಸಲು ಮಾಹಿತಿ ಮತ್ತು ವಿವರ ಸಂಗ್ರಹಣೆಯನ್ನು ಸದೃಢಗೊಳಿಸುವುದು

ಘ. ಆಳ ಸಮುದ್ರ ಮೀನುಗಾರಿಕೆಯನ್ನು ಪ್ರೋತ್ಸಾಹಿಸುವುದು

ಫ. ಉತ್ತಮ ಬೆಲೆ ಪಡೆಯಲು ಬೆಳೆಯುತ್ತಿರುವ ದೇಶೀಯ ಮತ್ತು ಅಂತರ್‍ರಾಷ್ಟ್ರೀಯ ಮಾರುಕಟ್ಟೆಗಳ ಪ್ರಯೋಜನ ಪಡೆಯುವುದು

ಬ. ರಫ್ತು ಮಾಡಲಾಗುವ ಉತ್ಪನ್ನಗಳಿಗಾಗಿ ಬಳಸಲಾಗುವ ಉಪಕರಣಗಳು ಮತ್ತು ಸೌಲಭ್ಯಗಳು ಅಂತರಾಷ್ಟ್ರೀಯ ಗುಣಮಟ್ಟದ ನೈರ್ಮಲ್ಯ ಮತ್ತು ಆರೋಗ್ಯ ಪ್ರಮಾಣಕ್ಕೆ ಅನುಗುಣವಾಗಿ ಇರುವಂತೆ ನೋಡಿಕೊಳ್ಳುವುದು

ಚ. ತಂತ್ರಜ್ಞಾನ ಮತ್ತು ಕೃಷಿ ಯಾಂತ್ರೀಕರಣಗಳ ಬಳಕೆಯಿಂದ ಉತ್ಪಾದನೆ ಮತ್ತು ಕೊಯಿಲಿನ್ನೋತ್ತರದ ಚಟುವಟಿಕೆಗಳಲ್ಲಿ ಮೌಲ್ಯವರ್ಧನೆ ಮತ್ತು ಶಕ್ತಿ ಸಾಮರ್ಥ್ಯದ ನಿರ್ವಹಣೆಗಾಗಿ ಸುಸ್ಥಿರ ಲಾಭದಾಯಕ ಮತ್ತು ಸ್ಪರ್ಧಾತ್ಮಕ ಉದ್ದಿಮೆಯನ್ನು ಕೈಗೊಳ್ಳುವುದು

ಛ ನೀರಾವರಿ, ಮಳೆ ಆಧಾರಿತ ಮತ್ತು ಬೆಟ್ಟ ಪ್ರದೇಶಗಳಲ್ಲಿ ಕೃಷಿ, ತೋಟಗಾರಿಕೆ, ಪಶುಸಂಗೋಪನೆ ಮತ್ತು ಮೀನುಗಾರಿಕೆಯ ಉತ್ಪಾದನೆಗಾಗಿ ಕಾಲಾನುಕಾಲಕ್ಕೆ ನಿರ್ವಹಿಸಬೇಕಾದ ಮತ್ತು ಸೂಕ್ತವಾದ ಕೃಷಿ ಕಾರ್ಯವಿಧಾನಗಳಲ್ಲಿ ನಿಖರ ಯಂತ್ರೋಪಕರಣಗಳನ್ನು ಮತ್ತು ಕಾರ್ಯಯೋಜನೆಗಳನ್ನು ಅಳವಡಿಸುವುದು.

ಜ. ವಾಣಿಜ್ಯೀಕರಣ ಹಾಗೂ ಅಳವಡಿಕೆಗಾಗಿ ಹೊಸ ತಂತ್ರಜ್ಞಾನ / ಪರಿಕರ / ಕೌಶಲ್ಯಗಳನ್ನು ಜನಪ್ರಿಯಗೊಳಿಸುವುದು.

ಅಅ. ಕೃಷಿ ಉತ್ಪಾದನೆ ಮತ್ತು ಸಂಸ್ಕರಣಾ ಚಟುವಟಿಕೆಗಳಲ್ಲಿ ಸಾಂಪ್ರದಾಯಿಕ ಹಾಗೂ ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ನಿರ್ವಹಣೆ ಮತ್ತು ಬಳಕೆ.

ಆಆ. ಸಕಾಲಕ್ಕೆ ಲಭ್ಯವಿರುವ ಉತ್ತಮ ಗುಣಮಟ್ಟದ ಮತ್ತು ಸರಿ ಪ್ರಮಾಣದ ಕೃಷಿ ಪರಿಕರಗಳ ಪೂರೈಕೆಯನ್ನು ಖಾತ್ರಿ ಪಡಿಸುವುದು.

ಇಇ. ಬಂಡವಾಳ. ತಂತ್ರಜ್ಞಾನ, ಸಮರ್ಪಕ ಕಾರ್ಯನಿರ್ವಹಣೆ ಮತ್ತು ಸಹಾಯ ಸೇವೆಗಳಾದ ಸಾಲ, ಮಾರುಕಟ್ಟೆ, ಸಂಶೋಧನೆ, ವಿಸ್ತರಣೆ ಮೊದಲಾದವುಗಳ ಲಭ್ಯತೆಯನ್ನು ಹೆಚ್ಚಿಸುವಿಕೆ

ಈಈ. ರೈತರು, ಕೈಗಾರಿಕೆ, ಸಂಶೋಧನೆ ಮತ್ತು ವಿಸ್ತರಣೆ ಕ್ಷೇತ್ರಗಳಿಗೆ ಪಾಲುದಾರರ ನಡುವೆ ಪರಸ್ಪರ ಸಂಪರ್ಕ ಏರ್ಪಡಿಸುವುದು

ಉಉ. ಕೊಯ್ಲೋತ್ತರ ನಂತರದ ನಷ್ಟವನ್ನು ಹಾಗೂ ತ್ಯಾಜ್ಯವನ್ನು ಕಡಿಮೆಗೊಳಿಸುವುದರ ಮೂಲಕ ರೈತರಿಗೆ ಹೆಚ್ಚಿನ ಮೌಲ್ಯ ದೊರೆಯುವಂತೆ ಮಾಡುವುದು

## 4.2 ಕೃಷಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ

**ಅ.** ಕೊಯ್ಲೋತ್ತರ ನಷ್ಟವನ್ನು ಕಡಿಮೆ ಮಾಡುವುದು, ಕೈಗಾರಿಕ ಘಟಕಗಳಿಗೆ ಅನುಕೂಲವಾಗುವ ಸಾಮಾನ್ಯ ಮೂಲಭೂತ ಸೌಕರ್ಯಗಳನ್ನು ಸೃಷ್ಟಿಸುವುದು ಹಾಗೂ ಲಾಭದಾಯಕವಾಗುವಂತೆ ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡುವುದನ್ನು ಖಾತ್ರಿಪಡಿಸುವುದು.

**ಆ.** ಕೃಷಿ ಹಾಗೂ ಕೃಷಿ ಸಂಬಂಧಿತ ವಲಯಗಳ ಅಭಿವೃದ್ಧಿಗೆ ಉತ್ತೇಜನ ಕೊಟ್ಟು ಕಟಾವಿನ ನಂತರದ ಸೌಲಭ್ಯಗಳು, ಕೃಷಿ ಕಾರಿಡಾರ್, ಕೃಷಿ–ವಿಶೇಷ ಆರ್ಥಿಕ ವಲಯಗಳು, ಕೃಷಿ ಉದ್ಯಾನಗಳು, ಸಾರ್ವಜನಿಕ ಸಂಸ್ಕರಣ ಕೇಂದ್ರಗಳು, ಹರಾಜು ಮನೆಗಳು ಮತ್ತು ಗ್ರಾಮೀಣ ಮೂಲ ಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ವಿಶ್ವ ದರ್ಜೆಯ ಸರಬರಾಜು ಸರಪಳಿ ಸೌಕರ್ಯವನ್ನು ಸೃಷ್ಟಿಸಬೇಕು.

**ಇ.** ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಾರುಕಟ್ಟೆಗೆ ಸರಬರಾಜನ್ನು ಹೊಸದಾದ ಒಂದು ಮೀನುಗಾರಿಕೆ ಬಂದರಿನ ಜಾಲದ ರಚನೆ ಮತ್ತು ಹೆಚ್ಚಿನ ಹಿಂದು ಮುಂದಿನ ಸಂಪರ್ಕ ಹಾಗೂ ವಿಫುಲ ಮೂಲಭೂತ ಸೌಕರ್ಯಹೊಂದಿರುವ ಆರೋಗ್ಯಕರ, ದರ್ಜೆಗನುಗುಣವಾಗಿ ಮೀನು ಇಳಿಸುವ ಸೌಲಭ್ಯಗಳನ್ನು ನಿರ್ಮಿಸುವುದು.

**ಈ.** ಕೃಷಿ ಉತ್ಪನ್ನಗಳ ನಿರ್ವಹಣೆ, ಸಂಸ್ಕರಣೆ, ಶೇಖರಣೆ ಮತ್ತು ಮಾರುಕಟ್ಟೆಗಾಗಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದು.

**ಉ.** ಬಿದ್ದ ಪ್ರಾಣಿಗಳಿಗಾಗಿ ಹಾಗೂ ಮೃತ ಪ್ರಾಣಿ ಬಳಕೆಗಾಗಿ ಕಸಾಯಿಖಾನೆಗಳ ಸುಧಾರಣೆ ಮತ್ತು ಆಧುನೀಕರಣ

**ಊ.** ಸುಧಾರಿಸಿದ, ಆಧುನಿಕ ಮತ್ತು ಹೆಚ್ಚಾಗಿರುವ ಕೈಗಾರಿಕಾ ಮೂಲಭೂತ ಸೌಕರ್ಯ, ಪರಿಸರದಲ್ಲಿನ ಮೂಲಭೂತ ಸೌಕರ್ಯ ಮತ್ತು ವಿಶಿಷ್ಟವಾದ ಮೂಲಭೂತ ಸೌಕರ್ಯಗಳು

## 4.3 ಕೃಷಿ ಆಧಾರಿತ ಉದ್ಯಮದ ಜೊತೆಯಲ್ಲಿ ಆಹಾರ ಸಂಸ್ಕರಣ ಘಟಕಗಳ ಅಭಿವೃದ್ಧಿ

ಅ. ಕೃಷಿ ಕಾರ್ಯವಿಧಾನಗಳನ್ನು ನೀರಾವರಿ ಜಮೀನಿಗೆ, ಮಳೆ ಆಧಾರಿತ ಮತ್ತು ಬೆಟ್ಟ ಪ್ರದೇಶಗಳಲ್ಲಿ ಕೃಷಿ, ತೋಟಗಾರಿಕೆ, ಪಶುಸಂಗೋಪನೆ ಮತ್ತು ಮೀನುಗಾರಿಕೆಯ ಉತ್ಪನ್ನಗಳಿಗಾಗಿ ನಿಖರ ಯಂತ್ರೋಪಕರಣಗಳನ್ನು ಅಭಿವೃದ್ಧಿಪಡಿಸಬೇಕಾಗುತ್ತದೆ

ಆ. ರೈತರ ಆದಾಯ ಹೆಚ್ಚಿಸುವುದಕ್ಕಾಗಿ ಕೃಷಿ ಉತ್ಪನ್ನಗಳ ಸದ್ಬಳಕೆ ಹಾಗೂ ಮೌಲ್ಯ ವರ್ಧನೆ

ಇ. ಕೃಷಿ ಉತ್ಪನ್ನಗಳಿಗೆ ಮೌಲ್ಯ ವರ್ಧನೆ, ಸಂಸ್ಕರಣೆ ಮತ್ತು ಉಪ–ಉತ್ಪನ್ನಗಳ ಬಳಕೆ

ಈ. ಕೃಷಿ ತ್ಯಾಜ್ಯದ ಮತ್ತು ಪ್ರಧಾನ ಕೃಷಿ ಉತ್ಪನ್ನಗಳಿಂದಾಗಿ ಲಭ್ಯವಾಗುವ ಉಪ–ಉತ್ಪನ್ನಗಳಲ್ಲದೆ ಸಂಸ್ಕರಣ ಕೈಗಾರಿಕೆಗಳ ಗರಿಷ್ಠ ಪ್ರಮಾಣದ ಬಳಕೆ.

ಉ. ಹಾಳಾಗಬಹುದಾದ ಹಣ್ಣು, ತರಕಾರಿ, ಹೂವು, ಪ್ರಾಣಿ, ಹೈನು ಉತ್ಪಾದನೆ ಹಾಗೂ ಉತ್ಪನ್ನ ವೈವಿಧ್ಯೀಕರಣ ಮಳಿಗೆಯಲ್ಲಿ ಶೇಖರಣಾಗುಣವನ್ನು ಹೆಚ್ಚಿಸುವುದು ಮತ್ತು ಲಾಭಕ್ಕಾಗಿ ಮೌಲ್ಯ ವರ್ಧನೆ

ಊ. ಆಹಾರ ಸಂಸ್ಕರಣ ಸರಪಳಿಯ ಎಲ್ಲಾ ಹಂತಗಳಲ್ಲಿ ತ್ಯಾಜ್ಯವನ್ನು ಕನಿಷ್ಠ ಪ್ರಮಾಣಕ್ಕೆ ಇಳಿಸಲು ಕೃಷಿ–ಆಹಾರ ಉತ್ಪನ್ನಗಳ ಶೇಖರಣೆ, ಸಾಗಣೆ ಮತ್ತು ಸಂಸ್ಕರಣೆಗೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಪಡಿಸುವುದು.

ಋ. ಹಣ್ಣು ಮತ್ತು ತರಕಾರಿ,ಆಹಾರ ಧಾನ್ಯವನ್ನು ಹಿಟ್ಟು ಮಾಡುವ, ಹೈನುಗಾರಿಕೆಯ ಉತ್ಪನ್ನಗಳು, ಕೋಳಿ ಸಾಕಣೆ ಹಾಗೂ ಮೊಟ್ಟೆ, ಮಾಂಸ ಮತ್ತು ಮಾಂಸದ ಉತ್ಪನ್ನಗಳು, ಮೀನು, ಬ್ರೆಡ್, ಎಣ್ಣೆ ಕಾಳುಗಳು, ಬಿಸ್ಕತ್ತುಗಳು ಹಾಗೂ ಇತರೆ ತಿಂಡಿ ತಿನಿಸುಗಳು, (ಕೋಕ್ ಸಂಸ್ಕರಣೆ ಮತ್ತು ಚಾಕೊಲೇಟ್‌ಗಳು ಸೇರಿರುತ್ತವೆ), ನೆನೆ ಹಾಕಿರುವ ಜವೆ ಗೋಧಿಯ ಸಾರ, ಬೇರ್ಪಡಿಸಿರುವ ಸಸಾರಜನಕ, ಹೆಚ್ಚಿನ ಪೌಷ್ಠಿಕ ಆಹಾರ, ಮೊಲೆಹಾಲು ಬಿಡಿಸಿದ ನಂತರದ ಆಹಾರ (weaning food) ಮತ್ತು ಇತರೆ ತಿನ್ನಲು ಸಿದ್ಧವಿರುವ ಆಹಾರ ಉತ್ಪನ್ನಗಳು, ಬಿಯರ್‌ನಲ್ಲಿ ಮದ್ಯಸಾರವಿಲ್ಲದ ಬಿಯರ್, ಕಾಕಂಬಿ ಇಲ್ಲದ ಮದ್ಯಸಾರ ಪಾನೀಯಗಳು, ಎರೇಟೆಡ್ ಪಾನೀಯಗಳು / ತಂಪು ಪಾನೀಯಗಳು ಮತ್ತು ಇತರೆ ಸಂಸ್ಕರಿತ ಆಹಾರಗಳು, ಆಹಾರ ಸಂಸ್ಕರಿಸುವ ಕೈಗಾರಿಕೆಗಳಿಗೆ ವಿಶೇಷ ಪ್ಯಾಕೇಜಿಂಗ್ – ಹೀಗೆ ಸಂಸ್ಕರಿಸುವ ಕೈಗಾರಿಕೆಗಳಿಗೆ ಆಧುನಿಕ ತಂತ್ರಜ್ಞಾನವನ್ನು ಅಳವಡಿಸುವುದು.

## 4.4 ಸಂಶೋಧನೆ, ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯೋಗ ಸೃಷ್ಟಿ

ಅ. ಬೆಳೆವಿಜ್ಞಾನ, ತೋಟಗಾರಿಕೆ, ಪಶುವೈದ್ಯಕೀಯ, ಪ್ರಾಣಿವಿಜ್ಞಾನ, ಹೈನುವಿಜ್ಞಾನ, ಮೀನುಗಾರಿಕೆ, ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆ, ಕೃಷಿ ಇಂಜಿನಿಯರಿಂಗ್, ಆಹಾರ ಸಂಸ್ಕರಣೆ, ಜೈವಿಕ ರಸಾಯನ ಶಾಸ್ತ್ರ ಮತ್ತು ಪೌಷ್ಟಿಕತೆ, ಹುಳಿ ಬರಿಸುವ ತಂತ್ರಜ್ಞಾನ, ಜೈವಿಕ ಇಂಜಿನಿಯರಿಂಗ್, ಹಿಟ್ಟು ಮಾಡುವಿಕೆ, ಬೇಕರಿ ಮತ್ತು ತಿಂಡಿ ತಿನಿಸುಗಳ ವಿಜ್ಞಾನ, ಆಹಾರ ಇಂಜಿನಿಯರಿಂಗ್, ಆಹಾರ ಸೂಕ್ಷ್ಮ ಜೀವಿ ಶಾಸ್ತ್ರ, ಆಹಾರ ಪ್ಯಾಕಿಂಗ್ ತಂತ್ರಜ್ಞಾನ, ಆಹಾರ ಸಂರಕ್ಷಗಳು ಮತ್ತು ಪೀಡೆ ನಿಯಂತ್ರಣ, ಆಹಾರ ಸುರಕ್ಷತೆ ಮತ್ತು ವಿಶ್ಲೇಷಣಾ ಗುಣಮಟ್ಟ ನಿಯಂತ್ರಗಳಲ್ಲಿನ ಮೂಲ ಕಾರ್ಯತಂತ್ರಾತ್ಮಕ ಹಾಗೂ ನಿರೀಕ್ಷಣಾ ಸಂಶೋಧನೆಗಳಲ್ಲಿ ಉತ್ಕೃಷ್ಟತೆಯನ್ನು ಉತ್ತೇಜಿಸುವುದು.

ಆ. ಪ್ರಾಥಮಿಕ ಉತ್ಪನ್ನಗಳ ಉತ್ಪಾದನೆಯಲ್ಲಿ ತೊಡಗಿರುವ ಕೃಷಿ ಕಾರ್ಮಿಕರನ್ನು ಉದ್ಯಮಶೀಲತೆಯ ಮೂಲಕ ಕೃಷಿ ಸೇವಾ ಕ್ಷೇತ್ರಕ್ಕೆ ಮರುಹಂಚಿಕೆ ಮಾಡುವ ಕಾರ್ಯವಿಧಾನವನ್ನು ಅಭಿವೃದ್ಧಿಗೊಳಿಸುವುದು.

ಇ. ಕೃಷಿ, ತೋಟಗಾರಿಕೆ, ಕೃಷಿ ಅರಣ್ಯ, ಪಶುಸಂಗೋಪನೆ ಮತು ಹೈನುಗಾರಿಕೆಯ ತಂತ್ರಜ್ಞಾನ, ಮೀನುಗಾರಿಕೆ, ಕೊಯ್ಲು ಮತ್ತು ಕೊಯ್ಲೋತ್ತರ ಸಂಸ್ಕರಣೆ, ಕೃಷಿ ತಂತ್ರಜ್ಞಾನ, ನೈಸರ್ಗಿಕ ಸಂಪನ್ಮೂಲ ನಿರ್ವಹಣೆ, ಆಹಾರ ಸಂಸ್ಕರಣೆ ಮತ್ತು ಕೃಷಿವಾಣಿಜ್ಯ ನಿರ್ವಹಣೆಯ ವಲಯಗಳಲ್ಲಿ ಉದ್ಭವಿಸುತ್ತಿರುವ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸುವುದು.

ಈ. ಆಧುನಿಕ ಕೃಷಿ ಪದ್ಧತಿ ಮತ್ತು ಉತ್ಪನ್ನಗಳ ಆರೋಗ್ಯಕರ ನಿರ್ವಹಣಾ ಪದ್ಧತಿಗಳನ್ನು ಅಳವಡಿಸಿಕೊಳ್ಳಲು ಬೇಕಾದಂತಹ ಕೌಶಲ್ಯವನ್ನು ಯುವಕರು, ರೈತರು ಮತ್ತು ಮಹಿಳೆಯರಲ್ಲಿ ಅಭಿವೃದ್ಧಿಗೊಳಿಸಿ ಅವರ ತಲಾ ಆದಾಯವನ್ನು ಹೆಚ್ಚಿಸುವುದು.

ಉ. ಕೃಷಿ ಚಟುವಟಿಕೆಯಲ್ಲಿನ ಕೆಲಸದ ಸಾಮರ್ಥ್ಯ ಹೆಚ್ಚಿಸುವುದು ಹಾಗೂ ವೃತ್ತಿಯಲ್ಲಿನ ಅಪಾಯ ಕಡಿಮೆ ಮಾಡುವುದು.

ಊ. ಸಹಭಾಗಿತ್ವ ವಿಧಾನಗಳನ್ನು ಅನುಸರಿಸಿ ಹೆಚ್ಚಿನ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು.

ಋ. ಸುಸ್ಥಿರ ಕೃಷಿ ಬೆಳವಣಿಗೆಗೆ ಬೇಕಾದಂತಹ ಸಾಮರ್ಥ್ಯ ನಿರ್ಮಾಣ ಮತ್ತು ಸಂಶೋಧನಾ ಸಾಮರ್ಥ್ಯ ಹೆಚ್ಚಿಸುವುದಕ್ಕಾಗಿ ಬೇಕಾದಂತಹ ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆಗಳು ಮತ್ತು ತರಬೇತಿ ಕೇಂದ್ರಗಳು, ಕೌಶಲ್ಯ ಅಭಿವೃದ್ಧಿ ಕೇಂದ್ರಗಳು, ಪರೀಕ್ಷಾ ಕೇಂದ್ರಗಳು ಇನ್ನಿತರೆ ಸಂಸ್ಥೆಗಳನ್ನು ಅಭಿವೃದ್ಧಿಗೊಳಿಸುವುದು.

ಎ. ನಿರ್ದಿಷ್ಟ ಸಮಸ್ಯೆಗಳ ಪರಿಹಾರಕ್ಕಾಗಿ ಸಂಶೋಧನಾ ಪ್ರಯತ್ನಗಳನ್ನು ಒಗ್ಗೂಡಿಸುವುದು.

ಏ. ಇದುವರೆಗೂ ತಿಳಿಯದಿರುವ ಅನ್ವೇಶಿಸಿಲ್ಲದ ಮತ್ತು ಸಾಂಪ್ರದಾಯಿಕ ಕೃಷಿ ಮತ್ತು ಕೊಯ್ಲೋತ್ತರ ನಿರ್ವಹಣೆ ವಿಧಾನಗಳಲ್ಲಿ ಆಧುನಿಕತೆಯನ್ನು ತರಲು ವೈಜ್ಞಾನಿಕತೆ ಮತ್ತು ಸಂಶೋಧನೆ ಹಾಗೂ ಅಭಿವೃದ್ಧಿ ವಿಷಯಗಳನ್ನು ಪರಿಚಯಿಸುವುದು.

ಐ. ರೈತರ ಸಂಸ್ಥೆಗಳು, ಸ್ವಸಹಾಯ ಗುಂಪುಗಳು, ಮಹಿಳಾ ಅಭಿವೃದ್ಧಿ ಗುಂಪುಗಳು ಮೊದಲಾದ ನಿರ್ದಿಷ್ಟ ಗುಂಪಿನವರಿಗೆ, ರಾಜ್ಯದ ಕೃಷಿ ಅಧಿಕಾರಿಗಳಿಗೆ ಪ್ರಸಿದ್ಧ ವಿಶ್ವವಿದ್ಯಾಲಯಗಳ ಸಹಭಾಗಿತ್ವದಲ್ಲಿ ನಿರಂತರವಾಗಿ ತಂತ್ರಜ್ಞಾನ ವಿನಿಮಯ, ತಿಳುವಳಿಗೆ ಮತ್ತು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವುದು.

ಒ. ಉದ್ದಿಮೆಗಳ ಸಾಮಾಜಿಕ ಜವಾಬ್ದಾರಿಯ ಚಟುವಟಿಕೆಯ ಭಾಗವಾಗಿ ಕೌಶಲ್ಯ ಬೆಳವಣಿಗೆ ಮತ್ತು ನಿರ್ದಿಷ್ಟ ತರಬೇತಿ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸುವುದು.

## 4.5 ರಾಜ್ಯದ ಕೃಷಿ ರಫ್ತನ್ನು ಹೆಚ್ಚಿಸುವುದು

ಅ. ಕರ್ನಾಟಕದ ವಿಶಿಷ್ಟ ಕೃಷಿ ಆಹಾರ ಉತ್ಪನ್ನಗಳಿಗೆ 'ಬ್ರಾಂಡ್ ಇಮೇಜ್' ಸೃಷ್ಟಿಸುವುದು ಮತ್ತು ಮಾರುಕಟ್ಟೆಯಲ್ಲಿ ಪ್ರಾಬಲ್ಯ ಪಡೆಯಲು ಪ್ರಮುಖ ಉತ್ಪನ್ನಗಳನ್ನು ಅಭಿವೃದ್ಧಿಪಡಿಸುವುದು.

ಆ. ಹೊಸ ಮಾರುಕಟ್ಟೆಗಳನ್ನು ಮತ್ತು ಹೊಸ ಉತ್ಪನ್ನಗಳನ್ನು ಹಾಗೂ ಪರ್ಯಾಯ ಮಾರುಕಟ್ಟೆ ಅವಕಾಶಗಳನ್ನು ಸೃಷ್ಟಿಸುವುದು

ಇ. ಯೂರೋಪಿಯನ್ ಯೂನಿಯನ್ (EU), ಹಜಾರ್ಡ್ ಎನಾಲಿಸಿಸ್ ಕ್ರಿಟಿಕಲ್ ಕಂಟ್ರೋಲ್ ಪಾಯಿಂಟ್ (HACCP), ಫುಡ್ ಅಂಡ್ ಡ್ರಗ್ ಅಡ್ಮಿನಿಸ್ಟ್ರೇಷನ್ (FDA) ಮತ್ತು ಇನ್ನಿತರ ಅಂತರಾಷ್ಟ್ರೀಯ ಮಾನಕಗಳನ್ನು ಅನುಸರಿಸಿ ಮೌಲ್ಯವರ್ಧಿತ ಉತ್ಪನ್ನಗಳನ್ನು ರಫ್ತು ಮಾಡುವುದು ಮತ್ತು ಹೆಚ್ಚು ಲಾಭ ಗಳಿಕೆಯನ್ನು ಪ್ರೋತ್ಸಾಹಿಸುವುದು.

ಈ. ರಾಜ್ಯದಲ್ಲಿ ಸಣ್ಣ ದರ್ಜೆಯ ಕೃಷಿ ಆಧಾರಿತ ಘಟಕಗಳು ವಿಶ್ವ ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕತೆ ಕಾಯ್ದುಕೊಳ್ಳುವಂತೆ ಮಾಡಲು ವಿಶೇಷ ಒತ್ತು ನೀಡುವುದು.

## 4.6 ಕೃಷಿ ಮತ್ತು ಸಂಬಂಧಿತ ವಲಯಗಳಲ್ಲಿ ಬಂಡವಾಳ ಹೂಡಿಕೆ

ಅ. ಕೃಷಿ ಮತ್ತು ಸಂಬಂಧಿತ ವಲಯಗಳಲ್ಲಿ ಮೂಲಭೂತ ಸೌಕರ್ಯಗಳಿಗೆ ಮತ್ತು ಕೈಗಾರಿಕೆಗಳಿಗೆ, ತಂತ್ರಜ್ಞಾನ, ಸಂಶೋಧನೆ, ಕೌಶಲ್ಯ ಅಭಿವೃದ್ಧಿಗಳಲ್ಲಿ ವ್ಯವಸ್ಥಿತ ಮತ್ತು ಪಾರದರ್ಶಕ ಕಾರ್ಯಕ್ರಮಗಳಿಂದ ಬಂಡವಾಳವನ್ನು ಆಕರ್ಷಿಸುವುದು.

ಆ. ರಾಜ್ಯದಾದ್ಯಂತ ಉತ್ತಮ ಸಮತೋಲನ ರೀತಿಯಲ್ಲಿ ಕೃಷಿ ಕೈಗಾರೀಕರಣವನ್ನು ಮತ್ತು ಸಣ್ಣ, ಮಧ್ಯಮ ಹಾಗೂ ಬೃಹತ್ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವುದು.

ಇ. ಪಾರದರ್ಶಕತೆಯಿಂದ ಖಾಸಗಿ ವಲಯಗಳನ್ನು ಕೃಷಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ, ಕಾರ್ಯಚಟುವಟಿಕೆ ಮತ್ತು ನಿರ್ವಹಣೆಯಲ್ಲಿ ಭಾಗವಹಿಸುವುದನ್ನು ಪ್ರೋತ್ಸಾಹಿಸುವುದು.

## 4.7 ಬಂಡವಾಳ ಹೂಡಿಕೆದಾರರಿಗೆ ಪೂರಕವಾದ ನೀತಿಗಳು ಮತ್ತು ಕಾನೂನು ಚೌಕಟ್ಟು

ಅ. ಕೃಷಿ ವಾಣಿಜ್ಯ ಅಭಿವೃದ್ಧಿಗಾಗಿ ಇತರೆ ಸಂಸ್ಥೆಗಳ ಸಹಯೋಗದೊಂದಿಗೆ ವಿಶೇಷ ಉದ್ದೇಶದ ಸಂಸ್ಥೆಯನ್ನು ಸ್ಥಾಪಿಸುವುದು.

ಆ. ಕೃಷಿ ಉತ್ಪಾದನೆ, ಸಂಶೋಧನೆ ಮತ್ತು ಅಭಿವೃದ್ಧಿ, ಕೃಷಿ ಸಂಸ್ಕರಣೆ ಹಾಗೂ ಇತರೆ ಸಂಬಂಧಿತ ವಲಯಗಳ ಬೆಂಬಲಕ್ಕೆ ಉತ್ತಮ ಸಾಂಸ್ಥಿಕ ಮಾದರಿಗಳನ್ನು ನಿರ್ಮಿಸಿ ಪೂರಕ ವಾತಾವರಣ ಮತ್ತು ತ್ವರಿತಗತಿಯ ತೀರ್ಮಾನದ ಮೂಲಕ ಕೃಷಿ ಉತ್ಪನ್ನಗಳಿಗೆ ಪೂರೈಕೆ ವ್ಯವಸ್ಥೆಯ ಸಮಸ್ಯೆಗಳನ್ನು ನಿವಾರಿಸುವುದು.

ಇ. ಮೌಲ್ಯ ವರ್ಧಿತ ಕೃಷಿ ಹಾಗೂ ಆಹಾರ ಉತ್ಪನ್ನಗಳ ರಫ್ತನ್ನು ಉತ್ತೇಜಿಸಲು ಕಾರ್ಯನೀತಿ ಬೆಂಬಲ, ಪ್ರೋತ್ಸಾಹ ಮತ್ತು ಸೌಲಭ್ಯಗಳನ್ನು ಒದಗಿಸುವಿಕೆ.

ಈ. ಬಂಡವಾಳ ಹೂಡಿಕೆಗಾಗಿ ಏಕ ಗವಾಕ್ಷಿ ಮಂಜೂರಾತಿ.

ಉ. ಹೂಡಿಕೆದಾರರ ನಿಯತಕಾಲಿಕ ಸಭೆಗಳು ಮತ್ತು ರೋಡ್ ಶೋಗಳನ್ನು ನಡೆಸುವುದು, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಕೃಷಿ ಮೇಳಗಳಲ್ಲಿ, ವ್ಯಾಪಾರ ಮೇಳಗಳಲ್ಲಿ ಭಾಗವಹಿಸುವುದು.

## 5. ಕರ್ನಾಟಕ ಕೃಷಿ ವಾಣಿಜ್ಯ ಅಭಿವೃದ್ಧಿ ನಿಗಮ (KABDC)

5.1 ನೀತಿಯಲ್ಲಿ ಉಲ್ಲೇಖಿಸಿರುವ ದೃಷ್ಟಿಕೋನವನ್ನು ಸಾಕಾರಗೊಳಿಸಲು, ವಿಶೇಷ ಉದ್ದೇಶದ ಸಂಸ್ಥೆಯಾದ ಕರ್ನಾಟಕ ಕೃಷಿ ವಾಣಿಜ್ಯ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಲಾಗುವುದು. ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣ ಹಾಗೂ ರಫ್ತು ನಿಗಮ ನಿಯಮಿತಕ್ಕೆ (KAPPEC) ಕರ್ನಾಟಕ ಕೃಷಿ ವಾಣಿಜ್ಯ ಅಭಿವೃದ್ಧಿ ನಿಗಮದ (KABDC) ನಿರ್ವಹಣೆ ಮತ್ತು ಮೇಲ್ವಿಚಾರಣೆಯನ್ನು ಹಾಗೂ ಅದನ್ನು ಪ್ರತ್ಯೇಕ ಘಟಕದಂತೆ ನಿರ್ವಹಿಸುವ ಜವಾಬ್ದಾರಿಯನ್ನು ಕೊಡಲಾಗುತ್ತದೆ. ವಿಶೇಷ ಉದ್ದೇಶಿತ ಸಂಸ್ಥೆಯ ಕಾರ್ಯಚಟುವಟಿಕೆಗಳು ಈ ಕೆಳಕಂಡ ಅಂಶಗಳನ್ನು ಒಳಗೊಂಡಿರುತ್ತದೆ :–

ಅ. ಯೋಜನೆಗಳ ಅವಕಾಶವನ್ನು ಗುರುತಿಸುವುದು ಮತ್ತು ಗುರುತಿಸಲಾದ ಯೋಜನೆಗಳಿಗೆ ಬಂಡವಾಳ ಸೌಲಭ್ಯಕ್ಕೆ ಬೇಕಾದ ಅನುಕೂಲತೆ ಒದಗಿಸುವುದು

ಆ. ಹೂಡಿಕೆದಾರರ ಸಮಾವೇಶ, ರೋಡ್ ಶೋ ಮೊದಲಾದವುಗಳನ್ನು ಆಯೋಜಿಸುವುದು

ಇ. ಬಂಡವಾಳ ಹೂಡಿಕೆಯನ್ನು ಹೆಚ್ಚಿಸಲು ಸಹಾಯಕವಾಗುವಂತೆ ಪರಿಣಿತರ ಹಾಗೂ ಏಜನ್ಸಿಗಳ ನೇಮಕ ಮಾಡುವುದು

ಈ. ಬಂಡವಾಳ ಹೂಡಿಕೆಗೆ ಸಂಬಂಧಿಸಿದ ವಿಷಯಗಳನ್ನು, ಒಡಂಬಡಿಕೆ ಪತ್ರ (MoU), ನಿಖರವಾದ ಒಪ್ಪಂದಗಳು ಇತ್ಯಾದಿಗಳ ಬಗ್ಗೆ ಕಾಲಕಾಲಕ್ಕೆ ಅನುಸರಣ ಕ್ರಮ ಜರುಗಿಸುವುದು

ಉ. ಏಕ ಗವಾಕ್ಷಿ ಮಂಜೂರಾತಿ ಏಜನ್ಸಿಯಾಗಿ ಕಾರ್ಯ ನಿರ್ವಹಿಸುವುದು

ಊ. ಹೂಡಿಕೆಗಳ ಪ್ರಗತಿ ಮತ್ತು ವರದಿಗಳನ್ನು ದಾಖಲಿಸುವುದು

ಋ. ಕಾರ್ಯ ನೀತಿಯ ದೃಷ್ಟಿಕೋನ ಸಾಧಿಸಲು ಇತರೆ ಸೂಕ್ತವಾದ ಚಟುವಟಿಕೆಗಳನ್ನು ಆಯೋಜಿಸುವುದು

## 6. ಕೃಷಿ ಪರಿಕರ ವಲಯದ ಅಭಿವೃದ್ಧಿ

6.1 ಸುಸ್ಥಿರ ಕೃಷಿ ಬೆಳವಣಿಗೆಗೆ ಬಹುಮುಖ್ಯವಾಗಿ ಸದೃಢ ಕೃಷಿ ಪರಿಕರ ವಲಯದಲ್ಲಿ ಈ ಕೆಳಕಂಡ ಅಂಶಗಳನ್ನು ಅಭಿವೃದ್ಧಿಗೊಳಿಸುವುದು ಹಾಗೂ ಇದು ಅಷ್ಟಕ್ಕೇ ಸೀಮಿತವಾಗಿರುವುದಿಲ್ಲ :–

ಅ. ಉನ್ನತ ಮಟ್ಟದ ಬೀಜ, ಸಂಕರಣ / ಉತ್ತಮ ವೈವಿಧ್ಯದ ಸಸಿಗಳ ಉತ್ಪಾದನೆ ಮತ್ತು ಲಭ್ಯತೆ

ಆ. ಅಂಗಾಂಶ ಕೃಷಿ ಪ್ರಯೋಗಾಲಯಗಳು ಮತ್ತು ಪ್ರಾತ್ಯಕ್ಷಿಕೆ ಕೃಷಿ ಕ್ಷೇತ್ರ

ಇ. ಬೀಜೋತ್ಪಾದನೆ, ಸಂಸ್ಕರಣೆ ಹಾಗೂ ಶೇಖರಣೆಗೆ ಬೃಹತ್ ಕೇಂದ್ರಗಳ ಸ್ಥಾಪನೆ

ಈ. ಬೀಜ ಪ್ರಮಾಣನ ಕೇಂದ್ರಗಳು

ಉ. ಪಶುಸಂಗೋಪನೆಯಲ್ಲಿ ಕೃತಕ ಗರ್ಭಧಾರಣೆ

ಊ. ಪಶುಸಂಗೋಪನೆಯಲ್ಲಿ ಕೀಟಬಾಧೆ ನಿರ್ವಹಣೆ

ಋ. ಪ್ರಾಣಿ ಆರೋಗ್ಯ ರಕ್ಷಣೆ ಮತ್ತು ತಳಿ ಸಂವರ್ಧನ ಸೇವೆಗಳು ಹಾಗೂ ಪಶುಸಂಗೋಪನೆಯಲ್ಲಿ ರೋಗ ನಿರ್ವಹಣೆ

ಎ. ಕೃಷಿ, ಬೆಳೆ, ಮೀನುಗಾರಿಕೆ ಮತ್ತು ಪಶುಸಂಗೋಪನೆಗೆ ವಿಮೆ

ಏ. ಸಮಗ್ರ ನೀರಾವರಿ ಪದ್ದತಿಗಳ ಅಭಿವೃದ್ಧಿ

ಐ. ಸಸ್ಯ ಸಂರಕ್ಷಣಾ ರಾಸಾಯನಿಕ ಮತ್ತು ಜೈವಿಕ ಪೀಡೆ ನಾಶಕಗಳು

ಒ. ಜಾನುವಾರು, ಕೋಳಿ, ಪ್ರಾಣಿಗಳಿಗೆ ಮೇವು ಮತ್ತು ಆಹಾರದ ಅಭಿವೃದ್ಧಿ

ಓ. ಜಾನುವಾರು ಮತ್ತು ಪಶು ಔಷಧಗಳು

ಔ. ಹಸಿರು ಮನೆ ರಚನೆ ಮತ್ತು ಉಪ-ಪದ್ದತಿಗಳು, ಸಸ್ಯಗಳ ಬೆಳೆ ಮಾಧ್ಯಮಗಳ ಅಭಿವೃದ್ಧಿ.

ಕ. ಆಹಾರ ಸಂಸ್ಕರಣೆಯ ಉಪಕರಣಗಳ ತಯಾರಿಕೆ

ಕಿ. ಗ್ರಾಮೀಣ ತಂತ್ರಜ್ಞಾನ ಮತ್ತು ನವೀಕರಿಸಬಹುದಾದ ಇಂಧನ ಉತ್ಪಾದನಾ ವ್ಯವಸ್ಥೆ

ಖ. ನಗರ / ಪಟ್ಟಣಗಳ ತ್ಯಾಜ್ಯವನ್ನು ಬಳಸಿ ಸಾವಯವ ಗೊಬ್ಬರ ತಯಾರಿಸುವ ಘಟಕಗಳ ಅಭಿವೃದ್ಧಿ

ಖು. ಕೃಷಿ ಮತ್ತು ಗ್ರಾಮೀಣ ಕ್ಷೇತ್ರಗಳಿಗೆ ಆರ್ಥಿಕ ನೆರವು

ಖಿ. ಕೃಷಿ ಹಾಗೂ ಸಂಬಂಧಿತ ವಲಯಗಳಿಗೆ ಕಾರ್ಯನಿರ್ವಹಣಾ ಮತ್ತು ಮಾಹಿತಿ ಸಂಗ್ರಹ ವ್ಯವಸ್ಥೆ ಕಲ್ಪಿಸುವುದು.

## 7. ಪ್ರಮುಖ ಉತ್ಪನ್ನಗಳ ಅಭಿವೃದ್ಧಿಗೆ ವಿಶೇಷ ಗಮನ

7.1 ಕರ್ನಾಟಕ ರಾಜ್ಯ ಕೃಷಿ ವಲಯದ ಉತ್ಪನ್ನಗಳನ್ನು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಪೂರೈಸಲು ಅವಶ್ಯಕವಾದ ತಂತ್ರಗಳನ್ನು ರೂಪಿಸಿ ಸ್ಪರ್ಧಾತ್ಮಕತೆ ಮತ್ತು ವೈಶಿಷ್ಟ್ಯಗಳನ್ನುಳ್ಳ ಆಯ್ದ ಉತ್ಪನ್ನಗಳಿಗೆ ಉತ್ತೇಜನ ನೀಡಲಾಗುವುದು. ಬೀಜೋತ್ಪಾದನೆಯಿಂದ ಪ್ರಾರಂಭಿಸಿ ಬೆಳೆ ಸುಧಾರಣೆ, ಉತ್ಪಾದಕತೆ ಮತ್ತು ಸಂರಕ್ಷಣೆ, ಕೊಯ್ಲು ಪೂರ್ವ, ಕೊಯ್ಲೋತ್ತರ ನಿರ್ವಹಣೆ, ಸಂಗ್ರಹಣೆ, ಸಂಸ್ಕರಣೆ, ಪ್ಯಾಕೇಜಿಂಗ್‌ವರೆಗೆ ನಡೆಯುವ ಎಲ್ಲಾ ಚಟುವಟಿಕೆಗಳಲ್ಲಿ ಉಂಟಾಗಬಹುದಾದ ಅಡಚಣೆಗಳನ್ನು ನಿವಾರಿಸಲು ಮಾರ್ಗೋಪಾಯಗಳನ್ನು ರೂಪಿಸಲಾಗುವುದು. ರಫ್ತು ವಹಿವಾಟಿನಲ್ಲಿ ಬರಬಹುದಾದ ಅಡಚಣೆಗಳನ್ನು ನಿವಾರಿಸಿ, ಈ ಉತ್ಪನ್ನಗಳಿಗೆ ವಿಶ್ವಮಾರುಕಟ್ಟೆಯಲ್ಲಿ ಉತ್ತಮ ಸ್ಥಾನಮಾನ ಹಾಗೂ ಉತ್ತಮ ಬೆಲೆ ದೊರೆಯುವಂತೆ ಮಾಡಲಾಗುವುದು ಹಾಗೂ ಸೂಕ್ತ ಸ್ಥಳಗಳಲ್ಲಿ ನಿರ್ದಿಷ್ಟ ಮೌಲ್ಯವರ್ಧನೆ ಉದ್ಯಾನಗಳನ್ನು ಸ್ಥಾಪಿಸುವುದೂ ಸಹ ಒಳಗೊಂಡಿರುತ್ತದೆ.

## 8. ಬ್ರಾಂಡ್ ಅಭಿವೃದ್ಧಿ

8.1 ಭೌಗೋಳಿಕ ಹಿನ್ನೆಲೆಯುಳ್ಳ ಬ್ಯಾಡಗಿ ಮೆಣಸಿನಕಾಯಿ, ಕೊಡಗಿನ ಜೇನು, ಗುಲಾಬಿ ಈರುಳ್ಳಿ, ನಂಜನಗೂಡಿನ ರಸಬಾಳೆ ಇತ್ಯಾದಿ ಉತ್ಪನ್ನಗಳಿಗೆ ಮಾರುಕಟ್ಟೆಯನ್ನು ವಿಸ್ತರಿಸಿ ಉತ್ತಮ ಬೆಲೆ ದೊರಕಿಸಿಕೊಡುವುದಕ್ಕಾಗಿ ಪ್ರತಿ ಉತ್ಪನ್ನಗಳಿಗೆ ಬ್ರಾಂಡ್ ಅಭಿವೃದ್ಧಿಪಡಿಸಲಾಗುವುದು. ಈ ಉತ್ಪನ್ನಗಳ ನಿರ್ದಿಷ್ಟ ಪ್ರದೇಶಗಳನ್ನು ಗುರುತಿಸುವುದು, ಗುಣ ನಿಯಂತ್ರಣಾ ಪ್ರಮಾಣೀಕರಣ ವ್ಯವಸ್ಥೆ ರೂಪಿಸುವುದು, ಮೌಲ್ಯವರ್ಧನೆ ಮತ್ತು ಬ್ರಾಂಡಿಗ್‌ಗೆ ಉತ್ಪಾದಕಾ ಸಂಸ್ಥೆಗಳು, ಸಹಕಾರ ಸಂಘಗಳು ಹಾಗೂ ಖಾಸಗೀ ವಲಯಗಳನ್ನು ಪ್ರೋತ್ಸಾಹಿಸಲಾಗುವುದು. ಇದರ ಜೊತೆಗೆ ಈ ವಿಷಯಗಳಿಗೆ ಸಂಬಂಧಿಸಿದಂತೆ ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸುವುದು ಅಥವಾ ಪ್ರಸ್ತುತ ಇರುವ ಸಂಶೋಧನಾ ಕೇಂದ್ರಗಳನ್ನು ಉಪಯೋಗಿಸಿಕೊಳ್ಳುವುದು, ಇತ್ಯಾದಿ ಈ ದಿಶೆಯಲ್ಲಿ ಕೈಗೊಳ್ಳಲಾಗುವ ಕೆಲವು ಕ್ರಮಗಳಾಗಿವೆ.

## 9. ಒಪ್ಪಂದ ಕೃಷಿ

9.1 ರಾಜ್ಯದ ಬೆಳವಣಿಗೆಯನ್ನು ಹೆಚ್ಚಿಸಲು "ಒಪ್ಪಂದ ಕೃಷಿಗೆ"ಅನುಮತಿ ನೀಡಲಾಗುವುದು. ಖಾಸಗಿ ವಲಯ ಅಥವಾ ಇತರೆ ಸಂಸ್ಥೆಗಳು ಎ.ಪಿ.ಎಂ.ಸಿ ಕಾಯ್ದೆಯನ್ವಯ ಒಪ್ಪಂದ ಕೃಷಿ ಮಾಡಲು ಅರ್ಹರಿರುತ್ತಾರೆ.

## 10. ಕೃಷಿ, ಬೇಸಾಯ, ಹೈನುಗಾರಿಕೆ, ಕೋಳಿ ಸಾಕಾಣಿಕೆ, ಮೀನುಗಾರಿಕೆ, ರೇಷ್ಮೆ, ಜೇನು ಕೃಷಿ ಮತ್ತು ಪಶುಸಂಗೋಪನೆ

10.1 ಅನುತ್ಪಾದಕ ತೋಟಗಳು, ಕೀಳು ಗುಣಮಟ್ಟದ ವಂಶವಾಹಿಯ ಬೀಜಗಳಿಂದಾಗುವ ಕುಂಠಿತ ಉತ್ಪಾದನೆ, ನಿರ್ವಹಣೆಯ ಕೊರತೆ, ಹೆಚ್ಚಿನ ಕೀಟ ಹಾಗೂ ರೋಗಬಾಧೆ ಇತ್ಯಾದಿ ತೊಂದರೆಗಳನ್ನು ನಿವಾರಿಸಲು ಆಧುನಿಕ ಪದ್ಧತಿ ಮತ್ತು ತಂತ್ರಜ್ಞಾನಗಳು ಹಾಗೂ ವೈಜ್ಞಾನಿಕ ನಿರ್ವಹಣಾ ತಂತ್ರಗಳನ್ನು ಅಳವಡಿಸುವುದು ಅವಶ್ಯಕವಾಗಿರುತ್ತದೆ.

10.2 ಈ ನೀತಿಯು ಕೆಳಕಂಡ ವಿಷಯಗಳಿಗೆ ಒತ್ತು ನೀಡುತ್ತಿದೆ :–

- ಅ. ನೈಸರ್ಗಿಕ ಸಂಪನ್ಮೂಲ ನಿರ್ವಹಣೆ
- ಆ. ಹೆಚ್ಚು ಮತ್ತು ಅತಿ ಹೆಚ್ಚು ಸಾಂದ್ರತೆಯ ತೋಟಗಳು
- ಇ. ನೆರಳು ಬಲೆ (ಶೇಡ್‌ನೆಟ್) ಬೇಸಾಯ, ಮೇಲ್ಪದರ ಮುಚ್ಚುವ (ಮಲ್ಚಿಂಗ್) ಹಾಗೂ ಪ್ಲಾಸ್ಟಿಕ್ ಕೊಳವೆಗಳ (ಪ್ಲಾಸ್ಟಿಕ್ ಟನಲ್) ಬಳಕೆ
- ಈ. ಸಾವಯವ ಕೃಷಿ
- ಉ. ಜಲಾನಯನ ನಿರ್ವಹಣೆ
- ಊ. ಬಂಜರು ಭೂಮಿ ಅಭಿವೃದ್ಧಿ
- ಋ. ನೀರಿನ ಸಂರಕ್ಷಣೆ ಮತ್ತು ಮಳೆ ನೀರು ಕೊಯ್ಲು
- ಎ. ಒಣ ಭೂಮಿ ಕೃಷಿ
- ಏ. ಅಂಗಾಂಶ ಕೃಷಿ ಮತ್ತು ಸಸ್ಯ ಕಸಿ ಪದ್ಧತಿಗಳು
- ಐ. ತರಕಾರಿಗಳು, ಹೂವುಗಳು, ಅಲಂಕಾರಿಕ ಸಸ್ಯಗಳು, ಹಣ್ಣುಗಳು ಇತ್ಯಾದಿಗಳ ಗುಣ ಮಟ್ಟದ ಬೀಜ / ಸಸ್ಯ ಉತ್ಪಾದನೆಗಾಗಿ ಸಸ್ಯವಾಟಿಕೆ (ನರ್ಸರಿ) ಅಭಿವೃದ್ಧಿ ಮತ್ತು ನಿರ್ವಹಣೆ
- ಒ. ಏಕದಳ ಧಾನ್ಯ, ತೃಣ ಧಾನ್ಯ, ದ್ವಿದಳ ಧಾನ್ಯ, ಎಣ್ಣೆ ಕಾಳು, ನಾರಿನ ಬೆಳೆಗಳು, ಕಬ್ಬು ಮತ್ತು ಮೇವಿನ ಬೆಳೆಗಳನ್ನು ಬೆಳೆಯುವುದು
- ಓ. ಬಹುವಾರ್ಷಿಕ ಹಾಗೂ ಬಹುವಾರ್ಷಿಕವಲ್ಲದ ಹಣ್ಣುಗಳು, ತರಕಾರಿಗಳು, ಸಾಂಬಾರು ಪದಾರ್ಥಗಳು, ತೋಟದ ಬೆಳೆಗಳು, ಪುಷ್ಪಗಳು, ಗೊಂಚಲು ಎಲೆಗಳು, ಗಡ್ಡೆ ಪುಷ್ಪಗಳು, ಬಿಡಿ ಪುಷ್ಪಗಳು, ತೋಟದ ಪುಷ್ಪಗಳು, ನೈಸರ್ಗಿಕ ಬಣ್ಣಗಳು, ಔಷಧೀಯ ಸಸ್ಯಗಳು ಮತ್ತು ಪರಿಮಳ ದ್ರವ್ಯದ ಸಸ್ಯಗಳನ್ನು ಬೆಳೆಸುವುದು
- ಔ. ವೃಕ್ಷ ಕೃಷಿ
- ಕ. ನಿರ್ಬಂಧಿತ ವಾತಾವರಣದಲ್ಲಿ ಹೈ ಟೆಕ್ ಬೇಸಾಯ
- ಕಿ. ಉತ್ಪಾದಕತೆ ಕುಂದಿರುವ ಹಳತಾದ ತೋಟಗಳ ಪುನಶ್ಚೇತನ / ಬದಲೀಕರಣ
- ಖ. ಬೆಳೆ ಪೌಷ್ಠಿಕತೆ
- ಖ. ರೇಷ್ಮೆ ಕೃಷಿ
- ಖಿ. ರೇಷ್ಮೆ ಹುಳು ಸಾಕಣೆ
- ಗ. ಗೂಡು ನಂತರದ ತಾಂತ್ರಿಕತೆ
- ಗಿ. ಪ್ರಾಣಿ ವಂಶವಾಹಿ ಸಂಪನ್ಮೂಲ ನಿರ್ವಹಣೆ
- ಘ. ಕಡಲು ಮತ್ತು ಒಳನಾಡು ಮೀನುಗಾರಿಕೆ
- ಘಿ. ಶುದ್ಧ ಜಲ ಮೀನುಗಾರಿಕೆ

ಜಜ. ಚೌಳು ನೀರು ಮೀನುಗಾರಿಕೆ

ಚಚ. ಅಲಂಕಾರಿಕ ಮೀನುಗಾರಿಕೆ

ಂಂ. ಸಮಗ್ರ ಮೀನು ಕೃಷಿ

ಃಃ. ಪಶುಮಂದೆ ಸುಧಾರಣೆ, ಆರೋಗ್ಯ ಮತ್ತು ಫಲವತ್ತತೆ

ಅಅ. ಹೈನುಗಾರಿಕೆ

ಆಆ. ಕೃತಕ ಗರ್ಭಧಾರಣೆ

ಇಇ. ಹಸು, ಮೇಕೆ, ಎಮ್ಮೆ, ಕುರಿ, ಹಂದಿ ಮತ್ತು ಮೊಲ ಸಾಕಾಣಿಕೆ

ಈಈ. ಕೋಳಿ ಸಾಕಣಿಕೆ ಮತ್ತು ಮರಿಗಳ ಅಭಿವೃದ್ಧಿ

ಉಉ. ಜಾನುವಾರು ಮತ್ತು ಕುಕ್ಕುಟ ನಿರ್ವಹಣೆ

ಊಊ. ವಾಣಿಜ್ಯ ಉದ್ದೇಶಕ್ಕಾಗಿ ಮೊಟ್ಟೆ ಮತ್ತು ಮಾಂಸದ ಕೋಳಿ ಘಟಕಗಳು

ಋಋ. ಮೆಲುಕು ಹಾಕುವ ಸಣ್ಣ ಪ್ರಾಣಿಗಳ ಮತ್ತು ಮೊಲಗಳ ಸಮಗ್ರ ಅಭಿವೃದ್ಧಿ

ಎಎ. ಮರಿ ಕೋಣದ ರಕ್ಷಣೆ ಮತ್ತು ಸಾಕಣೆ

ಏಏ. ಜೇನು ಸಾಕಣೆಯಿಂದ ಪರಾಗ ಸ್ಪರ್ಷ ಬೆಂಬಲ

ಐಐ. ಜೇನು ಕೃಷಿ

ಒಒ. ಮೇವಿನ ಬೆಳೆಗಳ ಬೇಸಾಯ, ಮೇವಿನ ಮರಗಳು, ಹುಲ್ಲುಗಾವಲುಗಳ ಪುನಶ್ಚೇತನದ ಮೂಲಕ ಮೇವಿನ ಅಭಿವೃದ್ಧಿ

ಓಓ. ಪ್ರಾಣಿ ಆಹಾರ

ಔಔ. ದೂರ ಸಂವೇದನೆ, ದತ್ತಾಂಶ ಆಧಾರಿತ ನಿರ್ವಹಣೆ ಮತ್ತು ನಿಖರ ಬೇಸಾಯ

ಕಕ. ಸಾಮರ್ಥ್ಯ ನಿರ್ಮಾಣ, ಕೌಶಲ್ಯ ಅಭಿವೃದ್ಧಿ, ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ತರಬೇತಿ

ಕಿಕಿ. ಕೃಷಿಯಲ್ಲಿ ಹಣಕಾಸಿನ ಸಹಾಯ ಮತ್ತು ವಿಮೆ

## 11. ಸಾವಯವ ಕೃಷಿ ಗುಂಪುಗಳು

11.1 ಸಾವಯವ ಕೃಷಿ ಉತ್ಪನ್ನಗಳ ಬೇಡಿಕೆ ಹಾಗೂ ಆರೋಗ್ಯದ ಅರಿವು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಮತ್ತು ಕರ್ನಾಟಕ ರಾಜ್ಯದ ನೈಸರ್ಗಿಕ ಸಂಪನ್ಮೂಲಗಳ ಅನುಕೂಲತೆ ದೃಷ್ಟಿಯಿಂದ ನೀತಿಯು ಸಾವಯವ ಕೃಷಿ ಗುಂಪುಗಳನ್ನು ಪ್ರೇರೇಪಿಸುತ್ತದೆ. ಇವುಗಳಲ್ಲಿ ಅಕ್ಕಿ, ಜೋಳ, ಮೆಕ್ಕೆ ಜೋಳ, ರಾಗಿ, ನವಣೆ, ಬೆಲ್ಲ, ಹತ್ತಿ, ಮೆಣಸಿನಕಾಯಿ, ತೊಗರಿ, ಅಡಿಕೆ, ಕಾಫಿ, ಕಡಲೆ, ಸೂರ್ಯಕಾಂತಿ, ಆಲೂಗೆಡ್ಡೆ, ಟೊಮೆಟೋ, ಬಾಳೆಹಣ್ಣು, ಅರಿಷಿಣ, ತೋಟಗಾರಿಕೆ ಬೆಳೆಗಳು, ಮೀನುಗಾರಿಕೆ, ಸಾವಯವ ಆಹಾರದಿಂದ ಪಶು ಆಹಾರ ಇತ್ಯಾದಿ ಸರಕುಗಳು ಸೇರಿರುತ್ತವೆ. ಈ ಸಾವಯವ ಕೃಷಿ ಗುಂಪುಗಳು ದೊಡ್ಡ ಪ್ರಮಾಣದ ಸಾವಯವ ಕೃಷಿ, ಶೇಖರಣೆ, ಸಂಸ್ಕರಣೆ ಮತ್ತು ಪ್ಯಾಕೇಂಜಿಂಗ್‌ಗಳ ಅಗತ್ಯಗಳನ್ನು ಪೂರೈಸುತ್ತವೆ.

## 12. ಕೃಷಿ – ತೋಟ – ಪಶು ಸಂಗೋಪನೆ – ಮೀನುಗಾರಿಕೆ – ಆಹಾರ ಸಂಸ್ಕರಣೆ ಕಾರಿಡಾರ್

12.1 ಕರ್ನಾಟದಲ್ಲಿ ಸುಸ್ಥಿರ ಕೃಷಿಯನ್ನು ಅಭಿವೃದ್ಧಿಗೊಳಿಸುವ ಪ್ರಯತ್ನದಲ್ಲಿ, ರಾಜ್ಯಾದ್ಯಂತ ಸಮತೋಲನ ಕೃಷಿ ಮತ್ತು ಆಹಾರ ಕೈಗಾರೀಕರಣಕ್ಕೆ ಉತ್ತೇಜಿಸಲು, ರೈತರಿಗೆ ಹೆಚ್ಚುವರಿ ಆದಾಯ ಮತ್ತು ಸ್ಥಳೀಯರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಲು, ಕೃಷಿ–ತೋಟ–ಪಶು ಸಂಗೋಪನೆ–ಮೀನುಗಾರಿಕೆ–ಆಹಾರ ಸಂಸ್ಕರಣಗಳಿಗೆ ಉನ್ನತ ಮಟ್ಟದ ಕಾರಿಡಾರ್ ನಿರ್ಮಿಸಲಾಗುವುದು.

12.2 ಈ ಕಾರಿಡಾರನ್ನು ಪ್ರಮುಖ ರಸ್ತೆ ಮತ್ತು ರೈಲು ಮಾರ್ಗಗಳಿಗೆ ಹೊಂದಿಕೊಂಡಂತೆ ಅಭಿವೃದ್ಧಿಪಡಿಲಾಗುವುದು. ಆ ಸ್ಥಳಗಳಲ್ಲಿ ಈಗಾಗಲೇ ಇರುವ ಸಾಗಾಣಿಕೆ ಜಾಲಗಳ ಸೌಲಭ್ಯಗಳ ಉಪಯೋಗವನ್ನು ಪಡೆದುಕೊಳ್ಳುವುದು ಮತ್ತು ಕಾರಿಡಾರ್‌ಗಳ ಯೋಜನೆ ಪ್ರಕ್ರಿಯೆಯಿಂದ ಹೊಸ ಕ್ಷೇತ್ರಗಳಲ್ಲಿ ಹಸರೀಕರಣ ಹಾಗೂ ಈಗಾಗಲೇ ಹಸಿರಾಗಿರುವ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಅಭಿವೃದ್ಧಿಯನ್ನು

ಮಾಡಲಾಗುವುದು. ಯೋಜಿತ ಕಾರಿಡಾರ್‌ಗಳ ಸುಸ್ಥಿರ ಕಾರ್ಯ ನಿರ್ವಹಣೆಗೆ ಫೀಡರ್ ರಸ್ತೆ / ರೈಲು ಮಾರ್ಗಗಳನ್ನು ಹಿನ್ನಾಡು ಪ್ರದೇಶ, ಬೆಳೆಯುತ್ತಿರುವ ಪ್ರದೇಶ, ಪ್ರಸ್ತುತ ಮತ್ತು ಯೋಜಿತ ಕೈಗಾರಿಕ ಪ್ರದೇಶ ಮತ್ತು ಮಾರುಕಟ್ಟೆಗಳಿಗೆ ತಲುಪುವಂತೆ ಅಭಿವೃದ್ಧಿಪಡಿಸುವುದು. ಕಾರಿಡಾರ್ ಪ್ರಭಾವ ವಲಯದ ಎರಡೂ ಬದಿಗಳ 25 ಕಿಲೋಮೀಟರ್‌ಗಳಷ್ಟು ವ್ಯಾಪ್ತಿಯಲ್ಲಿ, ಹೆಚ್ಚು ಪ್ರಭಾವದ ಆರ್ಥಿಕ ವಲಯಗಳ ಅಭಿವೃದ್ಧಿ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿಯನ್ನು ಪರಿಗಣಿಸಲಾಗುತ್ತದೆ. ಈ ಕಾರಿಡಾರ್‌ನಲ್ಲಿ ಅಗತ್ಯವಾದ ಅಂಶಗಳಾದ ಅಭಿವೃದ್ಧಿ ಘಟಕಗಳು, ಕೃಷಿ ವಾಣಿಜ್ಯ ಬಂಡವಾಳ ವಲಯಗಳು, ಕೃಷಿವಾಣಿಜ್ಯ ಹೂಡಿಕೆ ಪ್ರದೇಶಗಳು, ಜ್ಞಾನ ಸಮೂಹಗಳು, ವಿಶೇಷ ತೋಟಗಾರಿಕೆ ಪ್ರವಾಸೋದ್ಯಮ ವಲಯಗಳು, ದೊಡ್ಡ ಪ್ರಮಾಣದ ನಿರ್ಬಂಧಿತ ಪರಿಸರ ಬೆಳವಣಿಗೆ, ಆಹಾರ ಸಂಸ್ಕರಣಾ ಕೈಗಾರಿಕೆಗಳು, ಆಹಾರ ಉದ್ಯಾನಗಳು ಮತ್ತು ವಿಶೇಷ ಆರ್ಥಿಕ ಆಹಾರ ವಲಯಗಳನ್ನು ಒಳಗೊಂಡಿರುತ್ತದೆ.

12.3 ಈ ಕಾರಿಡಾರ್ ಮತ್ತು ಸಮೂಹ ನಿರ್ಮಾಣದಲ್ಲಿ ಅಗತ್ಯವಾದ ರಕ್ಷಣೆ ಮತ್ತು ಸ್ವಚ್ಛತೆಯನ್ನು ಕಾಪಾಡಲು ಕರ್ನಾಟಕ ರಾಜ್ಯ ಸರ್ಕಾರವು ಶಾಸನ ಮತ್ತು ಅಧಿನಿಯಮಗಳ ಅನ್ವಯ ತನ್ನ ಅಧಿಕೃತ ಏಜನ್ಸಿಗಳ ಮೂಲಕ ಕಠಿಣ ಕ್ರಮಗಳನ್ನು ಜಾರಿಗೊಳಿಸುತ್ತದೆ.

## 13 ಕೃಷಿ ಮೂಲಭೂತ ಸೌಕರ್ಯ

ಕೃಷಿ ಮೂಲಭೂತ ಸೌಕರ್ಯದ ಅಭಿವೃದ್ಧಿಯನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವಗಳ ಮುಖಾಂತರ ರಚನಾತ್ಮಕ ಮತ್ತು ವ್ಯವಹಾರಿಕ ದೃಷ್ಟಿಕೋನದಿಂದ ಮಾಡಿದಾಗ ಕೃಷಿ ವಾಣಿಜ್ಯ ಕೈಗಾರಿಕೋದ್ಯಮದಲ್ಲಿ ಅವಕಾಶಗಳು ಲಭ್ಯವಾಗುತ್ತವೆ. ಈ ಕಾರ್ಯನೀತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಅನೇಕ ಮೂಲ ಸೌಕರ್ಯಗಳ ಅನುಕೂಲತೆಗಳನ್ನು ಯೋಜಿಸಲಾಗುವುದು.

13.1 ಕೊಯ್ಲೋತ್ತರ ಮೂಲಭೂತ ಸೌಕರ್ಯಗಳು

ಅ. ಸಂಗ್ರಹ ಕೇಂದ್ರಗಳ ಸಂಪರ್ಕ ಜಾಲ, ಶೇಖರಣಾ ಕೊಠಡಿಗಳು, ಪೂರ್ವ ಶೀತಲೀಕರಣ, ಶೀತಲ ಗೃಹ, ಪ್ರಾಥಮಿಕ ಸಂಸ್ಕರಣ ಕೇಂದ್ರಗಳು, ಚಲಿಸುವ ಸಂಸ್ಕರಣ ಘಟಕಗಳು, ಹೆಚ್ಚು ಆರ್ದ್ರತೆಯ ಶೀತಲ ಗೃಹ, ಹೆಚ್ಚಿನ ಪ್ರಮಾಣದ ಶೀತಲವಿರುವ ಶೀತಲ ಗೃಹ, ನಿರ್ಬಂಧಿತ ವಾತಾವರಣದ ಶೇಖರಣೆ, ಪರಿವರ್ತಿತ ವಾತಾವರಣ ಶೇಖರಣೆ, ವರ್ಗೀಕರಣ ಮತ್ತು ಪ್ಯಾಕಿಂಗ್ ಸ್ಥಳ, ಪ್ಯಾಕ್ ಮನೆಗಳು, ಶೀತಲೀಕರಣ ಸಾರಿಗೆ, ಉಗ್ರಾಣಗಳು ಮುಂತಾದವು

ಆ. ಉತ್ಪನ್ನಗಳ ಕಟಾವು ವಿಧಾನದಲ್ಲಿ ಯಾಂತ್ರೀಕರಣ

ಇ. ಮಧ್ಯಮ ಹಂತದಲ್ಲಿ ಉತ್ಪನ್ನಗಳ ವರ್ಗೀಕರಣ, ಸಂಗ್ರಹಣೆ, ಸ್ವಚ್ಛ ಮಾಡುವುದು ಮೊದಲಾದ ಕಾರ್ಯಗಳಿಗೆ ಸ್ಥಳಾವಕಾಶ

ಈ. ಉತ್ಪನ್ನಗಳ ವಿಂಗಡಣೆ, ವರ್ಗೀಕರಣ, ಸ್ವಚ್ಛತೆ, ವ್ಯಾಕ್ಸಿಂಗ್, ಹಣ್ಣು ಮಾಡುವುದು, ಪ್ಯಾಕೇಜಿಂಗ್ ಮತ್ತು ಪ್ಯಾಲೇಟೈಸೇಷನ್‌ಗಳನ್ನು ಕೈಗೊಳ್ಳಲು ಯಾಂತ್ರೀಕರಣ ಸೌಲಭ್ಯ ಒದಗಿಸುವುದು

ಉ. ಆಧುನಿಕ ಧಾನ್ಯ ಸಂಗ್ರಹಣಾ ವ್ಯವಸ್ಥೆ (Silo)

ಊ. ಸರಕಿನ ರವಾನೆ ಪೂರ್ವ ಉಪಚಾರ ಸೌಲಭ್ಯಗಳಾದ ಹೊಗೆಯಾಡುವಿಕೆ, ಕ್ಷ–ಕಿರಣಗಳ ಸ್ಕ್ರೀನಿಂಗ್, ಬಿಸಿ ನೀರಿನ ಉಪಚಾರ, ನೀರಿನ ಗಡಸುತನ ನಿವಾರಣಾ ಘಟಕ, ಉಷ್ಣ ಬಾಷ್ಪ ಉಪಚಾರ, ವಿದ್ಯುನ್ಮಾನ ಕಿರಣದಿಂದ ಸಂಸ್ಕರಣ, ಪ್ರದೀಪನ ಸೌಲಭ್ಯಗಳು ಇತ್ಯಾದಿಗಳನ್ನು ಒದಗಿಸುವುದು

ಋ. ಮೀನುಗಾರಿಕೆಯಲ್ಲಿ ಕೊಯ್ಲು ಮತ್ತು ಕೊಯ್ಲೋತ್ತರ ತಂತ್ರಜ್ಞಾನಗಳಾದ ನವೀನ ಮಾದರಿಯ ಮೀನುಗಾರಿಕೆ, ದೋಣಿ ಮತ್ತು ಸಲಕರಣೆಗಳು, ಸಂಸ್ಕರಣೆ, ಮೌಲ್ಯವರ್ಧನೆ ಮತ್ತು ಪ್ಯಾಕ್ ಮಾಡುವುದು

ಎ. ತೋಟಗಾರಿಕೆ, ಪುಷ್ಪ ಕೃಷಿ, ಮೀನುಗಾರಿಕೆ ಮತ್ತು ಪಶು ಉತ್ಪನ್ನಗಳಿಗೆ ವಿಶೇಷ ಸಾಗಣೆ ಘಟಕಗಳು

ಏ. ಶೀಘ್ರ ನಶಿಸುವ ಉತ್ಪನ್ನಗಳಿಗೆ ಕಾರ್ಗೋ ಸಂಕೀರ್ಣ

ಐ. ಟರ್ಮಿನಲ್ ಮಾರುಕಟ್ಟೆಗಳು

ಒ. ಸಮಗ್ರವಾದ ಕೃಷಿ ಸಾಗಾಣಿಕೆ ಸೌಕರ್ಯಗಳು ಮತ್ತು ಸಮೂಹಗಳು

ಓ. ಶೀಘ್ರ ನಶಿಸುವ ಮತ್ತು ನಶಿಸದ ಉತ್ಪನ್ನಗಳ ಚಿಲ್ಲರೆ ವ್ಯಾಪಾರ ಮಳಿಗೆಗಳು

13.2 ಕೃಷಿ–ತೋಟಗಾರಿಕೆ–ಪಶುಸಂಗೋಪನೆ–ಮೀನುಗಾರಿಕೆ–ಉತ್ಕೃಷ್ಟ ಗುಣಮಟ್ಟದ ಆಹಾರ ಸಂಸ್ಕರಣ ಕಾರಿಡಾರ್ ಕೈಗಾರಿಕಾ ಮೂಲಭೂತ ಸೌಲಭ್ಯಗಳು

ಅ. ಬೃಹತ್ ಪ್ರಮಾಣದ ಸುಮಾರು 5000 ಹೆಕ್ಟೇರ್ ಪ್ರದೇಶದಲ್ಲಿ ಆಹಾರ ಪಾರ್ಕ್, ಕೃಷಿ ವಿಶೇಷ ಆರ್ಥಿಕ ವಲಯಗಳು, ಸಂಸ್ಕರಣಾ ಸಮುಚ್ಛಯಗಳು, ಮೊದಲಾದವುಗಳನ್ನೊಳಗೊಂಡ ಬೃಹತ್ ಪ್ರಮಾಣದ ಕೃಷಿ ವಾಣಿಜ್ಯ ಬಂಡವಾಳ ಹೂಡಿಕೆ ವಲಯಗಳನ್ನು ಸ್ಥಾಪಿಸಲು ಯೋಜಿಸಲಾಗಿದೆ. ಇಂತಹ ವಲಯಗಳು ಉನ್ನತ ಗುಣಮಟ್ಟದ ಮೂಲಭೂತ ಸೌಲಭ್ಯಗಳನ್ನು ಹೊಂದಿರುತ್ತವೆ. ಇದರ ಜೊತೆಗೆ ಸಾಮಾನ್ಯ ಸೌಲಭ್ಯಗಳಾದ ನಿವೇಶನ ವರ್ಗೀಕರಣ, ರಸ್ತೆ, ವಿದ್ಯುತ್, ನೀರು, ಸಂಪರ್ಕ ಜಾಲ, ಒಳಚರಂಡಿ, ತ್ಯಾಜ್ಯ ನಿರ್ವಹಣಾ ಘಟಕ, ಮಳೆ ನೀರಿನ ಚರಂಡಿ, ಮಳೆ ನೀರು ಕೊಯ್ಲು, ಅಗ್ನಿಶಾಮಕ ವ್ಯವಸ್ಥೆ ಮೊದಲಾದವುಗಳನ್ನು ಹೊಂದಿರುತ್ತದೆ. ಇದರ ಜೊತೆಗೆ ವಿಶೇಷ ಮೂಲಭೂತ ಸೌಕರ್ಯಗಳಾದ ಹರಾಜು ಸ್ಥಳಗಳು, ಶೈತ್ಯಾಗಾರಗಳು, ಸ್ವಚ್ಛತಾ ಸೌಲಭ್ಯಗಳು, ಗುಣ ನಿಯಂತ್ರಣ ಪ್ರಯೋಗಾಲಯಗಳು, ಗುಣ ಪ್ರಮಾಣೀಕರಣ ಕೇಂದ್ರಗಳು, ಕಚ್ಚಾ ವಸ್ತು ಸಂಗ್ರಹಾಲಯಗಳು, ನಿರ್ಬಂಧಿತ ಮತ್ತು ಪರಿವರ್ತಿತ ವಾತಾವರಣದ ಸಂಗ್ರಹಣಾ ಕೇಂದ್ರಗಳು, ಪ್ರಾಥಮಿಕ ಸಂಸ್ಕರಣಾ ಕೇಂದ್ರಗಳು, ಕೇಂದ್ರೀಯ ಸಂಸ್ಕರಣಾ ಘಟಕಗಳು ಮೊದಲಾದವುಗಳನ್ನು ಹೊಂದಿರುತ್ತದೆ.

ಆ. ಆಯಕಟ್ಟಿನ ಹಾಗೂ ಪ್ರಮುಖ ಸ್ಥಳಗಳಲ್ಲಿ ಮುಖ್ಯ ಸರಕುಗಳಿಗಾಗಿ ಕೃಷಿ ವಾಣಿಜ್ಯ ಬಂಡವಾಳ ಹೂಡಿಕೆ ವಲಯಗಳನ್ನು ಸ್ಥಾಪಿಸುವ ಯೋಜನೆಯಿದೆ. ಈ ಸ್ಥಳಗಳು ಉನ್ನತ ತಂತ್ರಜ್ಞಾನದ ಸಾಮಾನ್ಯ ಹಾಗೂ ವಿಶೇಷ ಮೂಲಭೂತ ಸೌಕರ್ಯಗಳನ್ನು ಹೊಂದಿರುತ್ತದೆ.

ಇ. ಕೃಷಿ ಚಿಕಿತ್ಸಾಲಯಗಳು

ಈ. ಕೃಷಿ ಜಟ್ಟಿ / ಬಂದರು

ಉ. ಕೃಷಿ ಸರಕುಗಳ ನಿರ್ವಹಣೆಗಾಗಿ ರೈಲ್ವೆ ನಿಲ್ದಾಣದಲ್ಲಿ ಸ್ಥಳಾವಕಾಶ

ಊ. ಸಾಗಣಿಕಾ ಸಮುಚ್ಛಯ

ಋ. ಗುಣಮಟ್ಟದ ಹಾಗೂ ಪರಿಶುದ್ಧ ಹಾಲು ಉತ್ಪಾದನೆಗೆ ಮತ್ತು ಮೌಲ್ಯವರ್ಧಿತ ಸಂಸ್ಕರಣೆಗೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿ.

ಎ. ಭಾರತ ಸರ್ಕಾರದ ರಫ್ತು ಪರಿವೀಕ್ಷಣಾ ಪರಿಷತ್ತಿನ ಮಾರ್ಗಸೂಚಿಯನ್ವಯ ಆಧುನಿಕ ಮೀನುಗಾರಿಕೆ ಬಂದರುಗಳು ಮತ್ತು ಮೀನು ಸ್ವೀಕರಣಾ ಕೇಂದ್ರಗಳನ್ನು ಸ್ಥಾಪಿಸಲಾಗುವುದು ಹಾಗೂ ಪ್ರಸ್ತುತ ಇರುವ ಮೀನುಗಾರಿಕೆ ಬಂದರುಗಳನ್ನು ಸುಸಜ್ಜಿತವಾಗಿ ಆಧುನೀಕರಣಗೊಳಿಸಲಾಗುವುದು. ಈ ಪ್ರಕ್ರಿಯೆಯನ್ನು ಹಜಾರ್ಡ್ ಅನಾಲಿಸಿಸ್ ಮತ್ತು ಕ್ರಿಟಿಕಲ್ ಕಂಟ್ರೋಲ್ ಪಾಯಿಂಟ್‌ನ ಅಂಶಗಳನ್ನು ಪರಿಗಣಿಸಿ ಅಭಿವೃದ್ಧಿಪಡಿಸಲಾಗುವುದು.

ಏ. ಸಂಭಾವ್ಯ ಸ್ಥಳಗಳಲ್ಲಿ ಹೆಚ್ಚುವರಿಯಾಗಿ ಮೀನು ಇಳಿಸುವ ಕೇಂದ್ರಗಳನ್ನು ಅಭಿವೃದ್ಧಿಪಡಿಸಲಾಗುವುದು. ಇಂತಹ ಸ್ಥಳಗಳಲ್ಲಿ ಸುರಕ್ಷಿತವಾಗಿ ಮೀನು ಇಳಿಸುವ ಸೌಲಭ್ಯಗಳು, ಸಾಂಪ್ರದಾಯಿಕ ಮತ್ತು ಸಣ್ಣ ಪ್ರಮಾಣದ ಯಾಂತ್ರೀಕೃತ ಮೀನು ಹಿಡಿಯುವ ದೋಣಿಗಳು ಮತ್ತು ಸಂಬಂಧಪಟ್ಟ ಸಲಕರಣೆಗಳನ್ನು ದುರಸ್ತಿ ಮಾಡಲು ಮತ್ತು ಸಜ್ಜುಗೊಳಿಸಲು ಬೇಕಾದ ಸೌಲಭ್ಯಗಳನ್ನು ಒದಗಿಸಲಾಗುವುದು. ಇವುಗಳ ಜೊತೆಗೆ ಹರಾಜು ಸ್ಥಳಗಳು, ಬಲೆ ಸರಿಪಡಿಸುವ ಸ್ಥಳ, ಐಸ್ ಪ್ಲಾಂಟ್ ಮತ್ತು ಮೀನು ಹಿಡಿಯಲು ಬೇಕಾದ ಆರೋಗ್ಯಕರ ಗುಣಮಟ್ಟದ ಆಧುನಿಕ ಸೌಲಭ್ಯಗಳನ್ನು ನೀಡಲಾಗುವುದು.

ಐ. ಕೈಗಾರಿಕಾ ಸಮೂಹಕ್ಕೆ ಮತ್ತು ಪರಿಸರ ನಿಯಂತ್ರಣ ಪದ್ಧತಿಗೆ ಸಾಮಾನ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು. ಉದಾಹರಣೆಗೆ ಮಾಲಿನ್ಯ ನಿಯಂತ್ರಣ, ತ್ಯಾಜ್ಯ ವಸ್ತುಗಳ ನಿರ್ವಹಣೆ, ಗ್ರಾಮೀಣ ಹಾಗೂ ನಗರ ಕಸಾಯಿ ಮನೆಗಳ ಸ್ಥಾಪನೆ ಮತ್ತು ಆಧುನೀಕರಣ

13.3 ಕೃಷಿ–ತೋಟಗಾರಿಕೆ–ಪಶು ಸಂಗೋಪನೆ–ಮೀನುಗಾರಿಕೆ–ಅತ್ಯುನ್ನತ ತಾಂತ್ರಿಕತೆಯ ಆಹಾರ ಸಂಸ್ಕರಣ ಕಾರಿಡಾರ್ – ಶಿಕ್ಷಣ ಮತ್ತು ಜ್ಞಾನ ಸಮುಚ್ಚಯಗಳು

13.3.1 ಇಂತಹ ಸೌಲಭ್ಯಗಳಿಗೆ ಅತ್ಯುತ್ತಮ ಸಂಶೋಧನೆ ಮತ್ತು ಅಭಿವೃದ್ಧಿಯ ಜೊತೆಗೆ ಉತ್ತಮ ಶಿಕ್ಷಣ ಮತ್ತು ಜ್ಞಾನದ ಬೆಂಬಲವನ್ನು ಕೊಡಲಾಗುವುದು. ಇದಕ್ಕಾಗಿ ಈ ಕೆಳಗಿನ ಸೌಲಭ್ಯಗಳನ್ನು ನೀಡಲಾಗುವುದು :–

ಅ. ಉತ್ಕೃಷ್ಟ ಜ್ಞಾನ ಕೇಂದ್ರಗಳು

ಆ. ಮಾರುಕಟ್ಟೆ ಮಾಹಿತಿ ಕೇಂದ್ರಗಳು

ಇ. ಜ್ಞಾನ ಪ್ರಸರಣ ಕೇಂದ್ರಗಳು

ಈ. ಕೃಷಿ ಶಿಕ್ಷಣ ಸಮುಚ್ಚಯಗಳು

ಉ. ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳು

ಊ. ಕೌಶಲ್ಯ ಅಭಿವೃದ್ಧಿ ಸಂಸ್ಥೆಗಳು

ಋ. ಸಾಮಾನ್ಯ ಸೇವಾ ಕೇಂದ್ರಗಳು

# 14 ಕೃಷಿ ಆಧಾರಿತ ಕೈಗಾರಿಕೆಗಳು

14.1 ಕರ್ನಾಟಕ ರಾಜ್ಯದಲ್ಲಿರುವ ವೈವಿಧ್ಯಮಯ ಕೃಷಿ ಹವಾಮಾನ ಸ್ಥಿತಿಯ ಪ್ರಯೋಜನ ಪಡೆಯಲು ಕಚ್ಚಾ ವಸ್ತು ಸಂಪನ್ಮೂಲಗಳನ್ನು ಉಪಯೋಗಿಸಿಕೊಳ್ಳಲು, ಪ್ರದೇಶದಲ್ಲಿ ಲಭ್ಯವಿರುವ ಕೌಶಲ್ಯತೆಯನ್ನು ಬಳಕೆ ಮಾಡಿಕೊಳ್ಳಲು ಹಾಗೂ ಆಂತರಿಕ ಮತ್ತು ರಫ್ತು ಮಾರುಕಟ್ಟೆ ಅವಕಾಶಗಳನ್ನು ಉಪಯೋಗಿಸಿಕೊಳ್ಳಲು ಸದರಿ ನೀತಿಯ ಭಾಗವಾಗಿ ವಿವಿಧ ಕೃಷಿ ಕೈಗಾರಿಕಾ ಘಟಕಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಕೈಗಾರಿಕೆಗಳನ್ನು ಮುಂದೆ ತಿಳಿಸುವಂತೆ ವಿಭಜಿಸಲಾಗಿದೆ. ಕೃಷಿ ಪರಿಕರ ಮತ್ತು ನೀರಾವರಿ ವಲಯ, ನಿರ್ಬಂಧಿತ ಹವಾಮಾನ ಸ್ಥಿತಿಯಲ್ಲಿ ಹೈಟೆಕ್ ಬೇಸಾಯ, ತರಕಾರಿ ಮತ್ತು ಹಣ್ಣು ಸಂಸ್ಕರಣೆ, ಕೃಷಿ ಇಂಜಿನಿಯರಿಂಗ್, ಹೈಟೆಕ್ ಮತ್ತು ಜೈವಿಕ ತಂತ್ರಜ್ಞಾನಾಧಾರಿತ ಕೃಷಿ ಮತ್ತು ಸಂಶೋಧನೆ, ಆಹಾರ ಸಂಸ್ಕರಣೆ, ಧಾನ್ಯ ಸಂಸ್ಕರಣೆ, ಬೇಕರಿ ಮತ್ತು ತಿಂಡಿ ತಿನಿಸುಗಳು, ಮಸಾಲೆ ಪದಾರ್ಥಗಳು, ನೀರು ಮತ್ತು ಸಾಗರೋತ್ಪನ್ನಗಳು, ಹಾಲು ಉತ್ಪನ್ನಗಳು, ಕೋಳಿ ಉತ್ಪನ್ನಗಳು, ಪ್ರಾಣಿ ಉತ್ಪನ್ನಗಳು ಇತ್ಯಾದಿ. ಮೇಲೆ ಹೇಳಿದ ಪ್ರತಿಯೊಂದು ವಿಭಾಗಗಳಲ್ಲಿ ಗುರುತಿಸಲಾದ ಯೋಜನಾ ಅವಕಾಶಗಳ ವಿವರಗಳುಳ್ಳ ಪಟ್ಟಿಯನ್ನು ಈ ಕೆಳಗೆ ಕೊಡಲಾಗಿದೆ. ಆದಾಗ್ಯೂ ಈ ಯಾವುದೇ ಹೂಡಿಕೆಗಳ ಬಗ್ಗೆ ಈ ಕೆಳಗಿನ ಪಟ್ಟಿಯಲ್ಲಿ ಸೇರಿಸದಿದ್ದರೂ ಸಹ ಅವುಗಳು ಈ ನೀತಿಯ ಭಾಗವಾಗಿರುತ್ತವೆ.

14.2 ಕೃಷಿ ಆಧಾರಿತ ಕೈಗಾರಿಕೆ – ಕೃಷಿ ಪರಿಕರ ಮತ್ತು ನೀರಾವರಿ

- ಉತ್ತಮ ಗುಣ ಮಟ್ಟದ ಬೀಜ, ಸಂಕರಣ / ಸುಧಾರಿತ ತಳಿಗಳ ಉತ್ಪಾದನೆ ಮತ್ತು ಲಭ್ಯತೆ
- ಅಂಗಾಂಶ ಕೃಷಿ ಪ್ರಯೋಗಾಲಯಗಳು ಮತ್ತು ಪ್ರಾತ್ಯಕ್ಷಿಕೆ ಕ್ಷೇತ್ರಗಳು
- ಬೃಹತ್ ಪ್ರಮಾಣದ ಬೀಜೋತ್ಪಾದನೆ, ಸಂಸ್ಕರಣೆ ಮತ್ತು ಶೇಖರಣಾ ಕೇಂದ್ರಗಳ ಸ್ಥಾಪನೆ
- ಸಸ್ಯ ಸಂರಕ್ಷಣಾ ರಾಸಾಯನಿಕಗಳು ಮತ್ತು ಜೈವಿಕ ಕೀಟನಾಶಕಗಳು
- ಬೀಜ ಪ್ರಮಾಣೀಕರಣ ಕೇಂದ್ರಗಳು
- ಕೃತಕ ಗರ್ಭಧಾರಣಾ ಕೇಂದ್ರಗಳು
- ಪಶುಸಂಗೋಪನೆಗೆ ಕೀಟ ನಿರ್ವಹಣಾ ಘಟಕಗಳು
- ಪಶುಸಂಗೋಪನೆಗಾಗಿ ಜಾನುವಾರು ಆರೋಗ್ಯ ಕೇಂದ್ರ ಮತ್ತು ವಂಶ ವೃದ್ಧಿ ಸೌಲಭ್ಯಗಳು ಮತ್ತು ರೋಗ ನಿರ್ವಹಣಾ ಕೇಂದ್ರಗಳು

- ಹೊಲದಲ್ಲೇ ನೀರಾವರಿ ಪದ್ಧತಿಗಳು
- ಪಶು ವೈದ್ಯಕೀಯ ಮತ್ತು ಪ್ರಾಣಿ ಔಷಧಗಳ ಉತ್ಪಾದನಾ ಸೌಲಭ್ಯಗಳು
- ಜಾನುವಾರು, ಕೋಳಿ ಸಾಕಣೆ, ಪ್ರಾಣಿ ಮೇವಿನ ಆಹಾರ ಮತ್ತು ಪಶುಸಂಗೋಪನೆಗೆ ಬಳಸುವ ಇತರ ಪರಿಕರಗಳ ಕೈಗಾರಿಕೆ
- ಹಸಿರುಮನೆ ರಚನೆಗಳು ಮತ್ತು ಉಪ ಪದ್ಧತಿಗಳು, ಬೆಳವಣಿಗೆಯ ಕ್ಷೇತ್ರ ಇತ್ಯಾದಿ
- ಸಮಗ್ರ ನೀರಾವರಿ ಪದ್ಧತಿಗಳಾದ ಹನಿ, ತುಂತುರು, ರಸ, ಸೂಕ್ಷ್ಮ ಮತ್ತು ನೀರು ಕೊಯ್ಲಿನ ರಚನೆಗಳು
- ಆಹಾರ ಸಂಸ್ಕರಣ ಘಟಕಗಳು ಮತ್ತು ಉಪಕರಣಗಳು
- ನಗರ / ಪಟ್ಟಣಗಳಲ್ಲಿ ಲಭ್ಯವಾಗುವ ತ್ಯಾಜ್ಯಗಳನ್ನು ಬಳಸಿ ಜೈವಿಕ ಕಾಂಪೋಸ್ಟ್ ಘಟಕಗಳ ಸ್ಥಾಪನೆ
- ಗ್ರಾಮೀಣ ತಂತ್ರಜ್ಞಾನ ಮತ್ತು ನವೀಕರಿಸಬಲ್ಲ ಶಕ್ತಿ ಉತ್ಪಾದನಾ ಪದ್ಧತಿಗಳು
- ಕೃಷಿ ತಾಂತ್ರಿಕತೆ ಮತ್ತು ಕ್ಷೇತ್ರ ಯಾಂತ್ರೀಕರಣ ಕೈಗಾರಿಕೆಗಳು

14.3 ಕೃಷಿ ಆಧಾರಿತ ಕೈಗಾರಿಕೆ – ನಿರ್ಬಂಧಿತ ವಾತಾವರಣದಡಿ ಉನ್ನತ ತಾಂತ್ರಿಕ ಬೇಸಾಯ

- ಪುಷ್ಪ ಕೃಷಿ, ತೋಟಗಾರಿಕೆ, ಬೀಜಾಭಿವೃದ್ಧಿ, ಪಶುಸಂಗೋಪನೆ, ಮೀನುಗಾರಿಕೆ, ಜಲಕೃಷಿ, ತರಕಾರಿ ಬೇಸಾಯ, ಹಣ್ಣು ಮತ್ತು ಅಣಬೆ ಬೇಸಾಯವನ್ನು ನಿರ್ಬಂಧಿತ ವಾತಾವರಣದಡಿ ಕೈಗೊಳ್ಳುವುದು ಮತ್ತು ಕೃಷಿ ಹಾಗೂ ಸಂಬಂಧಿತ ವಲಯಗಳಿಗೆ ಸಂಬಂಧಿಸಿದ ಸೇವೆಗಳು
- ನಿಖರ ಕೃಷಿ ಮತ್ತು ಮಾಹಿತಿ ತಂತ್ರಜ್ಞಾನ ಆಧಾರಿತ ತೋಟಗಾರಿಕೆ
- ಜೀವಕಣಗಳ ಅಭಿವೃದ್ಧಿ ಮತ್ತು ವೃದ್ಧೀಕರಣ
- ಉಪ್ಪು, ಸಮುದ್ರ ಮತ್ತು ಶೀತಲ ನೀರಿನಲ್ಲಿ ಮೀನು ಕೃಷಿ
- ಜೇನುಗೂಡುಗಳು ಮತ್ತು ಉಪಕರಣಗಳು
- ತರಕಾರಿಗಳು, ಇತರೆ ತರಕಾರಿಗಳು, ಹಣ್ಣು, ಗಡ್ಡೆಗಳು, ಕಂದುಗಳು, ಬಿಡಿ ಹೂಗಳು, ಕುಂಡದಲ್ಲಿ ಬೆಳೆಯುವ ಗಿಡಗಳು, ಅಲಂಕಾರಿಕ ಸಸ್ಯಗಳ ಎಲೆ/ಕಾಂಡ/ಮೊಗ್ಗು, ಬೇರಿರುವ ಕಡ್ಡಿಗಳು, ಒಣ ಹೂಗಳು, ಎಲೆಗಳನ್ನು ನಿರ್ಬಂಧಿತ ವಾತಾವರಣದಲ್ಲಿ ಅಂದರೆ ಹಸಿರುಮನೆ / ಪಾಲಿ ಮನೆಗಳಲ್ಲಿ ಬೆಳೆಯುವುದು
- ಮಾದರಿ ಸಸ್ಯಾಗಾರಗಳು ಮತ್ತು ಸಣ್ಣ ಸಸ್ಯಾಗಾರಗಳು
- ವರ್ಷವಿಡೀ ಗುಣಮಟ್ಟದ ಉತ್ಪಾದನೆಗಾಗಿ ಜಲಕೃಷಿ
- ಉತ್ಪಾದಿತ ಸಂಕರಣ / ಸುಧಾರಿತ ತಳಿಗಳ ಬೀಜ, ಸಸಿ, ತರಕಾರಿ ಬೀಜಗಳ ಉತ್ಪಾದನೆ, ಮೀನಿನ ಮರಿಗಳನ್ನು ಉನ್ನತ ತಾಂತ್ರಿಕ ಪದ್ಧತಿಗಳನ್ನಾಧರಿಸಿ ಅಭಿವೃದ್ಧಿಗೊಳಿಸುವುದು

14.4 ಕೃಷಿ ಆಧಾರಿತ ಕೈಗಾರಿಕೆ–ತರಕಾರಿ ಮತ್ತು ಹಣ್ಣಿನ ಸಂಸ್ಕರಣೆ

- ಹುಳಿವೃದ್ಧಿ (ಫರ್ಮೆಂಟೇಷನ್)
- ಹಣ್ಣಿನ ತಿರುಳು ಮತ್ತು ರಸಗಳು
- ಕ್ಯಾನ್ ಮಾಡಿದ ಹಣ್ಣುಗಳು ಮತ್ತು ತರಕಾರಿಗಳು
- ಜ್ಯಾಮ್
- ಹಣ್ಣಿನ ಗಟ್ಟಿ ರಸ (ಸ್ಕ್ವಾಷ್‌ಸ್)
- ಉಪ್ಪಿನಕಾಯಿ ಮತ್ತು ಚಟ್ನಿ

- ನಿರ್ಜಲೀಕರಣ (ಡಿಹೈಡ್ರೇಷನ್)
- ಸೂಕ್ಷ್ಮ ಜೀವಿ ರಹಿತ ವಾತಾವರಣದಲ್ಲಿ ತಿರುಳು ತೆಗೆಯುವಿಕೆ (ಅಸೆಪ್ಟಿಕ್ ಪಲ್ಪಿಂಗ್)
- ಪ್ರತ್ಯೇಕವಾಗಿ ಶೀಘ್ರ ಘನೀಕರಣ
- ಅಡುಗೆಗಾಗಿ ಬಳಸುವ ಸಾಧನಗಳು
- ಸೇವಿಸಲು ಸಿದ್ದವಾದ ಪದಾರ್ಥಗಳು
- ಸಾಂದ್ರೀಕೃತ ರಸ
- ಸಾರಗೊಳಿಸಿದ ಅಂಶ ಮತ್ತು ಪುಡಿಗಳು
- ಸಾವಯವ ಹಣ್ಣುಗಳು
- ಅಣಬೆಗಳು
- ಕರಿದ ಚಿಪ್ಸ್
- ಕೋಕೋ ಉತ್ಪನ್ನಗಳು
- ಮದ್ಯಸಾರ ಪಾನೀಯಗಳು – ವೈನ್, ವಿಸ್ಕಿ, ಬ್ರ್ಯಾಂಡಿ, ರಮ್ ಇತರೆ
- ತಂಪು ಪಾನೀಯಗಳು
- ಸೇವಿಸಲು ಸಿದ್ದವಾದ ಪಾನೀಯಗಳು
- ತಿಂಡಿ ತಿನಿಸುಗಳು

14.5 ಕೃಷಿ ಆಧಾರಿತ ಕೈಗಾರಿಕೆ – ಧಾನ್ಯ ಸಂಸ್ಕರಣೆ, ಬೇಕರಿ ಮತ್ತು ತಿಂಡಿ ತಿನಿಸುಗಳು

- ಆಧುನಿಕ ಅಕ್ಕಿ ಗಿರಣಿಗಳು
- ಫಲಹಾರದ ಧಾನ್ಯಗಳು
- ಗೋಧಿ ಹಿಟ್ಟಿನ ಗಿರಣಿಗಳು
- ತೌಡುಯುಕ್ತ ಗೋಧಿ ಹಿಟ್ಟು
- ಬಲವರ್ಧಿತ ಗೋಧಿ ಹಿಟ್ಟು
- ಅಕ್ಕಿ ಹಿಟ್ಟು
- ಇತರೆ ಧಾನ್ಯಗಳ ಹಿಟ್ಟು
- ಮೆಕ್ಕೆ ಜೋಳದ ಹಿಟ್ಟು
- ಗ್ರಾಹಕರ ಬೇಡಿಕೆಗೆ ಅನುಗುಣವಾಗಿ ಮೆಕ್ಕೆ ಜೋಳದ ಎಣ್ಣೆ
- ಮೆಕ್ಕೆ ಜೋಳದ ಸಂಸ್ಕರಣೆ
- ಒರಟು ಧಾನ್ಯಗಳು
- ಧಾನ್ಯಗಳ ಸಂಸ್ಕರಣೆ–ಒಣಗಿಸುವ ಯಂತ್ರಗಳು, ಬಣ್ಣ ಬೇರ್ಪಡಿಸುವಿಕೆ, ಪ್ಯಾಕೇಜಿಂಗ್ ಘಟಕಗಳು
- ಗೋಧಿಯಿಂದ ತಯಾರಿಸಿದ ದೋಸೆ, ಇತ್ಯಾದಿ
- ಸೇವಿಸಲು ಸಿದ್ದವಾದ ತಿಂಡಿಗಳು

- ಶರ್ಕರ ಪಿಷ್ಟ ಪದಾರ್ಥಗಳು
- ಬೇಕರಿ ಪದಾರ್ಥಗಳು – ಈಸ್ಟ್ ಬ್ರೆಡ್, ಶುಂಠಿ ಬ್ರೆಡ್
- ತುಂಡರಿಸಿದ ಗೋಧಿ ಬಿಸ್ಕತ್ತುಗಳು, ಪಫ್ಡ್ ವೀಟ್ ಮತ್ತು ಪಫ್ಡ್ ರೈಸ್, ಫ್ಲೇಕ್ಡ್ ವೀಟ್ ಮತ್ತು ಫ್ಲೇಕ್ಡ್ ರೈಸ್
- ಚಾಕೋಲೇಟ್‌ಗಳು
- ಸೋಯಾಬೀನ್ ಉತ್ಪನ್ನಗಳು
- ಕಾಫಿ ಮತ್ತು ರಬ್ಬರ್ ಸಂಸ್ಕರಣೆ ಹಾಗೂ ಉಗ್ರಾಣಗಳು
- ಕಸ್ಟರ್ಡ್ ಪೌಡರ್
- ಮ್ಯಕರೋನಿ ಮತ್ತು ಚೀಸ್
- ಬೆಲ್ಲ–ಕಬ್ಬು, ತಾಳೆ, ಕಚ್ಚಾ ಕಬ್ಬು
- ಚೂಯಿಂಗ್ ಗಮ್
- ನೆಲಗಡಲೆ ಸಂಸ್ಕರಣೆ
- ಪಾಸ್ತ
- ಹಪ್ಪಳ
- ತುಂಬಿಸಿದ ಕಣಕ –ಬೇಯಿಸಿದ ಮತ್ತು ಬೇಯಿಸದ

14.6 ಕೃಷಿ ಆಧಾರಿತ ಕೈಗಾರಿಕೆ – ಉನ್ನತ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಆಧಾರಿತ ಕೃಷಿ ಹಾಗೂ ಸಂಶೋಧನೆ

- ವಿವಿಧ ವಾತಾವರಣದಲ್ಲಿ ಬೆಳೆಯುವ ಹಣ್ಣು ಮತ್ತು ತರಕಾರಿಗಳ ನಿರೀಕ್ಷಿತ ವಂಶವಾಹಿ ಮತ್ತು ಪರ್ಯಾಯ ಗುಣ ವಂಶವಾಹಿ
- ಪೌಷ್ಠಿಕ ವೈವಿಧ್ಯತೆ ಮತ್ತು ಅಂತರಕ್ರಿಯೆ
- ತೋಟಗಾರಿಕೆ ಬೆಳೆಗಳ ಸುಧಾರಿತ ಉತ್ಪಾದಕತೆ ಮತ್ತು ಗುಣಮಟ್ಟವನ್ನು ಸುಧಾರಿಸಲು ಕೀಟ ಪರಾಗಸ್ಪರ್ಶವನ್ನು ಬಳಸುವುದು
- ಅಸಾಂಪ್ರದಾಯಿಕ ಪ್ರದೇಶಗಳಲ್ಲಿ ಬೆಳೆಯುವಂತಹ ತಳಿಗಳ ಅಭಿವೃದ್ಧಿ
- ಹಣ್ಣು ಮತ್ತು ತರಕಾರಿಗಳ ಉತ್ಪಾದನೆಯಲ್ಲಿ ವಾಯು ಮತ್ತು ಜಲ ಕೃಷಿ ತಾಂತ್ರಿಕತೆಯನ್ನು ಪ್ರಮಾಣಬದ್ಧಗೊಳಿಸುವುದು
- ಹಣ್ಣು ಮತ್ತು ತರಕಾರಿಗಳಲ್ಲಿರುವ ಪೌಷ್ಠಿಕ ಗುಣಮಟ್ಟ ಮತ್ತು ಪೌಷ್ಠಿಕಾಂಶ ಲಕ್ಷಣಗಳನ್ನು ಅಧ್ಯಯನ ಮಾಡುವುದು
- ತೋಟಗಾರಿಕೆ ಬೆಳೆಗಳಲ್ಲಿ ಕೊಯಿಲೋತ್ತರ ತಾಂತ್ರಿಕತೆ ಮತ್ತು ಮೌಲ್ಯವರ್ಧನೆ
- ಹಣ್ಣು ಮತ್ತು ತರಕಾರಿಗಳ ದೀರ್ಘ ಕಾಲ ಶೇಖರಣೆ ಮತ್ತು ಸಾಗಣೆಗಾಗಿ ಪರಿವರ್ತಿತ ವಾತಾವರಣದಲ್ಲಿ ಪ್ಯಾಕ್ ಮಾಡುವುದು
- ಹಸಿರು ಮನೆ ಬೇಸಾಯ
- ಪ್ರಸ್ತುತದಲ್ಲಿರುವ ಘಟಕಗಳ ಪುನಶ್ಚೇತನವನ್ನೊಳಗೊಂಡ ಅಂಗಾಂಶ ಕೃಷಿ
- ಅಜೈವಿಕ ಒತ್ತಡ ನಿರ್ವಹಣೆ (ಬರಗಾಲ, ಪ್ರವಾಹ, ಚೌಳು, ಆಮ್ಲೀಯತೆ, ಕ್ಷಾರಯುತ, ಪೌಷ್ಠಿಕಾಂಶಗಳ ಅವ್ಯವಸ್ಥೆ ಇತರೆ)
- ವಾತಾವರಣಕ್ಕೆ ಹೊಂದಿಕೊಳ್ಳುವ ಕೃಷಿ
- ಸಾವಯವ ಬೇಸಾಯವನ್ನೊಳಗೊಂಡ ಕೃಷಿ ಸಂರಕ್ಷಣೆ
- ಮಲಿನವಾದ ಮಣ್ಣು ಮತ್ತು ನೀರಿಗೆ ಜೈವಿಕ ಚಿಕಿತ್ಸೆ

- ಜೈವಿಕ ಬಲವರ್ಧನೆ
- ಜೈವಿಕ ಇಂಧನ
- ಜೈವಿಕ ಕೈಗಾರಿಕಾ ಜಲಾನಯನ ಪ್ರದೇಶಗಳು
- ಸೂಕ್ಷ್ಮ ಮಟ್ಟದ ಭೂ ಉಪಯೋಗದ ಯೋಜನೆಗೆ ಬೇಕಾದಂತಹ ನಿರ್ಣಯ ಪೂರಕ ಪದ್ಧತಿಗಳ ಅಭಿವೃದ್ಧಿ
- ಮೀನು ತಳಿ ವಿಜ್ಞಾನ ಮತ್ತು ಜೈವಿಕ ತಂತ್ರಜ್ಞಾನ
- ಕಡಲ ವಿಜ್ಞಾನ ಸಂಶೋಧನೆ
- ಹೊಸ ಪೀಳಿಗೆಯ ಹೊಸ ಮಾದರಿಯ, ಇಂಧನ ಸಾಮರ್ಥ್ಯವಿರುವ, ಬಹುಪಯೋಗಿ ಮೀನುಗಾರಿಕೆ ಉಪಕರಣಗಳನ್ನು ಅಭಿವೃದ್ಧಿಗೊಳಿಸುವುದು
- ಆಳ ಮೀನುಗಾರಿಕೆಗೆ ಬೇಕಾಗಿರುವ ನೂತನ ಸಲಕರಣೆಯ ದೊಡ್ಡ ಗಾತ್ರದ ಬಲೆಗಳನ್ನು ಅಭಿವೃದ್ಧಿಗೊಳಿಸುವುದು
- ಹೊರವಲಯದಲ್ಲಿ ಅಲಂಕಾರಿಕ ಮೀನು ಮರಿ ಉತ್ಪಾದನಾ ತಾಂತ್ರಿಕತೆ
- ವಿವಿಧ ವಂಶವಾಹಿಗಳ ಸಸ್ಯೋತ್ಪಾದನೆ
- ಪರವಾಲಂಬಿ / ದಾಳಿಕಾರಕಗಳ ಸಮೂಹ ವೃದ್ಧೀಕರಣ
- ಜೈವಿಕ ಗೊಬ್ಬರ ತಯಾರಿಕೆಗಾಗಿ ಹುದುಗುವಿಕೆ ಘಟಕಗಳು
- ಕಾವುಕೊಡುವ ತಂತ್ರಜ್ಞಾನ (ಇನ್ಕ್ಯುಬೇಷನ್)
- ತಳಿ ಹೊಂದಾಣಿಕೆ
- ತದ್ರೂಪ ಸೃಷ್ಟಿ
- ತಳಿ ತಂತ್ರಜ್ಞಾನ
- ಬದಲಾಯಿಸಿದ ತಳಿಗಳ ಜೀವಧಾರಿ ರಚನೆ
- ಪ್ರಾಣಿ ವಿಜ್ಞಾನದಲ್ಲಿ ಜೈವಿಕ ತಂತ್ರಜ್ಞಾನ ಮತ್ತು ಅಣುಜೀವಿ ಶಾಸ್ತ್ರ
- ಪಶುವೈದ್ಯಕೀಯ ವಿಜ್ಞಾನದಲ್ಲಿ ಸಂಶೋಧನೆ
- ಪ್ರಾಣಿ ವಿಜ್ಞಾನ ಸಂಶೋಧನೆ
- ಹೈನು ವಿಜ್ಞಾನ ಸಂಶೋಧನೆ
- ಪ್ರಾಣಿಗಳ ಆರೋಗ್ಯಕ್ಕೆ ಮತ್ತು ಸಂರಕ್ಷಣೆಗಾಗಿ ಸ್ಟೆಮ್ ಸೆಲ್ ಸಂಶೋಧನೆ
- ಪ್ರಾಣಿ ಜೈವಿಕ-ತಳಿ ಪ್ರಾಯೋಗಿಕತೆ
- ಜೈವಿಕ ನಿಯಂತ್ರಣ (ಬಯೋ ಕಂಟ್ರೋಲ್) ಪ್ರಯೋಗಲಾಯಗಳು
- ಅಂತರ್ರಾಷ್ಟ್ರೀಯ ಮಟ್ಟದ ಮೀನುಗಾರಿಕೆ ಪರಿಕರಗಳು ಮತ್ತು ಉಪ ಉತ್ಪನ್ನಗಳಿಗಾಗಿ ಸುಧಾರಿತ ಸಂಸ್ಕರಣಾ ತಾಂತ್ರಿಕತೆ
- ಜೈವಿಕ ಕ್ರಿಯಾತ್ಮಕತೆ ಮತ್ತು ಔಷಧ ಶಾಸ್ತ್ರಕ್ಕೆ ಸಂಬಂಧಿಸಿದ ಮುಖ್ಯವಾದ ಉತ್ಪನ್ನಗಳನ್ನು ಜಲಜೀವ ಸಂಪನ್ಮೂಲಗಳಿಂದ ಅಭಿವೃದ್ಧಿಪಡಿಸುವುದು
- ಮೀನುಗಾರಿಕೆ ತ್ಯಾಜ್ಯ ಬಳಕೆ
- ಜೀವ ರಾಸಾಯನಿಕ ಮತ್ತು ಪೌಷ್ಠಿಕತೆ
- ಹುದುಗು ತಾಂತ್ರಿಕತೆ ಮತ್ತು ಜೀವ ತಾಂತ್ರಿಕತೆ

- ಆಹಾರ ತಾಂತ್ರಿಕತೆ
- ಆಹಾರ ಸೂಕ್ಷ್ಮಜೀವಿಶಾಸ್ತ್ರ
- ಆಹಾರ ಪ್ಯಾಕೇಜಿಂಗ್ ತಾಂತ್ರಿಕತೆ
- ಆಹಾರ ಕಾಪಾಡುವಿಕೆ ಮತ್ತು ಪೀಡೆಗಳ ನಿಯಂತ್ರಣ
- ಆಹಾರ ಸುರಕ್ಷತೆ ಮತ್ತು ವಿಶ್ಲೇಷಣಾತ್ಮಕ ಗುಣ ನಿಯಂತ್ರಣ
- ಮೀನು ಮತ್ತು ಶೆಲ್ಲಿನಲ್ಲಿರುವ ಮೀನುಗಳ ಸಮಗ್ರ ಕೃಷಿ

14.7 ಕೃಷಿ ಆಧಾರಿತ ಕೈಗಾರಿಕೆ – ಸಾಂಬಾರು ಉತ್ಪನ್ನಗಳು

- ಸಾಂಬಾರು ಮಿಶ್ರಣಗಳು
- ನಿರ್ಜಲೀಕೃತ ಸಾಂಬಾರು ಪದಾರ್ಥಗಳು ಹಾಗೂ ಮಿಶ್ರಣಗಳು
- ಘನೀಕರಿಸಿದ ಒಣ ಸಾಂಬಾರು ಪದಾರ್ಥಗಳು
- ಲವಣ ಜಲದಲ್ಲಿ ಸಾಂಬಾರು ಪದಾರ್ಥಗಳು
- ಇತರ ಮೌಲ್ಯವರ್ಧಿತ ಉತ್ಪನ್ನಗಳು
- ಸಾಂಬಾರು ಪದಾರ್ಥ ಎಣ್ಣೆ ಮತ್ತು ಓಲಿಯೋರಿಸಿನ್ಸ್
- ಅಗತ್ಯ ಎಣ್ಣೆಗಳು
- ಗಿಡಮೂಲಿಕೆಗಳ ಸಾರ ಸಂಗ್ರಹ
- ಗಿಡಮೂಲಿಕೆಗಳಿಂದ ಸಿದ್ಧಪಡಿಸಿದ ಸೌಂದರ್ಯ ವರ್ಧಕಗಳು
- ಪುಷ್ಪಗಳು, ಬಣ್ಣಗಳು, ವರ್ಣದ್ರವ್ಯಗಳು, ದುರ್ಗಂಧ ನಿವಾರಕಗಳು, ಸುಗಂಧ ದ್ರವ್ಯ, ಒಣ ಹೂಗಳು ಇತ್ಯಾದಿಯಿಂದ ಔಷಧ ಸಾರಸಂಗ್ರಹ
- ಗಿಡಮೂಲಿಕೆಗಳಿಂದ ತಯಾರಿಸಲಾದ ಔಷಧಗಳು
- ಸುಗಂಧ ದ್ರವ್ಯಗಳು
- ಟ್ಯಾನಿನ್
- ಪೆಕ್ಟಿನ್
- ತರಕಾರಿ ಎಣ್ಣೆ

14.8 ಕೃಷಿ ಆಧಾರಿತ ಕೈಗಾರಿಕೆ – ಜಲ ಕೃಷಿ ಮತ್ತು ಸಾಗರೋತ್ಪನ್ನಗಳು

- ಸೀಗಡಿ, ಮಣ್ಣಿನ ಏಡಿ, ಇಂಡಿಯನ್ ಮ್ಯಾಕರೆಲ್, ಸಿಯರ್ ಮೀನುಗಳು, ಸಮುದ್ರದ ಏಡಿ, ಬಿಳಿ ಸೀಗಡಿ, ಪುಷ್ಪ ಸೀಗಡಿ, ಕಂದು ಸೀಗಡಿ, ರಾಜ ಸೀಗಡಿ, ಸಮುದ್ರದ ಸೀಗಡಿ, ಕಟಲ್ ಮೀನು, ಬ್ಲಾಕ್ ಟಿಪ್ ಶಾರ್ಕ್, ಸಮುದ್ರ ಮೀನು, ಮರಳು ಲಾಬ್‌ಸ್ಟರ್, ಸ್ಪೈನಿ ಲಾಬ್‌ಸ್ಟರ್, ಆಳ ಸಮುದ್ರದ ಲಾಬ್‌ಸ್ಟರ್, ಸ್ಕ್ವಿಡ್ ಆಕ್ಟೋಪಸ್, ಗ್ರೀನ್ ಮಸ್ಸೆಲ್, ಓಯಿಸ್ಟರ್, ಪರ್ಲ್ ಓಯಿಸ್ಟಾರ್ ಮೊದಲಾದ ಉತ್ಪನ್ನಗಳ ಸಂಸ್ಕರಣೆ
- ಮೀನು ಕಣಕದ ಪದಾರ್ಥಗಳು – ಫಿಷ್ ಸಾಸೇಜ್, ಕೇಕ್, ಕಟ್‌ಲೆಟ್, ಪೇಸ್ಟ್, ಮೀನಿನ ಕಣಕ, ವಿವಿಧ ಆಕೃತಿಯ ಪದಾರ್ಥಗಳು, ಒಣ ಮೀನು
- ಔಷಧೀಯ ಉತ್ಪನ್ನಗಳು, ಸ್ಪೈರುಲಿನ, ಕೋಲೋರಲ್ಲಾ, ಆಲ್ಗೈ, ಸೆನೆಡೆಸ್ಮಸ್, ಶಂಕು ಚಿಪ್ಪುಗಳಿಂದ ನೈಸರ್ಗಿಕ ಸುಣ್ಣ, ಮೀನಿನ ಎಣ್ಣೆ

- ಘನೀಕೃತ ಸಮುದ್ರೋತ್ಪನ್ನಗಳು
- ಪ್ರತ್ಯೇಕವಾಗಿ ಶೀಘ್ರ ಘನೀಕರಿಸಿದ ಸಾಗರೋತ್ಪನ್ನಗಳು
- ಕ್ಯಾನ್‌ನಲ್ಲಿಯ ಸೀಗಡಿ ಮತ್ತು ಪ್ರಾನ್‌ಗಳು
- ಲೋಬ್‌ಸ್ಟರ್ ಮತ್ತು ಕಟಲ್‌ಫಿಶ್
- ಸ್ಕ್ವಿಡ್ ಟ್ಯೂಬ್ಸ್
- ಘನೀಕೃತ ಮೀನುಗಳು
- ಕ್ಯಾನ್‌ನಲ್ಲಿಯ ಮೀನುಗಳು
- ಒಣ ಮೀನು
- ಅಲಂಕಾರಿಕ ಮೀನುಗಳು
- ಒಣಗಿದ ಶಾರ್ಕ್ ಫಿನ್ಸ್
- ಒಣಗಿದ ಕಟಲ್ ಮೀನು ಮೂಳೆ
- ಒಣ ಮೀನಿನ ಹುಡಿ
- ಸಂಸ್ಕರಿಸಿದ ಮೀನಿನ ಹುಡಿ
- ಸೀಗಡಿ ಚಕ್ಕೆ
- ಕೈಟಿನ್
- ಸಮುದ್ರ ಸೌತೆ
- ಒಣಗಿದ ಸ್ಕ್ವಿಡ್
- ಜೆಲ್ಲಿ ಮೀನು
- ಒಣಗಿದ ಟೂನಾ ಮಾಸಿ
- ಅರ್ಧ ಶುದ್ಧೀಕೃತ ಹಾಗೂ ಶುದ್ಧೀಕೃತ ಪದಾರ್ಥಗಳು

14.9 ಕೃಷಿ ಆಧಾರಿತ ಕೈಗಾರಿಕೆ – ಪ್ರಾಣಿ, ಹೈನು ಮತ್ತು ಕೋಳಿ ಉತ್ಪನ್ನಗಳು

- ಮೌಲ್ಯವರ್ಧಿತ ಹಾಲು ಉತ್ಪನ್ನಗಳು – ಹಾಲು ಮತ್ತು ಕೆನೆಹಾಲು ಪುಡಿ, ಪ್ಯಾಕೇಜ್ಡ್ ಹಾಲು, ಬೆಣ್ಣೆ, ತುಪ್ಪ, ಹಾಲು ಗಡ್ಡೆ (ಚೀಸ್), ಕುಡಿಯಲು ಸಿದ್ಧವಿರುವ ಹಾಲು ಉತ್ಪನ್ನಗಳು, ಮಜ್ಜಿಗೆ, ಮಕ್ಕಳಿಗೆ ಹಾಲು, ಕೆನೆತೆಗೆದ ಹಾಲು ಪುಡಿ, ಇತರೆ ಹಾಲು ಪುಡಿಗಳು.
- ಮಾಲ್ಟ್ ಮಾಡಿದ ಹಾಲು ಆಹಾರ
- ಔಷಧ ಸಸ್ಯಗಳನ್ನು ಒಳಗೊಂಡ ಬಲವರ್ಧಿತ ಕಡಿಮೆ ಕೊಬ್ಬಿನಾಂಶವಿರುವ ತುಪ್ಪ
- ತಾಜಾ, ಘನೀಕೃತ ಮತ್ತು ಇತರೇ ಮಾಂಸದ ಉತ್ಪನ್ನಗಳು
- ಸಾವಯವ ಪದ್ಧತಿಯಿಂದ ಉತ್ಪಾದಿಸಿದ ಆಹಾರ ತಿಂದ ಕೋಳಿ ಉತ್ಪನ್ನಗಳು
- ಮೊಟ್ಟೆ ಉತ್ಪನ್ನಗಳು – ಒಣಗಿದ/ಬೇಯಿಸಿದ/ಘನೀಕರಿಸಿದ/ಶೇಖರಿಸಿದ
- ಪ್ರಾಣಿ ಕೇಸಿಂಗ್ – ಹಸು, ಕುರಿ, ಇತರೆ ಪ್ರಾಣಿಗಳ ಕೇಸಿಂಗ್‌ಗಳು, ಪ್ರಾಣಿಗಳ ಉಬ್ಬಿದ ತೆಳು ಚೀಲ /ಪಿತ್ತ ಚೀಲ, ಹೊಟ್ಟೆ
- ಶೇಖರಿಸಿದ ಮಾಂಸ

- ಮಾಂಸದ ಸಾರ ಮತ್ತು ಮಾಂಸದ ರಸಗಳು
- ಕುರಿ / ಮೇಕೆ ಮಾಂಸ – ತಾಜಾ / ಘನೀಕೃತ
- ಸಾಸೇಜ್‌ಗಳು ಮತ್ತು ಕ್ಯಾನ್ಡ್ ಮಾಂಸ
- ಸಮಮಿಶ್ರಿತ ಮಾಂಸದ ತಿಂಡಿ ತಿನಿಸುಗಳು
- ಕುರಿಮರಿ ಮತ್ತು ಕುರಿಯ ಮಾಂಸ – ತಾಜಾ / ಘನೀಕೃತ
- ಮೂಳೆ ಸಹಿತ ಕುರಿ ಮಾಂಸ – ತಾಜಾ / ಘನೀಕೃತ
- ಮೂಳೆ ರಹಿತ ಕುರಿ ಮಾಂಸ – ತಾಜಾ / ಘನೀಕೃತ
- ಪ್ರಾಕೃತಿಕ ಜೇನು

14.10 ಕೃಷಿ ಆಧಾರಿತ ಕೈಗಾರಿಕೆ ಮತ್ತು ಮೂಲಭೂತ ಸೌಕರ್ಯ – ಸೇವಾ ವಲಯಗಳು

- ಸಂಶೋಧನೆ ಮತ್ತು ಅಭಿವೃದ್ಧಿ, ಕೃಷಿ ಶಿಕ್ಷಣ ಮತ್ತು ತರಬೇತಿ
- ಜ್ಞಾನಾಧಾರಿತ ಕೃಷಿ ಪರಿಹಾರಗಳು
- ಸಸ್ಯ ಆರೋಗ್ಯ ತಪಾಸಣಾ ಕ್ಲಿನಿಕ್‌ಗಳು – ಎಲೆ / ಅಂಗಾಂಶ ವಿಶ್ಲೇಷಣಾ ಪ್ರಯೋಗಾಲಯಗಳು
- ಕೃಷಿ ವಿಸ್ತರಣಾ ಸೇವೆಗಳು
- ರಫ್ತು ಪರೀಕ್ಷೆಗಾಗಿ ಪ್ರಯೋಗಾಲಯಗಳನ್ನು ಗುರುತಿಸುವಿಕೆ ಹಾಗೂ ಉನ್ನತೀಕರಣ
- ಕೃಷಿ ವ್ಯವಹಾರ ಸಲಹೆಗಳು
- ಕೃಷಿ ಉತ್ಪನ್ನಗಳಲ್ಲಿಯ ನೀರು, ಮಣ್ಣಿನಲ್ಲಿ ಉಳಿದುಳಿದ ಔಷಧಿಗಳು, ಪಶುವೈದ್ಯಕೀಯ ಔಷಧಗಳು, ಜೋಧಕಗಳು ಮತ್ತು ವಿಷ ಪದಾರ್ಥಗಳ ಪರೀಕ್ಷೆ
- ಉತ್ಪನ್ನಾಧಾರಿತ ಮಾಹಿತಿ ಸಂಗ್ರಹಣೆ, ಮೂಲಭೂತ ಸೌಕರ್ಯ, ಮಾರುಕಟ್ಟೆ ಮತ್ತು ಸಾಧ್ಯಾಸಾಧ್ಯತೆಗಳ ಸಮೀಕ್ಷೆ
- ಸಾಮರ್ಥ್ಯ ಬಲವರ್ಧನೆ ಮತ್ತು ತರಬೇತಿ
- ಪ್ಯಾಕೇಜಿಂಗ್ ಗುಣಮಟ್ಟ ಮಾನದಂಡಗಳನ್ನು ಅಭಿವೃದ್ಧಿಗೊಳಿಸುವುದು ಮತ್ತು ಗುಣಮಟ್ಟ ನಕಾಶೆ, ಗುಣಮಟ್ಟ ನಿರ್ವಹಣೆ, ಗುಣಮಟ್ಟ ದೃಢತೆ ಮತ್ತು ಗುಣ ನಿಯಂತ್ರಣ ಪದ್ಧತಿಗಳಾದ ISO ಸರಣಿ, HACCP, TQM ಇತ್ಯಾದಿಗಳ ಅಭಿವೃದ್ಧಿ
- ಗುಣಮಟ್ಟ ಅಭಿವೃದ್ಧಿ ಮತ್ತು ಪ್ರಮಾಣೀಕರಣ, ಗುಣಮಟ್ಟ ಮಾನದಂಡ ಗುಣಮಟ್ಟ ನಿಯಂತ್ರಣ
- ದೂರಸಂವೇದಿನಿ ಹಾಗೂ ಮಾಹಿತಿ ನಿರ್ವಹಣೆ
- ಮಾನವ ಸಂಪನ್ಮೂಲ ಅಭಿವೃದ್ಧಿ

14.11 ಕೃಷಿ ಆಧಾರಿತ ಕೈಗಾರಿಕೆ ಮತ್ತು ಮೂಲಭೂತ ಸೌಕರ್ಯ – ಇತರ ವಲಯಗಳು

- ನೈಸರ್ಗಿಕ ಸಂಪನ್ಮೂಲ ನಿರ್ವಹಣೆ – ಭೂ ಸಂಪನ್ಮೂಲ ನಿರ್ವಹಣೆ, ಜಲ ನಿರ್ವಹಣೆ, ಮಣ್ಣಿನ ಆರೋಗ್ಯ ಮತ್ತು ಪೋಷಕಾಂಶ ನಿರ್ವಹಣೆ, ತೊಂದರೆ ಇರುವ ಮಣ್ಣಿನ ನಿರ್ವಹಣೆ, ಮಣ್ಣು ಮತ್ತು ನೀರು ಸಂರಕ್ಷಣೆ, ಬೆಳೆ ವೈವಿಧ್ಯತೆ, ಮಳೆ ಆಧಾರಿತ ಮತ್ತು ಒಣಭೂಮಿ ಕೃಷಿ, ಕೃಷಿ ಅರಣ್ಯ ನಿರ್ವಹಣೆ, ಕಳೆ ನಿರ್ವಹಣೆ ಇತ್ಯಾದಿ
- ಕೃಷಿ ಮತ್ತು ಗ್ರಾಮೀಣ ಕ್ಷೇತ್ರಕ್ಕೆ ಹಣಕಾಸು ವ್ಯವಸ್ಥೆ
- ಕೃಷಿ–ಗ್ರಾಮೀಣ ಬೆಳೆ/ಪ್ರಾಣಿ/ಪಶುಸಂಗೋಪನೆಗೆ ವಿಮಾ ಸೌಲಭ್ಯ
- ಖನಿಜ ನೀರು

- ಪ್ಯಾಕೇಜಿಂಗ್ ಕೈಗಾರಿಕೆ ಮತ್ತು ಬ್ರಾಂಡಿಂಗ್
- ಕೃಷಿ ಮತ್ತು ಕೃಷಿ ಸಂಬಂಧಿತ ವಲಯಗಳ ಉಪ ಉದ್ಯಮಗಳಾದ ಉತ್ತಮಗೊಳಿಸಿದ ಪ್ಯಾಕೇಜಿಂಗ್, ಸಲಕರಣೆಗಳು, ಪ್ಲಾಸ್ಟಿಕ್ಸ್, ರಟ್ಟಿನ ಪೆಟ್ಟಿಗೆಗಳ ಕೈಗಾರಿಕೆ ಇತ್ಯಾದಿಗಳ ಅಭಿವೃದ್ಧಿ
- ಕೃಷಿ ತಾಂತ್ರಿಕ ಕೈಗಾರಿಕೆಗಳು, ಬೇಸಾಯ ಸಲಕರಣೆಗಳು ಮತ್ತು ಉಪಕರಣೆಗಳಾದ ಉಕ್ಕೆ ಸಲಕರಣೆಗಳು, ಬಿತ್ತನೆಯ ಸಲಕರಣೆಗಳು, ಕಳೆ ತೆಗೆಯುವ ಮತ್ತು ಅಂತರಬೇಸಾಯ ಸಲಕರಣೆಗಳು, ಸಸ್ಯ ಸಂರಕ್ಷಣ ಸಲಕರಣೆಗಳು, ಕೊಯ್ಲು ಸಲಕರಣೆಗಳು, ಸಂಸ್ಕರಣ ಉಪಕರಣಗಳಾದ ಒಕ್ಕಣೆ, ಸ್ವಚ್ಛಗೊಳಿಸುವ ಮತ್ತು ಶ್ರೇಣೀಕರಣ, ಒಣಗಿಸುವುದು, ಹಿಟ್ಟು ಮಾಡುವುದು ಮತ್ತು ಸಾರ ಹಿಂಡುವುದು, ಬೇಸಾಯ ಉತ್ಪನ್ನಗಳ ಸುಧಾರಿತ ಯಂತ್ರಗಳು ಇತ್ಯಾದಿ.
- ಮಳೆಯಾಧಾರಿತ ನೀರಾವರಿ ಮತ್ತು ಗುಡ್ಡಗಾಡುಗಳಲ್ಲಿ ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಮೀನುಗಾರಿಕೆ ಉತ್ಪಾದನೆಗೆ ಬೇಕಾಗುವ ನಿಖರ ಯಂತ್ರೋಪಕರಣಗಳು
- ಕೃಷಿ ಉತ್ಪಾದನೆಗೆ ಮೌಲ್ಯವರ್ಧನೆ, ಸಂಸ್ಕರಣೆ ಮತ್ತು ಉಪ–ಉತ್ಪನ್ನಗಳ ಬಳಕೆ
- ಕೃಷಿ ಯಂತ್ರೋಪಕರಣಗಳ ತಯಾರಿಕೆ ಮತ್ತು ಅದರಲ್ಲಿ ಬರುವ ಲೋಪ ದೋಷಗಳ ನಿರ್ವಹಣೆ
- ಕೃಷಿ ಆಧಾರಿತ ಕೀಟ ನಿವಾರಕ, ಪೀಡೆ ನಿವಾರಕ ಮತ್ತು ಸಮಗ್ರ ಕೀಟಭಾದೆ ನಿರ್ವಹಣೆ
- ಗ್ರಾಮೀಣ ಕೃಷಿ ತಂತ್ರಜ್ಞಾನ ಮತ್ತು ಮೂಲಭೂತ ಸೌಕರ್ಯಗಳು
- ಲಭ್ಯವಿರುವ ಅಪಾರ ಕೃಷಿ ತ್ಯಾಜ್ಯದಿಂದ ವಿಕೇಂದ್ರೀಕೃತ ಇಂಧನ ಉತ್ಪಾದನೆ
- ಆಹಾರ ಸಂಸ್ಕರಣಾ ತಂತ್ರಜ್ಞಾನ ಮತ್ತು ಉಪಕರಣೆಗಳ ತಯಾರಿಕೆ
- ಆಹಾರ ಪ್ಯಾಕೇಜಿಂಗ್ ತಂತ್ರಜ್ಞಾನ (ಪ್ಯಾಕೇಜಿಂಗ್ ಪದಾರ್ಥಗಳು, ಲೇಬಲ್ ಮಾಡುವುದು)
- ಸ್ವಯಂ ಚಾಲನೆ ಮತ್ತು ಮಾಹಿತಿ ಸಂಸ್ಕರಣೆ (ಡಾಟಾ ಪ್ರೋಸೆಸಿಂಗ್)
- ಆಹಾರ ಭದ್ರತೆ, ಗುಣಮಟ್ಟದ ನಿರ್ವಹಣೆ
- ಶೀತಲೀಕರಣ ಮತ್ತು ಕೃಷಿ ಹಾಗೂ ಆಹಾರ ಸಂಸ್ಕರಣಾ ಘಟಕಗಳಿಗೆ ಹವಾನಿಯಂತ್ರಣ
- ಸಾಗಾಣಿಕೆ ಮತ್ತು ಶೇಖರಣೆ ಸೌಲಭ್ಯಗಳು
- ಹಡಗುಗಳಲ್ಲಿನ ಹಾಗೂ ತೀರಪ್ರದೇಶಗಳಲ್ಲಿ ಮೀನು ಹಿಡಿಯಲು ಬಳಸುವ ಸಲಕರಣೆಗಳು ಮತ್ತು ಮೀನು ಸಂಸ್ಕರಣೆ
- ಜೈವಿಕ ಇಂಧನ
- ಕೃಷಿ ಮತ್ತು ಸಂಬಂಧಿತ ವಲಯಗಳಲ್ಲಿ ಉದ್ದಿಮೆದಾರರ ಸಾಮಾಜಿಕ ಜವಾಬ್ದಾರಿ
- ಕೃಷಿ ಮತ್ತು ಸಂಸ್ಕರಣೆಯಲ್ಲಿ ಇಂಧನ ನಿರ್ವಹಣೆ, ರಾಸಾಯನಿಕಗಳು, ಜೀವರಸಾಯನಿಕಗಳು, ಸಂರಕ್ಷಣಾ ರಸಾಯನಿಕಗಳಿಗೆ ಬೇಕಾದ ಅಂಶಗಳು, ಆಹಾರ ಬಣ್ಣಗಳು, ಆಹಾರ ರುಚಿಕಾರಕ ದ್ರವ್ಯಗಳು, ಎಮಲ್ಸಿಫಯಿಂಗ್, ಸ್ಟಬಿಲೈಸಿಂಗ್, ಆ್ಯಂಟಿ ಕೇಕಿಂಗ್ ಮತ್ತು ಆ್ಯಂಟಿ ಫೋಮಿಂಗ್ ಏಜೆಂಟ್ಸ್, ಆ್ಯಂಟಿ ಆಕ್ಸಿಡೆಂಟ್ಸ್, ಸಿಕ್ವೆಸ್ಟರಿಂಗ್ ಮತ್ತು ಬಫರಿಂಗ್ ಏಜೆಂಟ್ಸ್, ಆಸಿಡುಲಂಟ್ಸ್, ಕಡಿಮೆ ಕ್ಯಾಲೋರಿಯ ಸಿಹಿ ಪದಾರ್ಥಗಳು, ವಿಟಮಿನ್‌ಗಳು ಮತ್ತು ಖನಿಜಾಂಶಗಳು, ಸಂಸ್ಕರಣಾ ಸಾಧನಗಳು, ನ್ಯೂಟ್ರಾಸಿಟಿಕಲ್ಸ್, ಪ್ರೊಬಯಾಟಿಕ್ಸ್, ಇನ್ನಿತರ ಮಿಶ್ರಣಗಳು.

## 15 ಜ್ಞಾನ ಬೆಂಬಲ ಘಟಕ

15.1 ಕರ್ನಾಟಕದಲ್ಲಿ ಕೃಷಿ ಉದ್ದಿಮೆಯನ್ನು ಹಾಗೂ ಕೃಷಿ ವಲಯಗಳಲ್ಲಿ ತಂತ್ರಜ್ಞಾನ ಮತ್ತು ಮಾಹಿತಿಗಳನ್ನು ಸುಗಮಗೊಳಿಸಲು, ಉತ್ಪನ್ನಗಳ ಬಗ್ಗೆ ಮಾಹಿತಿ, ಕೃಷಿ ತಂತ್ರಜ್ಞಾನ ನೀಡುವ ಕೇಂದ್ರವನ್ನು ಪ್ರಾರಂಭಿಸಲಾಗುತ್ತದೆ. ಬಳಕೆದಾರರ ಸಹಾಯಕ ಮತ್ತು ಹೊಸದಾದ ಪದ್ಧತಿಗಳಾದ ಕೃಷಿ ಪೋರ್ಟಲ್, ಅಂತರ್ಜಾಲ ಆಧಾರಿತ ಪದ್ಧತಿಗಳು, ವೈಯ್ಯಕ್ತಿಕ ಮಟ್ಟದಲ್ಲಿ ಪರಸ್ಪರ ವಿಚಾರ ವಿನಿಮಯ, ಹೊಲದಲ್ಲಿಯೇ ಸೇವಾಸೌಲಭ್ಯವು, ಕ್ಷೇತ್ರಕ್ಕೇ ಹೋಗುವುದನ್ನು ಹೆಚ್ಚಿನ ಪ್ರಸರಣಕ್ಕಾಗಿ ಅಳವಡಿಸಿಕೊಳ್ಳಲಾಗುವುದು, ಹಬ್ ಮತ್ತು ಸ್ಪೋಕ್ ಮಾದರಿಯಲ್ಲಿ

ಇತರೆ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ವಿಶ್ವವಿದ್ಯಾಲಯಗಳು ಮತ್ತು ಸಂಶೋಧನಾ ಕೇಂದ್ರಗಳ ಸಹಭಾಗಿತ್ವದಲ್ಲಿ ಅಳವಡಿಸಿಕೊಂಡು ಈ ಕೇಂದ್ರ ಕಾರ್ಯ ನಿರ್ವಹಿಸುತ್ತದೆ

15.2 ಜ್ಞಾನ ಸಹಾಯ ಕೋಶ ಕೃಷಿ ಪೋರ್ಟಲ್, ವಿಶ್ವವಿದ್ಯಾಲಯ ಮತ್ತು ರೈತರ ಪರಸ್ಪರ ವಿಚಾರ ವಿನಿಮಯ, ಕಾರ್ಪೋರೇಟ್ ಜ್ಞಾನ ಮತ್ತು ರೈತರು ಆಗಾಗ ಕೇಳುವ ಪ್ರಶ್ನೆಗಳು, ಸಲಹೆ ಮತ್ತು ಪರಿಹಾರ ಬೆಂಬಲ, ಜ್ಞಾನ ಪ್ರಸರಣೆ, ತಂತ್ರಜ್ಞಾನ,ರಾಜ್ಯ ಹಾಗೂ ಕೇಂದ್ರಗಳ ಯೋಜನೆ ಮತ್ತು ಸೇವೆಗಳು, ಮುಖ್ಯ ಘಟನೆಗಳು, ವಿದ್ಯುನ್ಮಾನ ಪ್ರಸರಣ, ಉತ್ತಮ ಹಾಗೂ ನವೀನ ಆವಿಷ್ಕಾರಗಳು, ಹವಾಮಾನದ ವಿಚಾರಗಳನ್ನು ಕಾಲಕಾಲಕ್ಕೆ ತಿಳಿಸುವುದು, ಮತ್ತು ಸಲಹೆ ಮತ್ತು ರೋಗ ಪರೀಕ್ಷಣ ಸೇವೆಗಳು, ಲಿಂಗ ನಿರ್ಧರಿತ ತಾಂತ್ರಿಕತೆಯ ಅಭಿವೃದ್ಧಿ, ರೈತರ ನಡುವೆ ಸುಧಾರಿತ ಕೃಷಿ ತಾಂತ್ರಿಕತೆಯ ಬಗ್ಗೆ ಅರಿವು ಮೂಡಿಸುವುದು,ಕೃಷಿಯಲ್ಲಿ ಮಾಹಿತಿ ತಂತ್ರಜ್ಞಾನವನ್ನು ಪ್ರೋತ್ಸಾಹಿಸುವುದು, ಉನ್ನತ ತಂತ್ರಜ್ಞಾನದ ಕೃಷಿಗೆ ಮಾರ್ಗದರ್ಶನ ಮತ್ತು ನಿಖರ ಬೇಸಾಯ, ಕೃಷಿ ತಂತ್ರಜ್ಞಾನವನ್ನು ಹೆಚ್ಚು ಉತ್ಪಾದನೆಗಾಗಿ ಪ್ರಸರಿಸುವುದು, ರೈತ ಕೃಷಿ ಶಾಲೆಗಳು, ಸ್ಥಿರವಾಗಿರುವಂತಹ ತಂತ್ರಜ್ಞಾನವನ್ನು ಶುದ್ಧ ನೀರಿಗಾಗಿ ಅಭಿವೃದ್ಧಿಪಡಿಸುವುದು, ಚೌಳು ನೀರು, ಜಲಕೃಷಿ ಮತ್ತು ಶೀತಲನೀರಿನಲ್ಲಿ ಮತ್ಸ್ಯಗಾರಿಕೆ, ಆರೋಗ್ಯ ವಿಜ್ಞಾನ ಮತ್ತು ಆರೋಗ್ಯ ರಕ್ಷಣೆ ಹಾಗೂ ಮೀನುಗಾರಿಕೆಗಾಗಿ ಗುಣ ನಿಯಂತ್ರಣ ಪದ್ಧತಿಗಳು, ಮೀನುಗಾರಿಕೆಗಾಗಿ ಬಯೋ ಇನ್‌ಫರ್ಮ್ಯಾಟಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಆಧಾರಿತ ಪರಿಹಾರಗಳು, ಜಲಕೃಷಿ ಮಾಡುವ ಕೊಳಗಳಲ್ಲಿನ ಸೋರಿಕೆ ನಿಯಂತ್ರಿಸಲು ತಂತ್ರಜ್ಞಾನದ ಅಭಿವೃದ್ಧಿ, ಪಾಚಿ ಮತ್ತು ಸಡಿಲ ಮಣ್ಣಿನಲ್ಲಿ ಮೀನು ಕೃಷಿ ನಿರ್ಮಾಣಕ್ಕಾಗಿ ತಂತ್ರಜ್ಞಾನದ ಅಭಿವೃದ್ಧಿ, ಪಶುಸಂಗೋಪನೆ ಮತ್ತು ಕೋಳಿ ಕೃಷಿ ವಲಯದಲ್ಲಿ ಉತ್ಪತ್ತಿ ಹೆಚ್ಚಿಸಲು ಸೂಚಿಸುವ ಕುರಿತು ಮಾಹಿತಿ, ನಿರ್ಧರಿತ ಮತ್ತು ಸಂಭವನೀಯ ಉತ್ಪಾದಕತೆಯಲ್ಲಿರುವ ಅಂತರವನ್ನು ಕಡಿಮೆಮಾಡುವುದು, ಸಂತಾನೋತ್ಪತ್ತಿ ಸಾಮರ್ಥ್ಯ ಮತ್ತು ರೋಗ ನಿಯಂತ್ರಣೆಯನ್ನು ಅಭಿವೃದ್ಧಿಪಡಿಸುವುದು, ಮೌಲ್ಯವರ್ಧನೆಗೆ ಸುಧಾರಿತ ತಂತ್ರಜ್ಞಾನದ ಅಭಿವೃದ್ಧಿ,ಪಶುಸಂಗೋಪನೆ, ಕೋಳಿ ಉತ್ಪನ್ನಗಳು ಮತ್ತು ಆಹಾರ ಸಂಸ್ಕರಣ ತಂತ್ರಜ್ಞಾನಗಳು ಇತ್ಯಾದಿಗಳಿಂದ ಉತ್ಪನ್ನಗಳ ಸಂಗ್ರಹಣಾ ಸಾಮರ್ಥ್ಯ ಹೆಚ್ಚಿಸುವುದು ಹಾಗೂ ಗುಣಮಟ್ಟ ಸಂರಕ್ಷಣೆ ಮಾಡುವುದು ಹಾಗೂ ಕರಪತ್ರಗಳ ಹಂಚಿಕೆ, ಮಣ್ಣು ಮತ್ತು ನೀರು ಪರೀಕ್ಷಾ ಸೇವೆಗಳು, ಗುರುತಿಸಲ್ಪಟ್ಟ ಕ್ಷೇತ್ರಗಳಲ್ಲಿ ನಿರ್ದಿಷ್ಟ ತರಬೇತಿ, ತಂತ್ರಜ್ಞಾನ ಮತ್ತು ಉತ್ಪನ್ನಗಳ ನಿರ್ಧಾರಣೆ, ಪರಿಷ್ಕರಣೆ ಮತ್ತು ಪ್ರಾತ್ಯಕ್ಷತೆ, ತಾಂತ್ರಿಕ ಉತ್ಪನ್ನಗಳಿಗೆ ಸಂಬಂಧಿಸಿದಂತೆ ಏಕಗವಾಕ್ಷಿ ವಿಲೇವಾರಿ ಪದ್ಧತಿ, ಹಬ್ ಮತ್ತು ಸ್ಪೋಕ್ ಮಾದರಿಯ ಮೂಲಕ ಮಾಹಿತಿ ವಿಶ್ಲೇಷಣೆ.

## 16 ಮಾರುಕಟ್ಟೆ ಜ್ಞಾನ ಕೋಶ

16.1 ಸದರೀ ನೀತಿಯು ಸಮಗ್ರವಾದಂತಹ ಮಾರುಕಟ್ಟೆ ಜ್ಞಾನ ಕೋಶವನ್ನು ಅಭಿವೃದ್ಧಿಗೊಳಿಸುವ ಉದ್ದೇಶ ಹೊಂದಿದೆ. ಇದರಲ್ಲಿ ದೇಶೀಯ ಮತ್ತು ಜಾಗತಿಕ ಮಟ್ಟದಲ್ಲಿ ಉತ್ಪನ್ನಗಳ ಪೂರೈಕೆ ವ್ಯವಸ್ಥೆ ಮತ್ತು ವಲಯಗಳಿಗೆ ಸಂಬಂಧಿಸಿದಂತೆ ಮಾಹಿತಿಗಳ ಕೋಶವನ್ನು ಹೊಂದಲಾಗುವುದು. ಈ ಕೋಶವು ಮಾರುಕಟ್ಟೆ ಅವಕಗಳ ಬಗ್ಗೆ, ಪ್ರಮುಖ ಉದ್ದಿಮೆದಾರರ ವಿವರಸಂಗ್ರಹ, ಬೆಲೆ ವರ್ತನೆಗಳು, ಮಾರುಕಟ್ಟೆಯ ವಿಶ್ಲೇಷಣೆಗಳು, ಬೆಳೆ ವಿಮೆ, ಜಾಗತಿಕ ಮತ್ತು ದೇಶೀಯ ಪ್ರದೇಶಗಳಿಗೆ ಸಂಬಂಧಿಸಿದ ಕೃಷಿ ಉತ್ಪಾದನೆ ಮತ್ತು ಕ್ಷೇತ್ರ, ಸರಬರಾಜು ಮುನ್ಸೂಚನೆ, ಬೆಲೆ ಮುನ್ಸೂಚನೆ, ಶೇಖರಣೆ ಮತ್ತು ಮಾರುಕಟ್ಟೆ ಅಂಶಗಳು, ಉತ್ಪನ್ನ ಪರಿಚಯ, ಒಪ್ಪಂದ ಬೇಸಾಯ, ವ್ಯವಸ್ಥಿತ ಚಿಲ್ಲರೆ ವ್ಯಾಪಾರ, ಸರಬರಾಜು ಸರಣಿ ಒದಗಿಸುವವರು. ಬೆಳೆ ಅಂದಾಜು (crop budgeting), ಜಾಗತಿಕ ನಿರ್ಧಾರಣೆ, ಬ್ರಾಂಡ್ ಅಭಿವೃದ್ಧಿ ಉತ್ತೇಜನ ಇತ್ಯಾದಿಗಳ ಮಾಹಿತಿ ನೀಡುತ್ತದೆ. ಮಾರುಕಟ್ಟೆ ಜ್ಞಾನ ಕೋಶ, ಸಂದಿಗ್ಧ ಮಾಹಿತಿ ಮತ್ತು ಸಂಶೋಧನಾ ಸಹಾಯವನ್ನು ಕೃಷಿ ಶಿಕ್ಷಣ ಕೇಂದ್ರಗಳು ಮತ್ತು ಉತ್ಕೃಷ್ಟ ಕೃಷಿ ಕೇಂದ್ರಗಳಿಂದ ಪಡೆಯಬಹುದು.

## 17 ವಿಶೇಷ ಕೃಷಿ ಪ್ರವಾಸೋದ್ಯಮ ಬಂಡವಾಳ ವಲಯಗಳು

17.1 ವಿಶೇಷ ಪ್ರವಾಸೋದ್ಯಮ ವಲಯಗಳು ಕೃಷಿ ಪ್ರವಾಸೋದ್ಯಮವನ್ನು ರಾಜ್ಯದ ಗ್ರಾಮೀಣ ಸಮುದಾಯಕ್ಕೆ ಉದ್ಯೋಗ ಆರ್ಥಿಕ ಸ್ಥಿರತೆ ಕೊಡುವ ಉದ್ದೇಶ ಹೊಂದಿವೆ. ಕೃಷಿ ಪ್ರವಾಸೋದ್ಯಮವೆಂದರೆ, ಕಾರ್ಯಾಚರಣೆಯಲ್ಲಿರುವ ಕೃಷಿಪ್ರದೇಶ ಅಥವಾ ಇನ್ನಾವುದೇ ಕೃಷಿ, ತೋಟಗಾರಿಕೆ, ಅಥವಾ ಕೃಷಿ ವಾಣಿಜ್ಯ ಉದ್ದೇಶಿತ ಕಾರ್ಯಾಚರಣೆಗಳನ್ನು – ಮಾಹಿತಿ, ಮನರಂಜನೆ, ಶಿಕ್ಷಣಕ್ಕಾಗಿ ಅಥವಾ ಕೃಷಿ ಚಟುವಟಿಕೆ ಅಥವಾ ಕಾರ್ಯಾಚರಣೆಗಳಲ್ಲಿ ಚುರುಕಾಗಿ ತೊಡಗಿಸಿಕೊಳ್ಳಲು ಭೇಟಿ ನೀಡುವ ರಜೆಯ ಕಲ್ಪನೆ. ಕ್ಷೇತ್ರದಲ್ಲಿಯೇ ಮಾರಾಟ ಮಾಡುವ ಕೃಷಿ ಉತ್ಪನ್ನಗಳ ಸಂಸ್ಕರಿತ ಆಹಾರ, ಸಾವಯವ ಆಹಾರ, ನಗರ ಪ್ರದೇಶದ ಪ್ರವಾಸಿಗರನ್ನು ಆಕರ್ಷಿಸಬಹುದು. ಹಳ್ಳಿಗಳು ಮನರಂಜನೆಯ ಅವಕಾಶಗಳನ್ನು ಎಲ್ಲಾ ವಯೋಮಿತಿಯವರಿಗೆ ಅಂದರೆ ಮಕ್ಕಳು, ಯುವಕರು, ಮಧ್ಯವಯಸ್ಕರು ಮತ್ತು ಹಿರಿಯರು, ಗಂಡು, ಹೆಣ್ಣು, ಒಟ್ಟಾರೆಯಾಗಿ ಹೇಳಬೇಕೆಂದರೆ ಇಡೀ ಕುಟುಂಬಕ್ಕೆ ಭರಿಸಬಹುದಾದ ಬೆಲೆಯಲ್ಲಿ ಒದಗಿಸುತ್ತವೆ. ಗ್ರಾಮೀಣ ಆಟಗಳು, ಹಬ್ಬಗಳು, ಆಹಾರ, ಬಟ್ಟೆ ಮತ್ತು ಅಲ್ಲಿನ ಪ್ರಕೃತಿ ವಿವಿಧ ಮನರಂಜನೆಯನ್ನು ಇಡೀ ಕುಟುಂಬಕ್ಕೆ ಒದಗಿಸುತ್ತವೆ. ಗುರುತಿಸಿದ ಈ ವಲಯಗಳ ಚಟುವಟಿಕೆಯ ಪ್ರಸ್ತುತ ಶ್ರೇಣಿಯನ್ನು ರೈತರು ಮತ್ತು ಗ್ರಾಮೀಣ ಜನತೆ ನಗರ ಪ್ರದೇಶದ ಪ್ರವಾಸಿಗರನ್ನು ಆಕರ್ಷಿಸಲು ಸೇವೆ ಮತ್ತು

ಸೌಕರ್ಯಗಳನ್ನು ಒದಗಿಸುತ್ತದೆ. ಆ ಮೂಲಕ ನಗರದ ಜನರಿಗೆ ತಮ್ಮ ಮೂಲಪ್ರದೇಶಗಳಿಗೆ ಮರಳಲು ಒಂದು ಅವಕಾಶವನ್ನು ಕೊಡುತ್ತವೆ. ಈ ವಲಯಗಳು ಕೃಷಿ ಪ್ರವಾಸೋದ್ಯಮದ ಉತ್ಪನ್ನಗಳಾದ ಕೃಷಿ ಕ್ಷೇತ್ರದಲ್ಲಿ ವಾಸ, ಪ್ರಾಣಿಗಳಿಗೆ ಆಹಾರ ಕೊಡುವುದು, ಹಣ್ಣು / ತರಕಾರಿಗಳನ್ನು ಕೀಳುವುದು, ಕ್ಯಾಂಪ್ ಹಾಕುವುದು, ಗ್ರಾಮೀಣ ಆಟಗಳು, ವಿಷಯಾಧಾರಿತ ವಿಶೇಷ ಘಟನೆಗಳು ಮತ್ತು ಹಬ್ಬಗಳು, ಹಳ್ಳಿ ಜಾತ್ರೆಗಳು, ರೈತರ ಮಾರುಕಟ್ಟೆಗಳು, ರಸ್ತೆ ಬದಿ ಉತ್ಪನ್ನಗಳ ಮಳಿಗೆಗಳು, ಕೃಷಿ ಉತ್ಪನ್ನಗಳ ಖರೀದಿ, ಅಡುಗೆ ವಸ್ತುಗಳ ಖರೀದಿ, ಹಾಸಿಗೆ ಮತ್ತು ಫಲಹಾರ, ಆಯ್ಕೆ ಮತ್ತು ಪಾವತಿ, ಎತ್ತಿನಗಾಡಿ ಸವಾರಿ, ದೋಣಿ ವಿಹಾರ, ಮೀನು ಹಿಡಿಯುವುದು, ಮೂಲಿಕೆ ಅರಸುವುದು ಮತ್ತು ಆರೋಗ್ಯ (ಆಯುರ್ವೇದ ಮತ್ತು ನೈಸರ್ಗಿಕ ಉಪಚಾರ – ನ್ಯಾಚುರೋಪತಿ / ಭಾರತದ ಸಾಂಪ್ರದಾಯಿಕ ಔಷಧಗಳು) ಪ್ರವಾಸ, ಇವುಗಳನ್ನು ಒದಗಿಸುತ್ತದೆ. ಕೃಷಿ ಪ್ರವಾಸೋದ್ಯಮದಲ್ಲಿನ ವಿಷಯಗಳು ಅಗಾಧವಾಗಿದ್ದು ಕೃಷಿ ನಿರ್ವಾಹಕರು ತಮ್ಮದೇ ಪರಿಕಲ್ಪನೆಗಳನ್ನು ಒದಗಿಸಬಹುದು.

## 18 ಬಂಡವಾಳ ಹೂಡಿಕೆಗೆ ಉತ್ತೇಜನ

18.1 ಕರ್ನಾಟಕ ರಾಜ್ಯವು ಬಂಡವಾಳ ಹೂಡಿಕೆಯ ಘಟನೆಗಳಾದ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ (GIM), ಜೈವಿಕ ತಂತ್ರಜ್ಞಾನ ಸಮಾವೇಶ ಇತ್ಯಾದಿಯನ್ನು ರಾಜ್ಯದಲ್ಲಿ ಬಂಡವಾಳ ಹೂಡಿಕೆಯನ್ನು ಹೆಚ್ಚಿಸಲು ನಿಯತವಾಗಿ ಆಯೋಜಿಸುತ್ತಿದೆ. ಇದೇ ರೀತಿಯಲ್ಲಿ ಬಹು ಜಾಗತಿಕ ಕೃಷಿ ವಾಣಿಜ್ಯ ಬಂಡವಾಳ ಹೂಡಿಕೆದಾರರ ಸಮಾವೇಶ (GABIM) ರೋಡ್ ಶೋಗಳು, ವ್ಯಾಪಾರದಿಂದ ವ್ಯಾಪಾರಕ್ಕೆ ಮೇಳಗಳು ಇತ್ಯಾದಿಯನ್ನು ಆಯೋಜಿಸಲಾಗುತ್ತದೆ. ಅಲ್ಲದೆ ಈ ಕಾರ್ಯನೀತಿ, ಆಧುನಿಕತೆ ಮತ್ತು ತಾಂತ್ರಿಕತೆ ಹೊಂದಿರುವ, ಅತ್ಯುನ್ನತ ಪದ್ಧತಿಗಳ ಸಂಸ್ಕರಣ ತಾಂತ್ರಿಕತೆ, ಸಂಭವನೀಯ ರಫ್ತು ಮಾರುಕಟ್ಟೆ ಇತ್ಯಾದಿಗಳನ್ನು ಹೊಂದಿರುವ ರಾಷ್ಟ್ರಗಳ ಜೊತೆ ಸಹಭಾಗಿತ್ವವನ್ನು ಇಂಥ ಜಾಗತಿಕ ಮೇಳಗಳು ಸಾಧ್ಯವಾಗಿಸುತ್ತವೆ. ತಂತ್ರಜ್ಞಾನದ ಲಭ್ಯತೆ ಮತ್ತು ಆಧುನಿಕತೆ, ಉತ್ತಮ ಅಭ್ಯಾಸಗಳು, ಮಾರ್ಕೆಟಿಂಗ್ ಸಹಾಯ ಮತ್ತು ಇತರ ಉಪಾಯಗಳನ್ನು ಕೃಷಿ ವಾಣಿಜ್ಯ ಕ್ಷೇತ್ರದಲ್ಲಿ ಕರ್ನಾಟಕಕ್ಕೆ ಬಂಡವಾಳ ಹರಿದುಬರುವುದನ್ನು ಸುಲಭಮಾಡುತ್ತದೆ. ಈ ಕಾರ್ಯನೀತಿಯು ಕರ್ನಾಟಕ ರಾಜ್ಯ ಸರ್ಕಾರ ಅಂತರ್ರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಮುಂದಿರುವ ಸಂಸ್ಥೆಗಳು / ವಿಶ್ವವಿದ್ಯಾಲಯಗಳು / ಆರ್ಥಿಕ ಸಂಸ್ಥೆಗಳು ಇನ್ನಿತರ ಏಜೆನ್ಸಿಗಳ ಜೊತೆಯಲ್ಲಿ ಒಡಂಬಡಿಕೆ ಮಾಡಿಕೊಳ್ಳಲು ಅನುವುಮಾಡಿಕೊಡುತ್ತದೆ. ಈ ಒಡಂಬಡಿಕೆಗಳ ಸಹಭಾಗಿತ್ವ ಮಾದರಿಯಲ್ಲಿ ವಿವಿಧ ಭಾರತೀಯ ಮತ್ತು ಅಂತರ್ರಾಷ್ಟ್ರೀಯ ಸಂಸ್ಥೆಗಳಿಂದ ನಿಶ್ಚಯವಾಗಿ ಬರುವಂತೆ ಮಾಡುತ್ತವೆ. ನೀತಿಯಲ್ಲಿನ ದೃಷ್ಟಿಕೋನವನ್ನು ಸಾಕಾರಗೊಳಿಸಲು ಮತ್ತು ಬಂಡವಾಳವನ್ನು ಆಕರ್ಷಿಸಲು ವಿವಿಧ ಪ್ರೋತ್ಸಾಹಗಳು ಮತ್ತು ಶಾಸನ ತಿದ್ದುಪಡಿಗಳನ್ನು ನಿಬಂಧನೆಯಲ್ಲಿ ಪ್ರಸ್ತಾಪಿಸಲಾಗಿದೆ.

## 19 ಆರ್ಥಿಕ ಪ್ರೋತ್ಸಾಹಗಳು ಮತ್ತು ಸೌಲಭ್ಯಗಳು

### 19.1 ರೈತರಿಗೆ ವಿಶೇಷ ಪ್ರೋತ್ಸಾಹಗಳು

- ಯಾವ ರೈತರು ತಮ್ಮ ಭೂಮಿಯನ್ನು ಕೃಷಿ ಆಧಾರಿತ ಕೈಗಾರಿಕೆಗಾಗಿ ಕಳೆದುಕೊಳ್ಳುತ್ತಾರೋ ಅಂಥವರು ಕೃಷಿಗೆ ಸಂಬಂಧಿತ ಚಟುವಟಿಕೆಗಳಿಗಾಗಿ ಜಾಗವನ್ನು ಖರೀದಿಸಿದ್ದಲ್ಲಿ ನೋಂದಣಿ ಖರ್ಚನ್ನು ಮನ್ನಾ ಮಾಡಲಾಗುವುದು.
- ತಮ್ಮ ಜಾಗವನ್ನು ಯಾವುದೇ ಶುಲ್ಕವಿಲ್ಲದೆ ರೈತರು ಕೃಷಿವಾಣಿಜ್ಯದ ಉದ್ದೇಶಕ್ಕಾಗಿ ಸ್ವಘೋಷಣೆಯಿಂದ ಬದಲಾಯಿಸಬಹುದು. ಘೋಷಿತ ಚಟುವಟಿಕೆ ಒಂದು ವರ್ಷದಲ್ಲಿ ಕಾರ್ಯರೂಪಕ್ಕೆ ಬರದಿದ್ದಲ್ಲಿ, ಬದಲಾವಣೆಯನ್ನು ರದ್ದುಗೊಳಿಸಲಾಗುವುದು.
- ವಿಶೇಷವಾಗಿ ಸಣ್ಣ ರೈತರಿಗೆ ಹಿಡುವಳಿಗಳನ್ನು ಒಗ್ಗೂಡಿಸಲು ಸಹಾಯ ಮಾಡುವುದು. ಇದರಿಂದಾಗಿ ಅಂತಹ ರೈತರು ಯಾಂತ್ರೀಕೃತ ಕೃಷಿಯನ್ನು ಕೈಗೊಂಡು ಉತ್ತಮ ಇಳುವರಿ ಪಡೆಯಬಹುದಾಗಿದೆ ಮತ್ತು ಹೆಚ್ಚು ಲಾಭ ಗಳಿಸಬಹುದಾಗಿದೆ.

### 19.2 ಕೃಷಿ ಉತ್ಪನ್ನ ಮಾರುಕಟ್ಟೆ (ಎ.ಪಿ.ಎಂ.ಸಿ ಶಾಸನ) ಕಾಯಿದೆಗೆ ತಿದ್ದುಪಡಿ

19.2.1 ರೈತರು ಮತ್ತು ಇನ್ನಿತರೇ ಪಾಲುದಾರರಿಗೆ ಅನುಕೂಲವಾಗುವಂತೆ ಟರ್ಮಿನಲ್ ಮಾರುಕಟ್ಟೆಗಳ ಸುಸ್ಥಿರ ಚಟುವಟಿಕೆಯನ್ನು ಪ್ರೋತ್ಸಾಹಿಸಲು ಕೃಷಿ ಉತ್ಪನ್ನ ಮಾರುಕಟ್ಟೆ ಕಾಯಿದೆಗೆ ಕೆಲವು ತಿದ್ದುಪಡಿಗಳನ್ನು ತರಬೇಕಾಗುತ್ತದೆ. ಅವುಗಳ ಸಾರಾಂಶ ಕೆಳಕಂಡಂತಿದೆ :–

- ಸರಕು ವಹಿವಾಟಿಗೆ ಯಾವುದೇ ರೀತಿಯ ಮಾರುಕಟ್ಟೆ ಶುಲ್ಕವನ್ನು ಕಟ್ಟಬೇಕಾಗಿಲ್ಲ. ಆದರೆ ಆ ಕುರಿತು ಮಾಹಿತಿಯನ್ನು ಕೃಷಿ ಮಾರಾಟ ಇಲಾಖೆಗೆ ಒದಗಿಸಬೇಕು.

- ನೇರ ಖರೀದಿಗೆ ಬೇಕಾದ ಠೇವಣಿ ಹಣವನ್ನು ರೂಪಾಯಿ ಐವತ್ತು ಲಕ್ಷದಿಂದ ರೂಪಾಯಿ ಐದು ಲಕ್ಷಕ್ಕೆ ಇಳಿಸಲಾಗುವುದು.
- ಬೆಂಗಳೂರು ನಗರದ 25 ಕಿಲೋಮೀಟರ್ ಪರಿಧಿಯನ್ನು ಹೊರತುಪಡಿಸಿ ವಲಯ ನಿಯಮಗಳನ್ನು ತೆಗೆದು ಖಾಸಗಿ ವಲಯದಲ್ಲಿ ಮಾರುಕಟ್ಟೆ ನಿರ್ಮಿಸಲು ಯಾವ ನಿರ್ಬಂಧವನ್ನು ಹೇರುವುದಿಲ್ಲ.
- ಹತ್ತು ವರ್ಷಗಳ ಅವಧಿಗೆ ಸಂಸ್ಕರಣೆ ಮತ್ತು ರಫ್ತಿಗೆ ಮಾರುಕಟ್ಟೆಯ ಶುಲ್ಕ ವಿನಾಯಿತಿ.
- ಕೃಷಿ ಉತ್ಪಾದನೆ ಮಾರುಕಟ್ಟೆಗಳ ಭೂಮಿಯನ್ನು ಕೃಷಿ ಸೇವಾ ವಲಯವೆಂದು ವರ್ಗೀಕರಿಸಲಾಗುವುದು.
- ಖಾಸಗಿ ಮಾರುಕಟ್ಟೆಗಳನ್ನೂ ಸಹ ಕನಿಷ್ಟ ಬೆಂಬಲ ಬೆಲೆಯ ಖರೀದಿ ಕೇಂದ್ರಗಳಾಗಿ ಪರಿಗಣಿಸಲಾಗುವುದು.
- ಅಂತರ್ಜಾಲ ವಾಣಿಜ್ಯಕ್ಕೆ (ಈ–ಟ್ರೇಡಿಂಗ್) ಎಲ್ಲಾ ಮಾರುಕಟ್ಟೆಗಳಲ್ಲಿ ಅವಕಾಶ ಕಲ್ಪಿಸಲಾಗುವುದು.

## 20 ಕೃಷಿ ಆಧಾರಿತ ಕೈಗಾರಿಕೆಗಳಿಗೆ ಮತ್ತು ಕೃಷಿಯ ಮೂಲಭೂತ ಯೋಜನೆಗೆ ಭೂಮಿ

20.1 ಕರ್ನಾಟಕ ಸರ್ಕಾರ ರಾಜ್ಯದಲ್ಲಿ ಸುಸ್ಥಿರ ಕೈಗಾರಿಕರಣಕ್ಕಾಗಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ಭೂ ಬ್ಯಾಂಕುಗಳನ್ನು ಗುರುತಿಸುವಲ್ಲಿ ಪ್ರಗತಿಪರ ಹೆಜ್ಜೆಗಳನ್ನು ಇಟ್ಟಿದೆ. ಬಂಡವಾಳ ಹೂಡಿಕೆದಾರರು ತಮ್ಮ ಘಟಕವನ್ನು ಮತ್ತು ಮೂಲಭೂತ ಸೌಲಭ್ಯಗಳನ್ನು ಗುರುತಿಸಲ್ಪಟ್ಟ ಕೈಗಾರಿಕಾ ಪಾರ್ಕ್‌ಗಳಲ್ಲಿ ವಿಶೇಷ ಆರ್ಥಿಕ ವಲಯಗಳಲ್ಲಿ ಅಥವಾ ಕೈಗಾರಿಕಾ ಪ್ರದೇಶಗಳಲ್ಲಿ ಸ್ಥಾಪಿಸಿ ಸಮೂಹ ಲಾಭದ ಅವಕಾಶಗಳನ್ನು ಪಡೆಯಬಹುದಾಗಿದೆ.

20.2 ಪರ್ಯಾಯವಾಗಿ ಹೂಡಿಕೆದಾರರು ಪಾರದರ್ಶಕತೆಯ ಆಧಾರದ ಮೇಲೆ ಕೃಷಿಗೆ ಯೋಗ್ಯವಲ್ಲದ ಭೂಮಿಯನ್ನು ಪಡೆದುಕೊಂಡು ಕಾನೂನಿನ್ವಯ ಮತ್ತು ಪರಿಸರಪೂರಕವಾದ ಮಾರ್ಗದರ್ಶಕಗಳನ್ನು ಮತ್ತು ಪುನರ್ವಸತಿ ಯೋಜನೆಗಳನ್ನು ಚಾಚೂ ತಪ್ಪದೆ ಪಾಲಿಸಿದಲ್ಲಿ ತಮ್ಮ ಕೈಗಾರಿಕೆಗಳನ್ನು ಪ್ರಾರಂಭಿಸಬಹುದು. ಮುಂದುವರೆದು ಭೂಮಾಲಿಕರನ್ನು ಯೋಜನೆಯ ಪಾಲುದಾರರನ್ನಾಗಿ ಪರಿಗಣಿಸಿ ಶೇರು ಬಂಡವಾಳ ಹೊಂದಲು / ಆಧಾಯ ಹಂಚಿಕೆ, ಹೂಡಿಕೆಗೆ ಅವಕಾಶ ಕಲ್ಪಿಸಬಹುದು. ಕೃಷಿ ವಲಯ ಯತೇಚ್ಛವಾಗಿ ಅವಕಾಶಗಳನ್ನು ಕೊಡುವುದರಿಂದ ಬೇರಾವುದೇ ಹೊಸದಾದ ವ್ಯಾವಹಾರಿಕ ಮಾದರಿಗಳನ್ನು ರೂಪಿಸಿ ಪಾಲುದಾರಿಕೆಯಲ್ಲಿ ಯೋಜನೆಯನ್ನು ಕೈಗೊಳ್ಳುವುದನ್ನು ಪರಿಶೀಲಿಸಬಹುದಾಗಿದೆ.

20.3 ಇದಲ್ಲದೆ, ಕೃಷಿ ಆಧಾರಿತ ಕೈಗಾರಿಕೆಗಳಿಗೆ ಗರಿಷ್ಟ ಶೇಕಡ 25ರಷ್ಟು ತಮ್ಮ ಜಾಗವನ್ನು ತಮಗೆ ಬೇಕಾದ ಕಚ್ಚಾ ವಸ್ತುಗಳ ಉತ್ಪಾದನೆಗಾಗಿ ಓಪನ್ ಫಾರ್ಮಿಂಗ್‌ಗೆ ಬಳಸಿಕೊಳ್ಳಲು ಅನುಮತಿ ನೀಡಲಾಗುವುದು. ಆದರೆ ಭೂ ಭಾಗದ ಶೇಕಡ ನೂರರಷ್ಟನ್ನು (ಸೆಟ್‌ಬ್ಯಾಕ್ ಹಾಗೂ ಇನ್ನಿತರ ನಿಯಮಗಳಂತೆ ಭೂ ಭಾಗ ಹೊರತು ಪಡಿಸಿ) ಪುಷ್ಪಕೃಷಿ, ತೋಟಗಾರಿಕೆ, ಬೀಜ ಅಭಿವೃದ್ಧಿಗೆ, ಪಶು ಸಂಗೋಪನೆಗೆ, ಮೀನುಸಾಕಾಣಿಕೆ, ಜಲಕೃಷಿ, ತರಕಾರಿ, ಹಣ್ಣು, ಅಣಬೆಯನ್ನು ನಿರ್ಬಂಧಿತ ಪರಿಸರದಲ್ಲಿ ಬೆಳೆಯಬಹುದು ಮತ್ತು ಕೃಷಿ ಹಾಗೂ ಕೃಷಿವಲಯಗಳ ಸೇವೆಗಳನ್ನು ಒದಗಿಸಬಹುದು.

20.4 ಕೃಷಿ ಭೂಮಿಯನ್ನೂ ಅನ್ಯಮಾರ್ಗವಿಲ್ಲದೆ ಯಾವುದಾದರೊಂದು ಕೃಷಿಗೆ ಸಂಬಂಧಿಸಿದ ಮೂಲಭೂತ ಸೌಕರ್ಯ ಮಾಡುವುದಕ್ಕಾಗಿ ಅಥವಾ ಕೃಷಿ ಆಧಾರಿತ ಉತ್ಪನ್ನಗಳ ತಯಾರಿಕೆಯ ಘಟಕ ನಿರ್ಮಿಸುವುದಕ್ಕಾಗಿ ಪಡೆಯಬೇಕಾದಲ್ಲಿ ಎಲ್ಲಾ ವಿಧಿಗಳಿಂದಲೂ ಅದರ ಸೂಕ್ತತೆಯನ್ನು ಪರಿಗಣಿಸಿ ಅದರಿಂದ ಕೃಷಿ ಚಟುವಟಿಕೆಗಳಿಗೆ ಉಂಟಾಗಬಹುದಾದ ಸುಸ್ಪಷ್ಟ ಲಾಭಗಳನ್ನು ಅರಿತು, ಬಡತನದ ರೇಖೆಗಿಂತ ಕೆಳಮಟ್ಟದಲ್ಲಿರುವ ಕುಟುಂಬಗಳಿಗೆ ಉದ್ಯೋಗಾವಕಾಶಗಳಿವೆ ಎಂದು ಗಮನಿಸಿ, ಸುಧಾರಿತ ಕೃಷಿ ತಂತ್ರಜ್ಞಾನ ಮತ್ತು ಸಂಸ್ಕರಣ ಕೌಶಲ್ಯವನ್ನು ಸ್ಥಳೀಯರಿಗೆ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಿ, ಕಚ್ಚಾವಸ್ತುಗಳನ್ನು ಸ್ಥಳೀಯರಿಂದಲೇ ಕೊಂಡುಕೊಳ್ಳಬಹುದಾದ ಸಾಧ್ಯತೆಗಳೆಡೆ ಗಮನ ಹರಿಸಿ ಉದ್ದೇಶಿತ ಯೋಜನೆಗೆ ಅನುಮತಿ ನೀಡಲಾಗುವುದು. ಒಂದು ವೇಳೆ ಸ್ಥಳೀಯ ಸಮುದಾಯದ ಒಪ್ಪಿಗೆ ಮತ್ತು ಯೋಜನೆಯ ಅನುಕೂಲತೆಯ ಆಧಾರದ ಮೇಲೆ ಮಂಜೂರಾತಿ ನೀಡಿದಲ್ಲಿ ಬಂಡವಾಳ ಹೂಡಿಕೆದಾರರು ತಮ್ಮ ಕೈಗಾರಿಕಾ ಘಟಕಗಳನ್ನು ಪಾರದರ್ಶಕತೆ ಆಧಾರದ ಮೇಲೆ ಕೃಷಿ ಭೂಮಿಯನ್ನು ಖರೀದಿಸಿ ಕೈಗಾರಿಕೆ ಸ್ಥಾಪಿಸಬಹುದಾಗಿದೆ. ಆದರೆ ಈ ರೀತಿಯ ಸ್ಥಾಪನೆ ಪೂರ್ವದಲ್ಲಿ ಕಾನೂನು ಮತ್ತು ಪರಿಸರ ಮಾರ್ಗಸೂಚಿಗಳನ್ನು ಪರಿಹಾರ ಮತ್ತು ಪುನರ್ವಸತಿ ಯೋಜನೆಗಳ ನಿಬಂಧನೆಗಳನ್ನು ಪಾಲಿಸಬೇಕಾಗುತ್ತದೆ. ಹೂಡಿಕೆದಾರರು ಭೂಮಾಲಿಕರನ್ನು ಯೋಜನೆಯ ಪಾಲುದಾರರನ್ನಾಗಿ ಪರಿಗಣಿಸಿ ಶೇರು ಬಂಡವಾಳ ಹೂಡಿಕೆಗೆ / ಆದಾಯದಲ್ಲಿ ಪಾಲು / ವ್ಯಾಪಾರದಲ್ಲಿ ಸಹಭಾಗಿತ್ವ ಹೊಂದಲು ಅವಕಾಶ ಕಲ್ಪಿಸಬಹುದು. ಕೃಷಿ ವಲಯ ಯತೇಚ್ಛವಾಗಿ ಅವಕಾಶಗಳನ್ನು ಕೊಡುವುದರಿಂದ ಬೇರಾವುದೇ ವಿನೂತನ ವ್ಯವಹಾರಿಕ ಮಾದರಿಗಳನ್ನು ರೂಪಿಸಿ ಪಾಲುದಾರಿಕೆ ಹೊಂದಬಹುದು.

20.5 ಕೃಷಿ ಆಧಾರಿತ ಕೈಗಾರಿಕೆಗಳು ಮತ್ತು ಕೃಷಿ ಸಂಬಂಧಿತ ಮೂಲಭೂತ ಸೌಕರ್ಯಗಳನ್ನು ನಿರ್ಮಿಸಲು, ಖಾಸಗಿ ಕೃಷಿ ಭೂಮಿಯನ್ನು ಕೃಷಿ ವಾಣಿಜ್ಯ ಚಟುವಟಿಕೆಗಳಿಗಾಗಿ ದೀರ್ಘಾವಧಿಗೆ ಭೋಗ್ಯಕ್ಕೆ ಪಡೆದುಕೊಳ್ಳಬಹುದು.

20.6 ಸರ್ಕಾರಿ ಸ್ವಾಮ್ಯದ ಕೃಷಿ ಭೂಮಿಯನ್ನೂ ರಿಯಾಯಿತಿ ದರದಲ್ಲಿ ನಿಗಧಿಪಡಿಸಿ ದೀರ್ಘಾವಧಿ ಭೋಗ್ಯಕ್ಕೆ ಕೃಷಿ ಆಧಾರಿತ ಕೈಗಾರಿಕೆ ಮತ್ತು ಕೃಷಿ ಮೂಲಭೂತ ಸೌಕರ್ಯಗಳನ್ನು ನಿರ್ಮಿಸುವ ಉದ್ದೇಶಗಳಿಗೂ ಕೊಡಲಾಗುವುದು.

## 21 ಕೃಷಿ ಆಧಾರಿತ ಕೈಗಾರಿಕೆಗಳಿಗೆ ಮತ್ತು ಕೃಷಿ ಸಂಬಂಧಿತ ಮೂಲಭೂತ ಸೌಕರ್ಯಗಳಿಗೆ ಬಂಡವಾಳ ಹೂಡಿಕೆ

21.1 ಕರ್ನಾಟಕ ಕೈಗಾರಿಕಾ ನೀತಿ (2009–2014) ಯು ರಾಜ್ಯದ ತಾಲ್ಲೂಕುಗಳನ್ನು, ಅವುಗಳಲ್ಲಿನ ಹಿಂದುಳಿವಿಕೆ ಆಧಾರದ ಮೇಲೆ ಹಾಗೂ ಡಾ॥ ಡಿ ಎಮ್ ನಂಜುಂಡಪ್ಪ ಸಮಿತಿಯ ವರದಿಯ ವಿಶಾಲವಾದ ಮಾರ್ಗಸೂಚಿಗಳನ್ನು ಆಧರಿಸಿ ನಾಲ್ಕು ವಿಭಾಗಗಳಾಗಿ ವಿಂಗಡಿಸಲಾಗಿದೆ. ಆದಾಗ್ಯೂ ಕೃಷಿ ಹಾಗೂ ಕೃಷಿ ಸಂಬಂಧಿತ ವಲಯಗಳನ್ನು ತ್ವರಿತಗತಿಯಲ್ಲಿ ಅಭಿವೃದ್ಧಿಪಡಿಸಲು, ಈ ನೀತಿಯು ರಾಜ್ಯದೆಲ್ಲೆಡೆ ಕೆಳಗೆ ನಮೂದಿಸಿರುವಂತಹ ಉತ್ತೇಜನವನ್ನು ಮುಂದಿನ ಸೂಚನೆವರೆಗೆ ನೀಡುತ್ತಿದೆ.

21.1.1 ಅತಿಸಣ್ಣ, ಸಣ್ಣ ಮತ್ತು ಮಧ್ಯಮ ದರ್ಜೆಯ ಹಾಗೂ ಕೃಷಿ ಆಧಾರಿತ ಬೃಹತ್ ಕೈಗಾರಿಕೆಗಳಿಗೆ ಮತ್ತು ಕೃಷಿ ಮೂಲಭೂತ ಸೌಕರ್ಯಗಳಿಗೆ ಸ್ಟ್ಯಾಂಪ್ ಶುಲ್ಕ ವಿನಾಯಿತಿ.

ಸ್ಟ್ಯಾಂಪ್ ಶುಲ್ಕವನ್ನು ಪಾವತಿಸಬೇಕಾಗಿರುವುದು:–

ಅ) ಸಾಲ ಒಡಂಬಡಿಕೆಗಳ ಮೇಲೆ, ಸಾಲಪತ್ರಗಳ ಮೇಲೆ, ರಾಜ್ಯ ಸರ್ಕಾರ ಅಥವಾ ರಾಜ್ಯ ಹಣಕಾಸು ಸಂಸ್ಥೆಗಳಿಂದ, ಇಂಡಸ್ಟ್ರಿಯಲ್ ಡೆವೆಲಪ್ಮೆಂಟ್ ಕಾರ್ಪೊರೇಷನ್‌ನಿಂದ, ರಾಷ್ಟ್ರ ಮಟ್ಟದ ಆರ್ಥಿಕ ಸಂಸ್ಥೆಗಳಿಂದ, ವಾಣಿಜ್ಯ ಬ್ಯಾಂಕ್‌ಗಳಿಂದ, ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳಿಂದ, ಸಹಕಾರಿ ಬ್ಯಾಂಕ್‌ಗಳಿಂದ ಕರ್ನಾಟಕ ಖಾದಿ ಮತ್ತು ಗ್ರಾಮೀಣ ಸಂಸ್ಥೆ (ಕೆವಿಐಬಿ) / ಖಾದಿ ಎಂಡ್ ವಿಲೇಜ್ ಇಂಡಸ್ಟ್ರೀಸ್ ಕಮಿಷನ್, (ಕೆವಿಐಸಿ), ಕರ್ನಾಟಕ ರಾಜ್ಯ ಎಸ್.ಸಿ/ ಎಸ್.ಟಿ ಡೆವೆಲಪ್ಮೆಂಟ್ ಕಾರ್ಪೊರೇಷನ್, ಕರ್ನಾಟಕ ಸ್ಟೇಟ್ ಮೈನಾರಿಟಿ ಡೆವೆಲಪ್ಮೆಂಟ್ ಕಾರ್ಪೊರೇಷನ್ ಮತ್ತು ಕಾಲಾನುಕಾಲಕ್ಕೆ ಮೊದಲ ಐದು ವರ್ಷಗಳಿಗೆ ಮಾತ್ರ ಸರ್ಕಾರದಿಂದ ಗುರುತಿಸಿಕೊಂಡು ಮಾನ್ಯತೆ ಹೊಂದಿರುವ ಇತರ ಸಂಸ್ಥೆಗಳಿಂದ ಅಡಮಾನ ಪ್ರಕ್ರಿಯೆಯಿಂದ ದೀರ್ಗಾವಧಿ ಸಾಲ ಪಡೆದುಕೊಂಡಲ್ಲಿ, ಮತ್ತು,

ಆ) ಕೈಗಾರಿಕಾ ಸಂಸ್ಥೆಗಳು ಕೈಗಾರಿಕೆಗೆ ಗುರುತಿಸುವ ಜಾಗಗಳು, ಶೆಡ್ಡುಗಳು, KIADB, KSIIDC, KSSIDCಯಿಂದ ಕೈಗಾರಿಕೆಗಾಗಿ ಬಾಡಿಗೆಗೆ ಪಡೆದುಕೊಳ್ಳುವ, ಕೈಗಾರಿಕಾ ಎಸ್ಟೇಟುಗಳಿಗಾಗಿ ಮಾಡಿಕೊಳ್ಳುವ ಭೋಗ್ಯ ಪತ್ರಗಳು, ಭೋಗ್ಯ–ಕ್ರಯಪತ್ರಗಳು (ಲೀಸ್ ಕಮ್ ಸೇಲ್), ಮತ್ತು ಕ್ರಯ ಪತ್ರಗಳ ಮೇಲೆ ಶೇಕಡ ಐವತ್ತರಷ್ಟು ರಿಯಾಯಿತಿ ನೀಡಲಾಗುವುದು.

21.1.2 ಅತಿಸಣ್ಣ, ಸಣ್ಣ ಮತ್ತು ಮಧ್ಯಮ ದರ್ಜೆಯ, ಕೃಷಿ ಆಧಾರಿತ ಬೃಹತ್ ಕೈಗಾರಿಕೆಗಳಿಗೆ ಮತ್ತು ಕೃಷಿ ಮೂಲಭೂತ ಸೌಕರ್ಯಗಳ ಸಂಸ್ಥೆಗಳಿಗೆ ನೋಂದಣಿ ಶುಲ್ಕದಲ್ಲಿ ರಿಯಾಯಿತಿ :–

– ಮೇಲ್ಕಾಣಿಸಿರುವ (ಅ) ರಲ್ಲಿ ನಮೂದಿಸಿರುವುಂತೆ, ಎಲ್ಲಾ ಸಾಲ ಪತ್ರಗಳ ಮೇಲೆ ಮತ್ತು ಕ್ರಯಪತ್ರಗಳ ಮೇಲೆ ನೋಂದಣಿ ಶುಲ್ಕವನ್ನು ರಿಯಾಯಿತಿ ದರದಲ್ಲಿ ಅಂದರೆ ಸಾವಿರ ರೂಪಾಯಿಗೆ ಒಂದು ರೂಪಾಯಿಯಂತೆ ನಿಗದಿಪಡಿಸಲಾಗುವುದು.

– ಸ್ಟ್ಯಾಂಪ್ ಶುಲ್ಕ ವಿನಾಯಿತಿ ಮತ್ತು ನೋಂದಣಿ ಶುಲ್ಕದಲ್ಲಿನ ರಿಯಾಯಿತಿಯನ್ನು ಕರ್ನಾಟಕ ಭೂ ಸುಧಾರಣೆ ಕಾಯ್ದೆಯ ಕಲಂ 109ರಡಿಯಲ್ಲಿ ಮತ್ತು ಕೈಗಾರಿಕೆಗೆ ಪರಿವರ್ತಿಸಿರುವ ಭೂಮಿಯನ್ನು SHLCC/ SLSWCC/ DLSWCCWಗಳು ಅಂಗೀಕರಿಸಿರುವ ಉದ್ದಿಮೆ ಸ್ಥಾಪಿಸುವುದಕ್ಕಾಗಿ ನೇರವಾಗಿ ಕೊಂಡಲ್ಲಿ ಅದಕ್ಕೂ ಅನ್ವಯಿಸುತ್ತದೆ. KIADBಯು ಭೂಮಾಲೀಕರಿಂದ ಸ್ವಾಧೀನಪಡಿಸಿಕೊಂಡ ಭೂಮಿಗೆ ಪರಿಹಾರವಾಗಿ ನೀಡುವ ಜಮೀನನ್ನು ನೋಂದಣಿ ಮಾಡಿಸುವುದಕ್ಕೂ ಈ ಪ್ರೋತ್ಸಾಹವು ಅನ್ವಯಿಸುತ್ತದೆ.

– ಸ್ಟ್ಯಾಂಪ್ ಶುಲ್ಕ ವಿನಾಯಿತಿ ಮತ್ತು ನೋಂದಣಿ ಶುಲ್ಕದಲ್ಲಿನ ರಿಯಾಯಿತಿಯು ಕೈಗಾರಿಕಾ ಸಂಸ್ಥೆಗಳು ಕೈಗಾರಿಕೆಗೆಂದು ಗುರುತಿಸುವ ಜಾಗಗಳು, ಶೆಡ್‌ಗಳು, ನಿವೇಶನಗಳು, ಕೈಗಾರಿಕೆ ಬಾಡಿಗೆ ಪ್ರದೇಶಗಳಲ್ಲಿನ ಲೀಸ್ ಅವಧಿ ಮುಗಿದ ನಂತರ

ಕ್ರಯ ಪತ್ರವನ್ನು ಮಾಡಿಕೊಂಡಾಗಲೂ ಸಹ ಅನ್ವಯಿಸುತ್ತದೆ. ಆದರೆ ಈ ರೀತಿ ಮಾಡಲಾದಂತಹ ನೋಂದಣಿಗೆ ಲೀಸ್ ಕಂ ಸೇಲ್ ಡೀಡನ್ನು ಮಾಡಿಕೊಂಡಂತಹ ಸಂದರ್ಭದಲ್ಲಿ ಅಸ್ತಿತ್ವದಲ್ಲಿದ್ದ ಕೈಗಾರಿಕಾ ನೀತಿಯಲ್ಲಿ ನಿಗದಿಪಡಿಸಿಲಾದ ದರ ಅನ್ವಯಿಸುತ್ತದೆ.

21.1.3 ಅತಿಸಣ್ಣ, ಸಣ್ಣ ಮತ್ತು ಮಧ್ಯಮ ದರ್ಜೆಯ, ಕೃಷಿ ಆಧಾರಿತ ಬೃಹತ್ ಕೈಗಾರಿಕೆಗಳಿಗೆ ಮತ್ತು ಕೃಷಿ ಮೂಲಭೂತ ಸೌಕರ್ಯಗಳ ಸಂಸ್ಥೆಗಳಿಗೆ ಪ್ರವೇಶ ಶುಲ್ಕ ವಿನಾಯಿತಿ

– 'ಕಾರ್ಖಾನೆ ಮತ್ತು ಯಂತ್ರ ಮತ್ತು ಬಂಡವಾಳ ವಸ್ತುಗಳ' ಮೇಲೆ ಉದ್ದೇಶಿತ ಉದ್ದಿಮೆಯ ಸ್ಥಾಪನೆಯಾದ ದಿನದಿಂದ ಮೂರು ವರ್ಷದ ತನಕ ಪ್ರವೇಶ ಶುಲ್ಕದಲ್ಲಿ ಶೇಕಡ ನೂರರಷ್ಟು ವಿನಾಯಿತಿ. ಈ ಉದ್ದೇಶಕ್ಕಾಗಿಯೇ 'ಕಾರ್ಖಾನೆ ಮತ್ತು ಯಂತ್ರ ಮತ್ತು ಬಂಡವಾಳ ವಸ್ತುಗಳು' ಎಂದು ಸಂಭೋದಿಸಿದಾಗ ಕಾರ್ಖಾನೆ ಮತ್ತು ಯಂತ್ರೋಪಕರಣಗಳು ಇತ್ಯಾದಿ, ವಿದ್ಯುತ್ ಉತ್ಪಾದನೆಗೆ ಬಳಸುವ ಯಂತ್ರಗಳು, ಸಂಸ್ಕರಣೆ ಸೇರುತ್ತವೆ. ಕಚ್ಚಾ ವಸ್ತುಗಳು, ಪರಿಕರಗಳು ಇತರೆ ಅಗತ್ಯ ವಸ್ತುಗಳ ಬಳಕೆ ವಸ್ತುಗಳ (ಪೆಟ್ರೋಲಿಯಂ ಉತ್ಪನ್ನಗಳನ್ನು ಹೊರತುಪಡಿಸಿ) ಮೇಲೆ ವಾಣಿಜ್ಯ ರೀತ್ಯಾ ಉತ್ಪಾದನೆ ಆರಂಭಿಸಿದ ದಿನದಿಂದ ಮೂರು ವರ್ಷಗಳವರೆಗೆ ಶೇಕಡ ನೂರರಷ್ಟು ಪ್ರವೇಶ ಶುಲ್ಕದಿಂದ ವಿನಾಯಿತಿ ನೀಡಲಾಗುತ್ತದೆ.

21.1.4 ರಫ್ತಿನಲ್ಲಿಯೇ ತೊಡಗಿರುವ ಕೃಷಿ ಆಧಾರಿತ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ದರ್ಜೆಯ ಮತ್ತು ಬೃಹತ್ ಕೈಗಾರಿಕೆಗಳಿಗೆ ಉತ್ತೇಜನ :–

– ಶೇಕಡ ನೂರರಷ್ಟು ರಫ್ತುದಾರಿಕೆಯಲ್ಲೇ ತೊಡಗಿರುವ ಸಂಸ್ಥೆಗಳ ಕಾರ್ಖಾನೆ ಮತ್ತು ಯಂತ್ರ ಮತ್ತು ಬಂಡವಾಳ ವಸ್ತುಗಳ ಮೇಲೆ ಆರಂಭದಿಂದ ಐದು ವರ್ಷಗಳ ತನಕ ಶೇಕಡ ನೂರರಷ್ಟು ಪ್ರವೇಶ ಶುಲ್ಕದಲ್ಲಿ ವಿನಾಯಿತಿ ಕೊಡಲಾಗುವುದು. ಈ ಉದ್ದೇಶಕ್ಕಾಗಿಯೇ 'ಕಾರ್ಖಾನೆ ಮತ್ತು ಯಂತ್ರ ಮತ್ತು ಬಂಡವಾಳ ವಸ್ತುಗಳು' ಎಂದು ಸಂಭೋದಿಸಿದಾಗ ಕೈಗಾರಿಕೆ ಮತ್ತದರಲ್ಲಿನ ಯಂತ್ರೋಪಕರಣಗಳು ಮತ್ತು ಇತ್ಯಾದಿ, ಅಲ್ಲದೆ ವಿದ್ಯುತ್ ಉತ್ಪಾದನೆಗೆ ಬಳಸುವ ಯಂತ್ರಗಳು, ಸಂಸ್ಕರಣೆ ಇವುಗಳನ್ನೊಳಗೊಳ್ಳುತ್ತದೆ. ಕಚ್ಚಾ ವಸ್ತುಗಳು, ಬಿಡಿ ಭಾಗಗಳು ಇತರೆ ಅಗತ್ಯ ವಸ್ತುಗಳ, ಬಳಕೆ ವಸ್ತುಗಳ (ಪೆಟ್ರೋಲಿಯಂ ಉತ್ಪನ್ನಗಳನ್ನು ಹೊರತುಪಡಿಸಿ) ಮೇಲೆ ಶೇಕಡ ನೂರರಷ್ಟು ಪ್ರವೇಶ ಶುಲ್ಕವನ್ನು ವಾಣಿಜ್ಯ ರೀತ್ಯಾ ಉತ್ಪಾದನೆ ಆರಂಭಿಸಿದ ದಿನದಿಂದ ಐದು ವರ್ಷಗಳವರೆಗೆ ವಿನಾಯಿತಿ ನೀಡಲಾಗುವುದು.

21.1.5 ಅತಿಸಣ್ಣ, ಸಣ್ಣ ಮತ್ತು ಮಧ್ಯಮ ದರ್ಜೆಯ, ದೊಡ್ಡ ಮತ್ತು ಬೃಹತ್ ಕೃಷಿ ಆಧಾರಿತ ಕೈಗಾರಿಕೆಗಳಿಗೆ ಮತ್ತು ಕೃಷಿ ಮೂಲಗಳ ಸಂಸ್ಥೆಗಳಿಗೆ APMC ಶುಲ್ಕ ವಿನಾಯಿತಿ

– APMC ಶುಲ್ಕಕ್ಕೆ ಸಂಬಂಧಿಸಿದಂತೆ ಕೃಷಿ ಉತ್ಪನ್ನಗಳು ಷೆಡ್ಯೂಲ್‌ನಲ್ಲಿ ನಿಗದಿಪಡಿಸಿದಂತೆ (1980ರ ಕಾಯ್ದೆ ಸಂಖ್ಯೆ 17, ದಿ 30–6–1979 ರಿಂದ ಅನ್ವಯವಾಗುವಂತೆ) ಕ್ರ.ಸಂಖ್ಯೆ ii, iii, iv, vi, vii, ix, x ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ನಿಯಂತ್ರಣ ಮತ್ತು ಅಭಿವೃದ್ಧಿ ಕಾಯ್ದೆ 1966ರ ಪ್ರಕಾರ ಸಂಸ್ಕರಣೆಗಾಗಿ ರೈತರಿಂದ ನೇರವಾಗಿ ಕೃಷಿ ಉತ್ಪನ್ನಗಳನ್ನು ಖರೀದಿಸಿದ ಹೊಸ ಮತ್ತು ಹಾಲಿ ಕಾರ್ಯ ನಿರ್ವಹಿಸುತ್ತಿರುವ ಕೈಗಾರಿಕೆಗಳ ಮೇಲೆ ಮಾರುಕಟ್ಟೆ ಶುಲ್ಕವನ್ನು ಐದು ವರ್ಷಗಳವರೆಗೆ ನಿಗಧಿತ ದರದ ಶೇಕಡ ಇಪ್ಪತ್ತೈದಕ್ಕೆ ಕಡಿತಗೊಳಿಸಲಾಗುವುದು.

21.1.6 MSME – ಅತಿಸಣ್ಣ, ಸಣ್ಣ ಮತ್ತು ಮಧ್ಯಮ ದರ್ಜೆಯ, ದೊಡ್ಡ ಮತ್ತು ಬೃಹತ್ ಕೃಷಿ ಆಧಾರಿತ ಕೈಗಾರಿಕೆಗಳಿಗೆ ಮತ್ತು ಕೃಷಿ ಮೂಲ ಸೌಕರ್ಯಗಳ ಸಂಸ್ಥೆಗಳು, ತ್ಯಾಜ್ಯ ಸಂಸ್ಕರಣಾ ಘಟಕ (ETP) ಸ್ಥಾಪಿಸಲು ಸಿಗುವ ಸಹಾಯ ಧನ

– ಒಂದು ಬಾರಿ ಶೇಕಡ ಐವತ್ತರಷ್ಟು ಸಹಾಯಧನವನ್ನು ತ್ಯಾಜ್ಯ ಸಂಸ್ಕರಣಾ ಘಟಕದ ಬಂಡವಾಳದ ವೆಚ್ಚದ ಮೇಲೆ ಗರಿಷ್ಟ ಮಿತಿ ನೂರು ಲಕ್ಷ ರೂಗಳಷ್ಟು, ಸಾಮಾನ್ಯ ಕೃಷಿ ಸೌಕರ್ಯಗಳಿಗೆಂದು ಮಾಡಿದ ತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ಗರಿಷ್ಟ ಐನೂರು ಲಕ್ಷಗಳವರೆಗೆ ನೀಡಲಾಗುವುದು.

21.1.7 ದೊಡ್ಡ ಮತ್ತು ಬೃಹತ್ ಕೃಷಿ ಆಧಾರಿತ ಕೈಗಾರಿಕೆಗಳಿಗೆ ಮೌಲ್ಯ ವರ್ಧಿತ ತೆರಿಗೆಯ ಮೇಲೆ ಬಡ್ಡಿ ರಹಿತ ಸಾಲ

– ಎಲ್ಲಾ ಹೊಸ ಮತ್ತು ಬೃಹತ್ ಕೃಷಿ ಆಧಾರಿತ ಕೈಗಾರಿಕೆಗಳಿಗೆ ಮೌಲ್ಯ ವರ್ಧಿತ ತೆರಿಗೆ ಮೇಲೆ ಬಡ್ಡಿ ರಹಿತ ಸಾಲವನ್ನು ಕೆಳಕಂಡಂತೆ ನೀಡಲಾಗುವುದು.

– ಹೂಡಿಕೆ ವ್ಯಾಪ್ತಿ ಮತ್ತು ಅದಕ್ಕೆ ಸಮರ್ಪಕವಾದ ನೇರ ಉದ್ಯೋಗಾವಕಾಶಗಳ ಮಧ್ಯೆ ಘರ್ಷಣೆಯುಂಟಾದಲ್ಲಿ; ಹೂಡಿಕೆಯ ಅಥವಾ ಕನಿಷ್ಠ ನೇರ ಉದ್ಯೋಗಾವಕಾಶ ಆಧಾರದ ಮೇಲೆ ಕನಿಷ್ಠ ಲಾಭಾಂಶವೇ ಅನ್ವಯಿಸುವ ಹಂತವಾಗಿರುತ್ತದೆ.

| ಸ್ಥಿರ ಸ್ವತ್ತು ಮತ್ತು ಯಂತ್ರೋಪಕರಣಗಳ ಮೇಲೆ ಬಂಡವಾಳ ಹೂಡಿಕೆಯ ಶ್ರೇಣ (ರೂಪಾಯಿ ಕೋಟಿಗಳಲ್ಲಿ) | ಕನಿಷ್ಠ ನೇರ ಉದ್ಯೋಗಾವಕಾಶ (ಸಂಖ್ಯೆಗಳಲ್ಲಿ) | ಬಡ್ಡಿ ರಹಿತ ಸಾಲದ ಮೊತ್ತ |
|---|---|---|
| 10 – 50 | ಕನಿಷ್ಠ ನೂರು ಉದ್ಯೋಗಗಳು ಹಾಗೂ ಹೆಚ್ಚುವರಿಯಾಗಿ ತೊಡಗಿಸಿದ ಪ್ರತಿ ಹತ್ತು ಕೋಟಿ ರೂ. ಬಂಡವಾಳಕ್ಕೆ ಹೆಚ್ಚುವರಿಯಾಗಿ ಇಪ್ಪತ್ತು ಉದ್ಯೋಗಗಳು | ಐದು ವರ್ಷಗಳಿಗೆ ಲೆಕ್ಕ ಹಾಕಲಾದ ಒಟ್ಟು ವ್ಯಾಟ್ ತೆರಿಗೆಯ ಮೊತ್ತದ ಶೇಕಡ ಐವತ್ತರಷ್ಟು. ಆದರೆ ಸ್ಥಿರ ಸ್ವತ್ತುಗಳ ಮೇಲಿನ ಬಂಡವಾಳದ ಶೇಕಡ ನೂರರಷ್ಟು ಮಿತಿಗೆ ಒಳಪಟ್ಟು. ಈ ಸಾಲವನ್ನು ಐದು ವರ್ಷಗಳ ನಂತರ ಮೂರು ವಾರ್ಷಿಕ ಕಂತುಗಳಲ್ಲಿ ಮರುಪಾವತಿ ಮಾಡಬೇಕು |
| 51–250 | ಕನಿಷ್ಠ ಇನ್ನೂರು ಉದ್ಯೋಗಗಳು ಹಾಗೂ ಹೆಚ್ಚುವರಿಯಾಗಿ ತೊಡಗಿಸಿದ ಪ್ರತಿ ಐವತ್ತು ಕೋಟಿ ರೂ. ಬಂಡವಾಳಕ್ಕೆ ಹೆಚ್ಚುವರಿಯಾಗಿ ಇಪ್ಪತ್ತು ಉದ್ಯೋಗಗಳು | ಆರು ವರ್ಷಗಳಿಗೆ ಲೆಕ್ಕ ಹಾಕಲಾದ ಒಟ್ಟು ವ್ಯಾಟ್ ತೆರಿಗೆಯ ಮೊತ್ತದ ಶೇಕಡ ಐವತ್ತರಷ್ಟು. ಆದರೆ ಸ್ಥಿರ ಸ್ವತ್ತುಗಳ ಮೇಲಿನ ಬಂಡವಾಳದ ಶೇಕಡ ಎಪ್ಪತ್ತೈದರಷ್ಟು ಮಿತಿಗೆ ಒಳಪಟ್ಟು. ಈ ಸಾಲವನ್ನು ಆರು ವರ್ಷಗಳ ನಂತರ ಮೂರು ವಾರ್ಷಿಕ ಕಂತುಗಳಲ್ಲಿ ಮರುಪಾವತಿ ಮಾಡಬೇಕು |
| 251–1000 | ಕನಿಷ್ಠ ನಾಲ್ಕುನೂರು ಉದ್ಯೋಗಗಳು ರೂ. ಮೂರು ನೂರು ಕೋಟಿ ಬಂಡವಾಳದ ವರೆಗೆ. ಹೆಚ್ಚುವರಿಯಾಗಿ ತೊಡಗಿಸಿದ ಪ್ರತಿ ನೂರು ಕೋಟಿ ರೂ. ಬಂಡವಾಳಕ್ಕೆ ಹೆಚ್ಚುವರಿಯಾಗಿ ಐವತ್ತು ಉದ್ಯೋಗಗಳು | ಏಳು ವರ್ಷಗಳಿಗೆ ಲೆಕ್ಕ ಹಾಕಲಾದ ಒಟ್ಟು ವ್ಯಾಟ್ ತೆರಿಗೆಯ ಮೊತ್ತದ ಶೇಕಡ ಇಪ್ಪತ್ತೈದರಷ್ಟು. ಆದರೆ ಸ್ಥಿರ ಸ್ವತ್ತುಗಳ ಮೇಲಿನ ಬಂಡವಾಳದ ಶೇಕಡ ಐವತ್ತರಷ್ಟು ಮಿತಿಗೆ ಒಳಪಟ್ಟು. ಈ ಸಾಲವನ್ನು ಏಳು ವರ್ಷಗಳ ನಂತರ ನಾಲ್ಕು ವಾರ್ಷಿಕ ಕಂತುಗಳಲ್ಲಿ ಮರುಪಾವತಿ ಮಾಡಬೇಕು |
| 1001–3000 | ಕನಿಷ್ಠ ಏಳು ನೂರಾ ಐವತ್ತು ಉದ್ಯೋಗಗಳು ರೂ. ಒಂದು ಸಾವಿರದ ಒಂದು ಕೋಟಿ ಬಂಡವಾಳದವರೆಗೆ. ಹೆಚ್ಚುವರಿಯಾಗಿ ತೊಡಗಿಸಿದ ಪ್ರತಿ ನೂರು ಕೋಟಿ ರೂ. ಬಂಡವಾಳಕ್ಕೆ ಹೆಚ್ಚುವರಿಯಾಗಿ ಇಪ್ಪತ್ತೈದು ಉದ್ಯೋಗಗಳು | ಹತ್ತು ವರ್ಷಗಳಿಗೆ ಲೆಕ್ಕ ಹಾಕಲಾದ ಒಟ್ಟು ವ್ಯಾಟ್ ತೆರಿಗೆಯ ಮೊತ್ತದ ಶೇಕಡ ಇಪ್ಪತ್ತೈದರಷ್ಟು. ಆದರೆ ಸ್ಥಿರ ಸ್ವತ್ತುಗಳ ಮೇಲಿನ ಬಂಡವಾಳದ ಶೇಕಡ ಐವತ್ತರ ಮಿತಿಗೆ ಒಳಪಟ್ಟು. ಈ ಸಾಲವನ್ನು ಹತ್ತು ವರ್ಷಗಳ ನಂತರ ನಾಲ್ಕು ವಾರ್ಷಿಕ ಕಂತುಗಳಲ್ಲಿ ಮರುಪಾವತಿ ಮಾಡಬೇಕು |
| 3000 ಕ್ಕೂ ಮೇಲ್ಪಟ್ಟು | ಒಂದು ಸಾವಿರದ ಇನ್ನೂರ ಐವತ್ತು ಉದ್ಯೋಗಗಳು | ಹದಿನೈದು ವರ್ಷಗಳಿಗೆ ಲೆಕ್ಕ ಹಾಕಲಾದ ಗ್ರಾಸ್ ವ್ಯಾಟ್ ತೆರಿಗೆಯ ಮೊತ್ತದ ಶೇಕಡ ಇಪ್ಪತ್ತೈದರಷ್ಟು. ಆದರೆ ಸ್ಥಿರ ಸ್ವತ್ತುಗಳ ಮೇಲಿನ ಬಂಡವಾಳದ ಶೇಕಡ ಐವತ್ತರಷ್ಟು ಮಿತಿಗೆ ಒಳಪಟ್ಟು. ಈ ಸಾಲವನ್ನು ಹನ್ನೆರಡು ವರ್ಷಗಳ ನಂತರ ಐದು ವಾರ್ಷಿಕ ಕಂತುಗಳಲ್ಲಿ ಮರುಪಾವತಿ ಮಾಡಬೇಕು |

21.1.8 ಕೃಷಿ ಆಧಾರಿತ ಕೈಗಾರಿಕೆಗಳಿಗೆ ಮತ್ತು ಕೃಷಿ ಸಂಬಂಧ ಮೂಲಸೌಕರ್ಯಕ್ಕೆ ವಿದ್ಯುತ್ ತೆರಿಗೆಯಿಂದ ವಿನಾಯಿತಿ

– ಕೃಷಿ ಆಧಾರಿತ ಕೈಗಾರಿಕೆಗಳು ಮತ್ತು ಕೃಷಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಘಟಕಗಳಿಗೆ 5 ವರ್ಷಗಳು / 4 ವರ್ಷಗಳು / 3 ವರ್ಷಗಳ ಕಾಲ ಶೇಕಡ ನೂರರಷ್ಟು ವಿದ್ಯುತ್ ಸುಂಕ / ಅನುಕ್ರಮವಾಗಿ ವಲಯ 1 / ವಲಯ 2 ಮತ್ತು ವಲಯ 3 ರಲ್ಲಿ ತೆರಿಗೆಯಲ್ಲಿ ವಿನಾಯಿತಿ ನೀಡಲಾಗುವುದು.

21.1.9 ಆಯ್ದ ವಲಯಗಳಲ್ಲಿ ವಿಶೇಷ ಪ್ರೋತ್ಸಾಹಗಳು

21.1.9.1 ಕೃಷಿ ಆಧಾರಿತ ಕೈಗಾರಿಕೆ – ಆಂಕರ್ ಘಟಕ ಸಹಾಯಧನ

- ಕೃಷಿ ಆಧಾರಿತ ಕೈಗಾರಿಕೆ ವಲಯ 1, 2 ಮತ್ತು 3ರ ಪ್ರತಿ ತಾಲೂಕಿನಲ್ಲಿ ಕನಿಷ್ಠ ನೂರು ಜನರಿಗೆ ಉದ್ಯೋಗ ನೀಡುವ ಕನಿಷ್ಠ ಐವತ್ತು ಕೋಟಿ ರೂಪಾಯಿಗಳ ಬಂಡವಾಳ ಹೂಡಿರುವ ಮೊದಲ ಎರಡು ಕೃಷಿ ಆಧಾರಿತ ಕೈಗಾರಿಕೆ ಆಂಕರ್ ಘಟಕಗಳಿಗೆ ಸಹಾಯಧನ ನೀಡಲಾಗುವುದು. ಈ ಸಹಾಯಧನವು ಐವತ್ತು ಕೋಟಿ ರೂಪಾಯಿಗಳ ಬಂಡವಾಳ ಹೂಡಿಕೆಯುಳ್ಳ ಕೈಗಾರಿಕಾ ಉದ್ಯಮಗಳು ಪ್ರಸಕ್ತ ಇಲ್ಲದಿರುವ ತಾಲೂಕುಗಳಿಗೆ ಮಾತ್ರ ಅನ್ವಯವಾಗುತ್ತದೆ.

21.1.9.2 ಕೃಷಿ ಆಧಾರಿತ ಬೃಹತ್ ಮತ್ತು ಮೆಗಾ ಯೋಜನೆಗಳಿಗೆ ಮಾತ್ರ ಕಡಿಮೆ ಎಚ್.ಡಿ.ಪಿ ಜಿಲ್ಲೆಗಳಲ್ಲಿ ಪ್ರೋತ್ಸಾಹ

- ಮಾನವ ಅಭಿವೃದ್ಧಿ ಸೂಚ್ಯಂಕ ಕೆಳಮಟ್ಟದಲ್ಲಿರುವ ಆರು ಜಿಲ್ಲೆಗಳಲ್ಲಿ (ಬಾಗಲಕೋಟೆ, ಬಿಜಾಪುರ, ಕೊಪ್ಪಳ, ಚಾಮರಾಜನಗರ, ಗುಲ್ಬರ್ಗ ಮತ್ತು ರಾಯಚೂರು) ಪ್ರಸ್ತಾಪಿತ ಬೃಹತ್ ಮತ್ತು ಮೆಗಾಯೋಜನೆಗಳಿಗೆ ಮತ್ತು ಡಾ|| ಸರೋಜಿನಿ ಮಹಿಷಿ ಶಿಫಾರಸಿನನ್ವಯ ಕನಿಷ್ಠ ಶೇಕಡ ಎಪ್ಪತ್ತೈದರಷ್ಟು ಸ್ಥಳೀಯರಿಗೆ ಉದ್ಯೋಗ ನೀಡುವ ಉದ್ಯಮಕ್ಕೆ ವಿಶೇಷ ಉತ್ತೇಜನ ನೀಡಲಾಗುವುದು. ಇದರನ್ವಯ ಉದ್ಯೋಗಿಗಳ ಭವಿಷ್ಯನಿಧಿ ಮತ್ತು ಕಾರ್ಮಿಕ ವಿಮಾ ಯೋಜನೆ ಪ್ರಕಾರ ಉದ್ಯೋಗದಾರರು ಮೊದಲ ಐದು ವರ್ಷಗಳಲ್ಲಿ ನೀಡಬೇಕಾಗಿರುವ ವಂತಿಗೆ ಹಣದ ಶೇಕಡ ಎಪ್ಪತ್ತೈದರಷ್ಟನ್ನು ಮರುಪಾವತಿ ಮಾಡಲಾಗುವುದು.

- ಈ ಸೌಲಭ್ಯವು ಪ್ರಾರಂಭದ ಐದು ವರ್ಷಗಳವರೆಗೆ ಸ್ಥಿರ ಸ್ವತ್ತುಗಳಲ್ಲಿ ಹೂಡಿದ ಬಂಡವಾಳದ ಶೇಕಡ ಇಪ್ಪತ್ತೈದಕ್ಕೆ ಸೀಮಿತವಾಗಿರುವುದು. ವಾರ್ಷಿಕವಾಗಿ ಮರುಪಾವತಿ ಮಾಡುವ ಮೊತ್ತವು ಕಾನೂನು ಪ್ರಕಾರ ಕನಿಷ್ಠ ವಂತಿಗೆಗೆ ಸಮನಾಗಿದ್ದು, ಉದ್ಯೋಗದಾತರು ತಮ್ಮ ಪಾಲಿನ ವಂತಿಗೆಯನ್ನು ಕ್ಲಿಪ್ತ ಕಾಲಕ್ಕೆ ESI ಮತ್ತು EPFಗೆ ಪಾವತಿ ಮಾಡಿದ ಸಂದರ್ಭದಲ್ಲಿ ಮಾತ್ರ ಲಭ್ಯವಿರುವುದು.

21.1.9.3 ಅತಿ ಸಣ್ಣ ಘಟಕಗಗಳಡಿಯಲ್ಲಿ ಬರುವ ಕೃಷಿ ಆಧಾರಿತ ಕೈಗಾರಿಕೆಗೆ ಬಡ್ಡಿ ಸಹಾಯಧನ

- ಅವಧಿ ಸಾಲದ ಶೇಕಡ ಐದರಷ್ಟು ಬಡ್ಡಿ ಸಹಾಯಧನವನ್ನು ಅತಿ ಸಣ್ಣ ಘಟಕಗಳಡಿಯಲ್ಲಿ ಬರುವ ಕೃಷಿ ಆಧಾರಿತ ಕೈಗಾರಿಕೆಗೆ ನೀಡಲಾಗುವುದು. ಹಣಕಾಸು ಸಂಸ್ಥೆಗಳಿಗೆ ನೀಡುವ ಬಡ್ಡಿ ಸಹಾಯ ಧನ ನಿಜವಾಗಿಯೂ ಪಾವತಿ ಮಾಡಿದ ಬಡ್ಡಿಯ ಮೇಲೆಯೇ ಹೊರತು ಸುಸ್ತಿಯಾದ ಅಸಲು ಅಥವಾ ಬಡ್ಡಿಯ ಮೇಲೆ ಅನ್ವಯವಾಗುವುದಿಲ್ಲ. ಬಡ್ಡಿ ಸಹಾಯಧನವು ಪರಿಣಾಮಕಾರಿ ಬಡ್ಡಿದರ, ಯಾವುದೇ ಸಂಸ್ಥೆಯಿಂದ ಬರತಕ್ಕ / ಕೇಂದ್ರ ಸರಕಾರದ ಯಾವುದೇ ಯೋಜನೆಯನ್ವಯ ಅಥವಾ ಶೇಕಡ ಐದರಷ್ಟು, ಇದರಲ್ಲಿ ಯಾವುದು ಕಡಿಮೆಯೋ ಅದು ಐದು ವರ್ಷಕ್ಕೆ ಅನ್ವಯವಾಗುತ್ತದೆ.

21.1.10 ಸಣ್ಣ ಮತ್ತು ಅತಿ ಸಣ್ಣ ಉತ್ಪಾದನಾ ಕೃಷಿ ಆಧಾರಿತ ಉದ್ಯಮಗಳ ತಂತ್ರಜ್ಞಾನವನ್ನು ಮೇಲ್ದರ್ಜೆಗೇರಿಸಲು, ಗುಣ ಮಟ್ಟ ಪ್ರಮಾಣ ಪತ್ರ ಹಾಗೂ ಪೇಟೆಂಟ್ ನೋಂದಾಯಿಸಲು ಉತ್ತೇಜನ

- ತಂತ್ರಜ್ಞಾನ ಮೇಲ್ದರ್ಜೀಕರಿಸುವ ಸಾಲಕ್ಕೆ ಬಡ್ಡಿ ಸಹಾಯಧನ: ತಂತ್ರಜ್ಞಾನವನ್ನು ಮೇಲ್ದರ್ಜೆಗೇರಿಸಲು KSFC, KSIIDC ಮತ್ತು ಷೆಡ್ಯೂಲ್ ಬ್ಯಾಂಕುಗಳಿಂದ ಪಡೆದ, ಆದರೆ ಕೇಂದ್ರ ಸರಕಾರದ ಸಿ.ಎಲ್.ಸಿ.ಎಸ್.ಎಸ್ ಅಡಿಯಲ್ಲಿ ಒಳಗಾಗದ ಅವಧಿ ಸಾಲದ ಮೇಲೆ ಶೇಕಡ ಐದರಷ್ಟು ಸಹಾಯಧನ.

- ಬಿಐಎಸ್ ಪ್ರಮಾಣ ಪತ್ರ: ಬಿಐಎಸ್‌ಗೆ ನೀಡಲಾದ ಶುಲ್ಕದ ಶೇಕಡ ಐವತ್ತರಷ್ಟು (ಗರಿಷ್ಠ ಇಪ್ಪತ್ತು ಸಾವಿರ ರೂಪಾಯಿಗಳ) ಮತ್ತು ಬಿಐಎಸ್‌ನಿಂದ ಅನುಮೋದಿತವಾದ ಪರೀಕ್ಷಣಾ ಉಪಕರಣಗಳ ಖರೀದಿಗಾಗಿ ಮಾಡಿದ ವೆಚ್ಚದ ಶೇಕಡ ಇಪ್ಪತ್ತೈದರಷ್ಟು (ಗರಿಷ್ಠ ಐವತ್ತು ಸಾವಿರ ರೂಪಾಯಿಗಳು)

- ಅತಿ ಸಣ್ಣ ಕೃಷಿ ಘಟಕಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಐದು ಲಕ್ಷ ರೂಪಾಯಿಗಳ ಗರಿಷ್ಟ ಮಿತಿಗೊಳಪಟ್ಟು ಆರ್ಥಿಕ ಸಹಾಯ ಧನ ಶೇಕಡ ಐವತ್ತರಷ್ಟನ್ನು ಸಣ್ಣ ಮತ್ತು ಚಿಕ್ಕ ಪ್ರಮಾಣದ ಘಟಕಗಳಿಗೆ ಕೊಡಲಾಗುವುದು. ಆ ಘಟಕಗಳ ಉತ್ಪಾದನೆಯು ವಿಶ್ವಾದ್ಯಂತ ಅಂಗೀಕರಿಸುವ ಗುಣ ಮಟ್ಟವನ್ನು ಕಾಯ್ದುಕೊಳ್ಳಲು ಹೆಚ್ ಎ ಸಿ ಸಿ ಪಿ ಯಂತಹ ಸಂಸ್ಥೆಗಳಿಂದ ಪ್ರಮಾಣೀಕರಿಸಿರಬೇಕು ಅಥವಾ ಆಮದು ಮಾಡುವ ದೇಶಗಳು ಜಾಗತಿಕ ಮಟ್ಟದಲ್ಲಿ ರೂಪಿಸಿರುವ ಅಂಥದೇ ಸಂಸ್ಥೆಯಿಂದ ಪ್ರಮಾಣೀಕರಿಸಿರಬೇಕು. ಈ ಉತ್ತೇಜನವನ್ನು ರಫ್ತು ಪ್ರೋತ್ಸಾಹಕ್ಕಾಗಿ ನೀಡಲಾಗುತ್ತದೆ.

- ಪೇಟೆಂಟ್ ನೋಂದಣಿ: ಪೇಟೆಂಟ್ ಕಚೇರಿಗೆ ನೀಡಬೇಕಾದ ಶುಲ್ಕದ ಶೇಕಡ ಎಪ್ಪತ್ತೈದರಷ್ಟು (ಗರಿಷ್ಠ ಒಂದು ಲಕ್ಷದ ಇಪ್ಪತ್ತೈದು ಸಾವಿರ ರೂಪಾಯಿಗಳು) ಮತ್ತು ವಕಾಲತು ಶುಲ್ಕದ ಶೇಕಡ ಐವತ್ತರಷ್ಟು (ಗರಿಷ್ಠ ಎಪ್ಪತ್ತೈದು ಸಾವಿರ

ರೂಪಾಯಿಗಳು) ಉತ್ತೇಜನ ನೀಡಲಾಗುವುದು.

- ತಂತ್ರಜ್ಞಾನ ಅಳವಡಿಕೆ: ಅಧಿಕೃತ ರಾಷ್ಟ್ರೀಯ ಪ್ರಯೋಗಾಲಯಗಳ ತಂತ್ರಜ್ಞಾನವನ್ನು ಅಳವಡಿಸುವ ವೆಚ್ಚದ ಶೇಕಡ ಇಪ್ಪತ್ತೈದರಷ್ಟು (ಗರಿಷ್ಠ ಐವತ್ತು ಸಾವಿರ ರೂಪಾಯಿಗಳು)
- ಟೆಕ್ನಾಲಜಿ ಬಿಸಿನೆಸ್ ಇಂಕ್ಯುಬೇಷನ್ ಸೆಂಟರ್: ಯೋಜನಾ ವೆಚ್ಚದ ಶೇಕಡ ಇಪ್ಪತ್ತೈದರಷ್ಟು (ಗರಿಷ್ಠ ಐವತ್ತು ಲಕ್ಷ ರೂಪಾಯಿಗಳು)
- ಹಿಂದುಳಿದ ಮತ್ತು ವಿಶೇಷ ವಲಯಗಳಲ್ಲಿ ಮೇಲೆ ತಿಳಿಸಲಾದಂತಹ ಪ್ರೋತ್ಸಾಹವು ಈ ಕ್ಷೇತ್ರಗಳಲ್ಲಿ ಪ್ರಸ್ತುತ ಇರುವಂತಹ ಪ್ರೋತ್ಸಾಹಕ್ಕೆ ಹೆಚ್ಚುವರಿಯಾಗಿ ಇರುತ್ತದೆ. ಹಿಂದುಳಿದ ಮತ್ತು ವಿಶೇಷ ವಲಯಗಳಲ್ಲಿ ನೀಡಲಾಗುವ ಪ್ರೋತ್ಸಾಹಕ್ಕೆ ಸಂಬಂಧಿಸಿದಂತೆ ಈ ನೀತಿ ಮತ್ತು ಇನ್ನಿತರ ನೀತಿಗಳಲ್ಲಿ ಘರ್ಷಣೆ ಉಂಟಾದಲ್ಲಿ ಹೆಚ್ಚಿನ ಪ್ರೋತ್ಸಾಹ ಯಾವ ನೀತಿಯಲ್ಲಿರುವುದೋ ಅದು ಅನ್ವಯಿಸುತ್ತದೆ.

21.1.11 ಇತರೆ ಪ್ರೋತ್ಸಾಹ ಹಾಗೂ ರಿಯಾಯಿತಿಗಳು

- ಐದು ಲಕ್ಷ ರೂಪಾಯಿಯಷ್ಟು ಯೋಜನಾ ವೆಚ್ಚದ ಮಿತಿ ಇದ್ದಲ್ಲಿ ಯೋಜನಾ ವರದಿ ತಯಾರಿಸಲು ಖರ್ಚಾಗುವ ಶೇಕಡ ಐವತ್ತರಷ್ಟನ್ನು ಮರುಪಾವತಿ ಮಾಡಲಾಗುವುದು.
- ಸಂಶೋಧನೆ ಮತ್ತು ಅಭಿವೃದ್ಧಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಕೃಷಿ ಆಧಾರಿತ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವುದು. ಪ್ರತಿಷ್ಠಿತ ಸಂಶೋಧನಾ ಸಂಸ್ಥೆಗಳಲ್ಲಿ ನೆಡೆಸುವ ಪ್ರಾಯೋಜಿತ ಸಂಶೋಧನಾ ಚಟುವಟಿಕೆಗಳ ಶೇಕಡ ಐವತ್ತರಷ್ಟನ್ನು ಗರಿಷ್ಟ ಇಪ್ಪತ್ತು ಲಕ್ಷ ರೂಪಾಯಿಗಳ ಮಿತಿಗೊಳಪಟ್ಟು ಪ್ರಾಯೋಜಿಸಲಾಗುವುದು.
- ರೂಪಾಯಿ ಐದು ಕೋಟಿ ಮಿತಿ ಇದ್ದಲ್ಲಿ ಸೆಂಟರ್ ಫಾರ್ ಎಕ್ಸಲೆನ್ಸ್ /ಬೆಳೆ ಅಭಿವೃದ್ಧಿ ಸಂಸ್ಥೆಗಳಿಗೆ ಭೂಮಿಯನ್ನು ರಿಯಾಯಿತಿ ಬೆಲೆಯಲ್ಲಿ ಒದಗಿಸಲಾಗುವುದು ಮತ್ತು ಪ್ರಾರಂಭಿಕ ಸೀಡ್ ಕ್ಯಾಪಿಟಲ್ ಮ್ಯಾಚಿಂಗ್‌ಗೆ ಶೇಕಡ ಐವತ್ತರಷ್ಟು ಪ್ರೋತ್ಸಾಹವನ್ನು ಕೃಷಿ ಆಧಾರಿತ ಕೈಗಾರಿಕೆಗೆ ನೀಡಲಾಗುವುದು. ಒಂದು ವೇಳೆ ಸೆಂಟರ್ ಫಾರ್ ಎಕ್ಸ್‌ಲೆನ್ಸನ್ನು ಕಂಪನಿ ಕಾಯ್ದೆಯಡಿಯಲ್ಲಿ ಕಂಪನಿಯನ್ನು ನೋಂದಾಯಿಸಿದ್ದಲ್ಲಿ ಸರ್ಕಾರದ ಸಹಾಯಧನವನ್ನು ಶೇರು ಧನ (ಈಕ್ವಿಟಿ) ಎಂದು ಪರಿಗಣಿಸಲಾಗುವುದು.
- ಇತರೆ ವಲಯಗಳ ನಿರ್ದಿಷ್ಟ ಸಹಾಯ ಧನ / ಅನುಧಾನ / ರಿಯಾಯಿತಿ / ಸಾಲ (ಸಾಫ್ಟ್ ಲೋನ್) ಮತ್ತು ಇನ್ನಿತರ ಯೋಜನೆಗಳಿಗೆ ಅನ್ವಯವಾಗುವ ಸೌಲಭ್ಯಗಳನ್ನು ಕರ್ನಾಟಕದಲ್ಲಿ ಸ್ಥಾಪಿಸಲಾಗುವ ಕೃಷಿ ಆಧಾರಿತ ಕೈಗಾರಿಕೆಗಳು ಮತ್ತು ಕೃಷಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಘಟಕಗಳಿಗೆ ಕೊಡಲಾಗುವುದು. ಪ್ರೋತ್ಸಾಹಕ್ಕೆ ಸಂಬಂಧಿಸಿದಂತೆ ಪ್ರಸ್ತುತ ನೀತಿಯಲ್ಲಿ ಇರುವಂತಹ ಅಂಶಗಳು ಮತ್ತು ಇತರೇ ನೀತಿಯಲ್ಲಿ ಇರುವಂತಹ ಅಂಶಗಳಲ್ಲಿ ಘರ್ಷಣೆ ಉಂಟಾದಲ್ಲಿ ಹೆಚ್ಚಿನ ಪ್ರೋತ್ಸಾಹ ಯಾವ ನೀತಿಯಲ್ಲಿರುವುದೋ ಅದು ಅನ್ವಯಿಸುತ್ತದೆ.

## 22 ಜಾರಿತರುವ ದಿನಾಂಕ ಮತ್ತು ಮಾನ್ಯತೆ (ಎಫೆಕ್ಟೀವ್ ಡೇಟ್ ಎಂಡ್ ವ್ಯಾಲಿಡಿಟಿ)

22.1 ಈ ನೀತಿಯು ದಿನಾಂಕ 22-02-2011 ರಿಂದ ಮುಂದಿನ ಸೂಚನೆ ಬರುವ ತನಕ ಜಾರಿಯಲ್ಲಿರುತ್ತದೆ.

## 23 ಉಪ-ವಲಯಗಳ ನೀತಿಗಳು

ಕರ್ನಾಟಕ ರಾಜ್ಯ ಸರ್ಕಾರ ಅನೇಕ ವಿಧವಾದ ಉಪ-ವಲಯ ನೀತಿಗಳನ್ನು ಈ ವಿಷಯ ಕುರಿತು ರೂಪಿಸಿದೆ. ಪ್ರೋತ್ಸಾಹಗಳು / ಇತರ ಸೌಲಭ್ಯಗಳ ಬಗ್ಗೆ ತಿಳಿದುಕೊಳ್ಳಲು ಈ ಸಮಗ್ರ ನೀತಿಯನ್ನು ಕೆಳಗೆ ನಮೂದಿಸಿರುವ ನೀತಿಗಳ ಜೊತೆಯಲ್ಲಿ ಓದಿಕೊಳ್ಳಬೇಕಾಗುತ್ತದೆ.

- ಕರ್ನಾಟಕ ಕೃಷಿ ಕಾರ್ಯನೀತಿ 2006
- ಕರ್ನಾಟಕ ಕೈಗಾರಿಕಾ ಕಾರ್ಯನೀತಿ 2009-14
- ಕರ್ನಾಟಕ ರಾಜ್ಯ ಮೂಲಭೂತ ಸೌಕರ್ಯಗಳ ಕಾರ್ಯನೀತಿ 2007

- ಕರ್ನಾಟಕ ರಾಜ್ಯ ಸಾವಯವ ಕೃಷಿ ಕಾರ್ಯನೀತಿ 2004
- ಕರ್ನಾಟಕ ದ್ರಾಕ್ಷಿ ಸಂಸ್ಕರಣೆ ಮತ್ತು ವೈನ್ (ದ್ರಾಕ್ಷಾ ರಸ) ಕಾರ್ಯನೀತಿ, 2007
- ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ ಮತ್ತು ಅಭಿವೃದ್ಧಿ) ಕಾಯ್ದೆ, 1966

## 24 ಇತರ ಸಂಬಂಧಿತ ನೀತಿಗಳು

24.1 ಭಾರತ ಸರ್ಕಾರವು ಕೃಷಿ ಮತ್ತು ಕೃಷಿ ಸಂಬಂಧಿತ ವಲಯಗಳಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಗೆ ಅನುವು ಮಾಡಿಕೊಡಲು ಹಲವು ನೀತಿಗಳನ್ನು ರೂಪಿಸಿರುತ್ತದೆ. ಇದಲ್ಲದೇ ಕೃಷಿ ಮಂತ್ರಾಲಯ APEDA, MPEDA, ರಾಷ್ಟ್ರೀಯ ತೋಟಗಾರಿಕಾ ಮಂಡಳಿ, ರಾಷ್ಟ್ರೀಯ ತೋಟಗಾರಿಕೆ ಮಿಷನ್ ಮುಂತಾದ ಸಂಸ್ಥೆಗಳಿಂದ ಸಹಾಯಧನ / ಅನುದಾನ ಹಾಗೂ ಹಲವಾರು ಯೋಜನೆಗಳು ಲಭ್ಯವಿವೆ. ಹೆಚ್ಚಿನ ಮಾಹಿತಿಗಾಗಿ ಸಂಬಂಧಿತ ದಾಖಲೆಗಳನ್ನು ಪರಾಮರ್ಷಿಸಲು ಶಿಫಾರಸ್ಸು ಮಾಡಲಾಗಿದೆ.